# ಕರ್ನಾಟಕ ಮಾಹಿತಿ ಆಯೋಗ

## ವಾರ್ಷಿಕ ವರದಿ 2007–08

# ಕೃತಜ್ಞತೆಗಳು

1. *ಇದು ಕರ್ನಾಟಕ ಮಾಹಿತಿ ಆಯೋಗದ ಮೂರನೇ ವಾರ್ಷಿಕ ವರದಿ. ಈ ವರದಿಯ ನ್ನು ತಯಾರಿಸಲು ಸಾವಿರಾರು ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಂದ, ಪ್ರಥಮ ಅಪೀಲು ಪ್ರಾಧಿಕಾರಗಳಿಂದ ಮತ್ತು ರಾಜ್ಯವ್ಯಾಪ್ತಿ ಇರುವ ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಇಲಾಖೆಗಳು ನೀಡಿದ ಮಾಹಿತಿಗಳಿಗನುಸಾರವಾಗಿ ರಾಜ್ಯದಲ್ಲಿರುವ ಸಾರ್ವಜನಿಕ ಪ್ರಾಧಿಕಾರಗಳ ಒಟ್ಟು ಸಂಖ್ಯೆಯು 65815 ಆಗಿದ್ದು, ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಒಟ್ಟು ಸಂಖ್ಯೆಯು 74,086 ಆಗಿದೆ.*

2. *ಯಾವುದೇ ಮಾನದಂಡದಿಂದ ನೋಡಿದರೂ ಇದು ಒಂದು ಬೃಹತ್ ಕಾರ್ಯಸಾಧನೆಯಾಗಿದೆ ಮತ್ತು ಈ ವರದಿಯ ತಯಾರಿಕೆ ಸಾಧ್ಯವಾಗಿಸಲು ಪಾಲುದಾರರಾದ ಎಲ್ಲರ ಕೊಡುಗೆಯನ್ನು ಸ್ಮರಿಸುವುದು ಕಷ್ಟಸಾಧ್ಯವಾಗಿದೆ. ಆದರೆ, ಪ್ರಾರಂಭದಲ್ಲಿ, ಎರಡು ಪ್ರಮುಖ ಸಂಸ್ಥೆಗಳಾದ – ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಸಂಸ್ಥೆ ಮತ್ತು ಸಾರ್ವಜನಿಕ ಪ್ರಾಧಿಕಾರಗಳ ಸಂಸ್ಥೆಗಳು ಮಾಹಿತಿ ಆಧಾರಗಳನ್ನು ಸೃಜಿಸುವಲ್ಲಿ ಮತ್ತು ಸಂಕಲಿಸುವಲ್ಲಿ ನೀಡಿದ ಕೊಡುಗೆಗಳಿಗೆ ನಾವು ಕೃತಜ್ಞರಾಗಿರಲೇಬೇಕು.*

3. *ರಾಷ್ಟ್ರೀಯ ಮಾಹಿತಿ ಸೂಚನಾ ಕೇಂದ್ರ ಅಧಿಕಾರಿಗಳು, ಅವರು ಮಾಹಿತಿಗಳ ಸಂಗ್ರಹಣೆ ಮಾಡುವುದು ಮಾತ್ರವಲ್ಲದೇ ಈ ವರದಿಯನ್ನು ತಯಾರಿಸುವ ಪ್ರತಿಯೊಂದು ಹಂತದಲ್ಲೂ ಜೊತೆಜೊತೆಗೆ ಅತ್ಯುತ್ತಮ ಕಾರ್ಯ ನಿರ್ವಹಿಸಲು ಶ್ರಮಿಸಿದ್ದಾರೆ. ಈ ವರದಿಯನ್ನು ಭಾಷಾಂತರಿಸುವಲ್ಲಿ ಕರ್ನಾಟಕ ಸರ್ಕಾರದ ಭಾಷಾಂತರ ಇಲಾಖೆಯ ನಿರ್ದೇಶಕರು ಮತ್ತು ಸಿಬ್ಬಂದಿವರ್ಗದವರು ನೀಡಿದ ಅಮೂಲ್ಯ ಸಹಕಾರ, ಕೊಡುಗೆಗೆ ನಾವು ಋಣಿಯಾಗಿದ್ದೇವೆ.*

4. *ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಅವರ ತಂಡದವರಾದ – ಸರ್ಕಾರದ ವಿವಿಧ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ಅಗತ್ಯವಿರುವ ವಿಷಯ ಸಂಗ್ರಹಣೆಗಳನ್ನು ಒದಗಿಸಿದ್ದಕ್ಕಾಗಿ ಅಭಿನಂದನಾರ್ಹರಾಗಿರುತ್ತಾರೆ. ಈ ವರದಿಯನ್ನು ಅಂದವಾಗಿ ರೂಪಿಸುವಲ್ಲಿ ಕರ್ನಾಟಕ ಸರ್ಕಾರದ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಇಲಾಖೆಯ ನಿರ್ದೇಶಕರು ಮತ್ತು ಅವರ ಸಿಬ್ಬಂದಿವರ್ಗದವರು ವಹಿಸಿದ ಪಾತ್ರಕ್ಕೆ ನಮ್ಮ ಅಭಿನಂದನೆಗಳನ್ನು ಸಲ್ಲಿಸಲೇಬೇಕು.*

5. *ಆಯೋಗದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗವು ಎಲ್ಲಾ ವಿಷಯ ಸಂಗ್ರಹಣೆಗಳನ್ನು ಒಟ್ಟುಗೂಡಿಸಿ ಲಭ್ಯವಾಗುವಂತೆ ಮಾಡಿ ಅವಶ್ಯಕವಾಗಿ ಬೇಕಾದ ವಿಷಯ ಸಂಗ್ರಹಣೆಗಳನ್ನು ಮೂಲಾಧಾರ ಸಹಿತ ಪ್ರಾರಂಭಿಸಿ, ಅವು ಎಲ್ಲಿಂದ ಪ್ರಾರಂಭಗೊಂಡವು ಎಂಬುವುದರೊಂದಿಗೆ ಈ ವರದಿಯಲ್ಲಿನ ಕೊನೆಯ ಪದದ ಬೆರಳಚ್ಚಿನವರೆಗಿನ ಎಲ್ಲಾ ಕಾರ್ಯಪ್ರಗತಿಗಳನ್ನು ಸಾಮಾನ್ಯ ಸ್ವೀಕೃತಿ ರಿಜಿಸ್ಟರಿನಲ್ಲಿ ತೋರಿಸುವ ಪ್ರಶಂಸನೀಯ ಕಾರ್ಯ ನಿರ್ವಹಿಸಿರುತ್ತಾರೆ.*

(ಜೆ.ಎಸ್. ವಿರೂಪಾಕ್ಷಯ್ಯ) (ಡಾ॥ ಹೆಚ್.ಎನ್. ಕೃಷ್ಣ) (ಕೆ.ಎ. ತಿಪ್ಪೇಸ್ವಾಮಿ) (ಕೆ.ಕೆ. ಮಿಶ್ರ)
ರಾಜ್ಯ ಮಾಹಿತಿ ಆಯುಕ್ತರು ರಾಜ್ಯ ಮಾಹಿತಿ ಆಯುಕ್ತರು ರಾಜ್ಯ ಮಾಹಿತಿ ಆಯುಕ್ತರು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

**ವಿಷಯ ಸೂಚಿಗಳು**


| **ಅಧ್ಯಾಯ ಸಂಖ್ಯೆ** | **ವಿವರಗಳು** | **ಪುಟ ಸಂಖ್ಯೆ** |
|---|---|---|
| I | ಪೀಠಿಕೆ | |
| II | ಸಂಗತಿಗಳು | |
| III | ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿ ಹಕ್ಕು ಅಧಿನಿಯಮದ 4 (1) (ಎ) ಮತ್ತು 4 (1) (ಬಿ) ಪ್ರಕರಣಗಳ ಉಪಬಂಧಗಳೊಂದಿಗಿನ ಅನುಸರಣೆ | |
| IV | ಸಾಮಾನ್ಯ ಮಾಹಿತಿ (ವೆಚ್ಚ, ಪರಿಹಾರ ದಂಡ, ಉಚ್ಚ ನ್ಯಾಯಲಯದ ಮುಂದೆ ಇರುವ ಆಕ್ಷೇಪಣೆಗಳು ಮತ್ತು ಹೊರಗಿನ ಉಪವೇಶನಗಳು (ಸಂಚಾರಿ ಪೀಠ) | |
| V | ಅಂಕಿಅಂಶಗಳ (ಮಾಹಿತಿಗಳ) ವಿಶ್ಲೇಷಣೆ | |
| VI | ಶಿಫಾರಸ್ಸುಗಳು | |
| | **ಅನುಬಂಧ** | |

# ಅಧ್ಯಾಯ – I
# ಪೀಠಿಕೆ

1.1 ಆಯೋಗವು, ಈ ವರದಿಯನ್ನು ಮಾಹಿತಿಹಕ್ಕು ಅಧಿನಿಯಮ, 2005ರ 25ನೇ ಪ್ರಕರಣದ ಅಡಿಯಲ್ಲಿ ಈ ಮುಂದಿನಂತೆ ಸಿದ್ಧಪಡಿಸಿದೆ:

(1) ಸಂದರ್ಭಾನುಸಾರ ಕೇಂದ್ರ ಮಾಹಿತಿ ಆಯೋಗ ಅಥವಾ ರಾಜ್ಯ ಮಾಹಿತಿ ಆಯೋಗವು, ಪ್ರತಿವರ್ಷದ ಕೊನೆಯಲ್ಲಿ ಕಾರ್ಯಸಾಧ್ಯವಾದಷ್ಟು ಬೇಗನೇ ಆ ವರ್ಷದಲ್ಲಿ ಈ ಅಧಿನಿಯಮದ ಉಪಬಂಧಗಳ ಅನುಷ್ಠಾನಗೊಳಿಸಿದ್ದರ ಮೇಲೆ ವರದಿಯನ್ನು ಸಿದ್ಧಪಡಿಸುತ್ತದೆ ಮತ್ತು ಅದರ ಪ್ರತಿಯನ್ನು ಸಮುಚಿತ ಸರ್ಕಾರಕ್ಕೆ ಕಳುಹಿಸುತ್ತದೆ.

(2) ಈ ಪ್ರಕರಣದ ಅಡಿಯಲ್ಲಿ ವರದಿಯನ್ನು ಸಿದ್ಧಪಡಿಸಲು ಅಗತ್ಯವಾಗಿರುವಂತೆ ಸಚಿವಾಲಯವು ಅಥವಾ ಪ್ರತಿಯೊಂದು ಇಲಾಖೆಯು, ತಮ್ಮ ಅಧಿಕಾರವ್ಯಾಪ್ತಿಯೊಳಗೆ ಬರುವ ಸಾರ್ವಜನಿಕ ಪ್ರಾಧಿಕಾರಗಳಿಗೆ ಸಂಬಂಧಪಟ್ಟಂತೆ, ಸಂದರ್ಭಾನುಸಾರ ಕೇಂದ್ರ ಮಾಹಿತಿ ಆಯೋಗಕ್ಕೆ ಅಥವಾ ರಾಜ್ಯ ಮಾಹಿತಿ ಆಯೋಗಕ್ಕೆ ಅಂಥ ಮಾಹಿತಿಗಳನ್ನು ಸಂಗ್ರಹಿಸಿ ಒದಗಿಸತಕ್ಕದ್ದು ಮತ್ತು ಆ ಮಾಹಿತಿಯನ್ನು ಒದಗಿಸಲು ಸಂಬಂಧಪಟ್ಟ ಅಗತ್ಯತೆಗಳೊಂದಿಗೆ ಒತ್ತಾಯಿಸುವುದು ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ ದಾಖಲೆಗಳನ್ನು ಇಡುವುದು:

(3) ಪ್ರತಿಯೊಂದು ವರದಿಯನ್ನು, ಯಾವ ವರ್ಷಕ್ಕೆ ಸಂಬಂಧಪಟ್ಟದ್ದೆಂದು ತಿಳಿಸತಕ್ಕದ್ದು:

(ಎ) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಮಾಡಿದ ಕೋರಿಕೆಗಳ ಸಂಖ್ಯೆ

(ಬಿ) ಕೋರಿಕೆಗಳನ್ನು ಅನುಸರಿಸಿ ದಸ್ತಾವೇಜುಗಳಿಗೆ ಪ್ರವೇಶಾವಕಾಶಕ್ಕೆ ಅರ್ಜಿದಾರರಿಗೆ ಹಕ್ಕಿರುವುದಿಲ್ಲವೆಂದು ತೀರ್ಮಾನಿಸಲಾದವುಗಳ ಸಂಖ್ಯೆ. ಈ ತೀರ್ಮಾನಗಳನ್ನು ಈ ಅಧಿನಿಯಮದ ಯಾವ ಉಪಬಂಧಗಳ ಅಡಿಯಲ್ಲಿ ಮಾಡಲಾಯಿತು ಮತ್ತು ಅಂಥ ಉಪಬಂಧಗಳನ್ನು ಎಷ್ಟು ಸಲ ಆಹ್ವಾನಿಸಲಾಯಿತು.

(ಸಿ) ಅಪೀಲುಗಳ ಸ್ವರೂಪ ಮತ್ತು ಅಪೀಲುಗಳ ಪರಿಣಾಮದ ಪುನರವಲೋಕನ ಮಾಡುವುದಕ್ಕಾಗಿ ಸಂದರ್ಭಾನುಸಾರ ಕೇಂದ್ರ ಮಾಹಿತಿ ಆಯೋಗಕ್ಕೆ ಅಥವಾ ರಾಜ್ಯ ಮಾಹಿತಿ ಆಯೋಗಕ್ಕೆ ಉಲ್ಲೇಖಿಸಲಾದ ಅಪೀಲುಗಳ ಸಂಖ್ಯೆ:

(ಡಿ) ಈ ಅಧಿನಿಯಮದ ನಿರ್ವಹಣೆಯ ಸಂಬಂಧದಲ್ಲಿ ಯಾವೊಬ್ಬ ಅಧಿಕಾರಿಯ ವಿರುದ್ಧ ಕೈಗೊಂಡ ಯಾವುದೇ ಶಿಸ್ತು ಕ್ರಮದ ವಿವರಗಳು

(ಇ) ಈ ಅಧಿನಿಯಮದ ಅಡಿಯಲ್ಲಿ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರದಿಂದ ಸಂಗ್ರಹಿಸಲಾದ ಶುಲ್ಕಗಳ ಮೊಬಲಗು:

(ಎಫ್) ಈ ಅಧಿನಿಯಮದ ನಿರ್ವಹಣೆ ಮತ್ತು ಅನುಷ್ಠಾನದ ಹಿಂದಿರುವ ಮನೋಭಾವ ಮತ್ತು ಉದ್ದೇಶಕ್ಕೆ ಸಾರ್ವಜನಿಕ ಪ್ರಾಧಿಕಾರವು ಮಾಡಿದ ಪ್ರಯತ್ನವನ್ನು ತೋರಿಸುವ ಯಾವುದೇ ಸಂಗತಿಗಳು;

(ಜಿ) ಆ ಅಧಿನಿಯಮಕ್ಕೆ ಅಥವಾ ಇತರೆ ಶಾಸನ ಅಥವಾ ಸಾಮಾನ್ಯ ಕಾನೂನುಗಳಿಗೆ ಅಥವಾ ಮಾಹಿತಿ ಪ್ರವೇಶಾವಕಾಶದ ಹಕ್ಕನ್ನು ನಿರ್ವಹಿಸುವುದಕ್ಕೆ ಸಂಬಂಧಪಟ್ಟಂತೆ ಇತರ ಯಾವುದೇ ವಿಷಯಕ್ಕಾಗಿ ಅಭಿವೃದ್ಧಿ, ಪ್ರಗತಿ, ಆಧುನೀಕರಣ, ಸುಧಾರಣೆ ಅಥವಾ ತಿದ್ದುಪಡಿ ಮಾಡಲು ಅಥವಾ ನಿರ್ದಿಷ್ಟ ಸಾರ್ವಜನಿಕ ಪ್ರಾಧಿಕಾರಗಳ ಸಂಬಂಧದಲ್ಲಿನ ಶಿಫಾರಸುಗಳೂ ಒಳಗೊಂಡಂತೆ ಸುಧಾರಣೆಗಾಗಿನ ಶಿಫಾರಸುಗಳು.

(4) ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಪ್ರತಿವರ್ಷದ ಮುಕ್ತಾಯದ ತರುವಾಯ (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಕಾರ್ಯಸಾಧ್ಯವಾದಷ್ಟು ಬೇಗನೇ, ಸಂದರ್ಭಾನುಸಾರ ಕೇಂದ್ರ ಮಾಹಿತಿ ಆಯೋಗದ ಅಥವಾ ರಾಜ್ಯ ಮಾಹಿತಿ ಆಯೋಗದ ವರದಿಯ ಒಂದು ಪ್ರತಿಯನ್ನು ತಯಾರಿಸಿ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅಥವಾ ಉಭಯ ಸದನಗಳಿದ್ದಲ್ಲಿ, ಸಂದರ್ಭಾನುಸಾರ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ/ರಾಜ್ಯ ವಿಧಾನಮಂಡಲದ ಒಂದು ಸದನವಿದ್ದಲ್ಲಿ ಆ ಸದನದ ಮುಂದೆ ಮಂಡಿಸಬಹುದು.

(5) ಈ ಅಧಿನಿಯಮದ ಅಡಿಯಲ್ಲಿ ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಸಂಬಂಧಪಟ್ಟಂತೆ ಒಂದು ಸಾರ್ವಜನಿಕ ಪ್ರಾಧಿಕಾರದ ಆಚರಣೆಯು ಈ ಅಧಿನಿಯಮದ ಉಪಬಂಧಗಳು ಅಥವಾ ಮನೋಭಾವದೊಂದಿಗೆ ಸ್ಥಿರೀಕರಣವಾಗದಿರುವುದು, ಸಂದರ್ಭಾನುಸಾರ ಕೇಂದ್ರ ಮಾಹಿತಿ ಆಯೋಗಕ್ಕೆ ಅಥವಾ ರಾಜ್ಯ ಮಾಹಿತಿ ಆಯೋಗಕ್ಕೆ ಕಂಡುಬಂದಲ್ಲಿ, ಅಂಥ ಸ್ಥಿರೀಕರಣದ ಪ್ರವರ್ತನೆಗಾಗಿ ತನ್ನ ಅಭಿಪ್ರಾಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ನಿರ್ದಿಷ್ಟಪಡಿಸಿ ಶಿಫಾರಸ್ಸನ್ನು ಪ್ರಾಧಿಕಾರಕ್ಕೆ ನೀಡಬಹುದು.

1.2 ಈ ವರದಿಗಳನ್ನು ತಯಾರಿಸುವಲ್ಲಿ ಸ್ವಲ್ಪ ವಿಳಂಬವಾಗಿದೆ. ಇತ್ತೀಚೆಗೆ ಸದನದ ಪೀಠದ ಮುಂದೆ ಮಂಡಿಸಲಾದ ವರದಿಪತ್ರಗಳ ಮೇಲೆ ಈ ವಿಷಯವನ್ನು ಪರಿಗಣನೆಗೆ ಕೈಗೆತ್ತಿಕೊಳ್ಳಲಾಗಿದೆ. ಈ

ವಿಳಂಬಕ್ಕೆ, ಆಯೋಗಕ್ಕೆ ಸರ್ಕಾರದ ಇಲಾಖೆಗಳಿಂದ ಅಗತ್ಯ ಮಾಹಿತಿಗಳನ್ನು ಸಲ್ಲಿಸುವಲ್ಲಿ ಅಗಿರುವ ವಿಳಂಬವೇ ಮುಖ್ಯ ಕಾರಣವಾಗಿದೆ.

1.3 ಸರ್ಕಾರದ ಇಲಾಖೆಗಳು, ಅದರಲ್ಲೂ ವಿಶೇಷವಾಗಿ, ಈ ಇಲಾಖೆಗಳ ಅಡಿಯಲ್ಲಿ ಬರುವ ಸಾರ್ವಜನಿಕ ಪ್ರಾಧಿಕಾರಗಳ ಸಂಖ್ಯೆಯು ಅತಿ ಹೆಚ್ಚಾಗಿರುವುದರಿಂದ, ಅಗತ್ಯ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಮತ್ತು ಸಂಕಲಿಸುವಲ್ಲಿ ಸಾಕಷ್ಟು ತೊಂದರೆಗಳನ್ನು ಎದುರಿಸಬೇಕಾಯಿತು.

1.4 ಪ್ರತಿಯೊಂದು ಇಲಾಖೆಯ ಅಡಿಯಲ್ಲಿನ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳನ್ನು ಗುರುತಿಸುವುದೇ ಒಂದು ಪ್ರಮುಖ ಸಮಸ್ಯೆಯಾಗಿರುತ್ತದೆ. ಉದಾಹರಣೆಗೆ,– ಮಾಹಿತಿ ಹಕ್ಕು ಅಧಿನಿಯಮ, 2005ರ ಉದ್ದೇಶಕ್ಕಾಗಿ ರಾಜ್ಯದಲ್ಲಿನ ಎಲ್ಲ ಸಹಕಾರೀ ಸಂಘಗಳ ರಿಜಿಸ್ಟ್ರಾರ್ ಅವರು ಪ್ರಾರಂಭದಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದರು. ಆದಾಗ್ಯೂ, ಕರ್ನಾಟಕ ಉಚ್ಚ ನ್ಯಾಯಾಲಯದ ತರುವಾಯದ ತೀರ್ಪುಗಳಿಗೆ (ರಿಟ್ ಅರ್ಜಿ ಸಂಖ್ಯೆ 16901/06, ದಿನಾಂಕ: 30.6.2008) ಅನುಸಾರವಾಗಿ ಸಹಕಾರೀ ಬ್ಯಾಂಕುಗಳೂ ಸೇರಿದಂತೆ ಸಹಕಾರೀ ಸಂಘಗಳು (ಅವುಗಳು ಸರ್ಕಾರದಿಂದ ಗಣನೀಯ ಹಣಕಾಸು ಹೂಡಿದ್ದ ಹೊರತು) ಅಧಿನಿಯಮದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳಾಗುವುದಿಲ್ಲ. (ಆದಾಗ್ಯೂ, ಮದ್ರಾಸ್ ಉಚ್ಚ ನ್ಯಾಯಾಲಯವು, ಸಹಕಾರೀ ಸಂಘಗಳು ಸಾರ್ವಜನಿಕ ಪ್ರಾಧಿಕಾರಗಳೆಂದು ತೀರ್ಮಾನಿಸಿದೆ), ಮುಂದುವರೆದು, ಕೇರಳ ಉಚ್ಚನ್ಯಾಯಾಲಯವು ತನ್ನ ಆದೇಶದಲ್ಲಿ (ಆದೇಶ ಸಂ: ಕೆಎಲ್ ಟಿ 507/2008) ಎಲ್ಲಾ ಸಹಕಾರೀ ಸಂಘಗಳು ಮಾಹಿತಿ ಹಕ್ಕು ಅಧಿನಿಯಮದ 2 (ಹೆಚ್) ಪ್ರಕರಣದ ಅಡಿಯಲ್ಲಿ ಬರುತ್ತವೆ ಎಂದು ಹೇಳಿದೆ.

1.5 ಸರ್ಕಾರದ ಅನುದಾನ ಪಡೆಯುತ್ತಿರುವ ಖಾಸಗೀ ಶಿಕ್ಷಣ ಸಂಸ್ಥೆಗಳೂ ಸಹ ತಾವು ಸಾರ್ವಜನಿಕ ಪ್ರಾಧಿಕಾರಗಳಲ್ಲವೆಂದು ಕ್ಲೈಮು ಮಾಡಿವೆ. ಆದರೆ, ಇದುವರೆಗೂ ಆಯೋಗವು, ಅಂಥ ಸಂಸ್ಥೆಗಳಿಗೆ ಸರ್ಕಾರವು ಗಣನೀಯ ನೆರವನ್ನು ನೀಡುತ್ತಿರುವುದರಿಂದ, ಅವುಗಳು ಈ ಅಧಿನಿಯಮದ ಅಡಿಯಲ್ಲಿನ ಸಾರ್ವಜನಿಕ ಪ್ರಾಧಿಕಾರಗಳ ಪರಿಭಾಷೆಯೊಳಗೆ ಬರುತ್ತವೆ ಎಂದು ಹೇಳಿದೆ. ಮದ್ರಾಸ್ ಉಚ್ಚನ್ಯಾಯಾಲಯವು, ಮಾನ್ಯತೆ ಪಡೆದ ಖಾಸಗಿ ಶಾಲೆಗಳು ಸರ್ಕಾರೇತರ ಸಂಸ್ಥೆಗಳಾಗಿದ್ದು ಆದರೆ ಗಣನೀಯವಾಗಿ ಹಣಕಾಸಿನ ನೆರವು/ಅನುದಾನ ಪಡೆಯುತ್ತಿರುವ ಶಾಲೆಗಳು ಆಗಿರುವುದರಿಂದ ಅಂತಹವುಗಳು ಮಾಹಿತಿ ಹಕ್ಕು ಅಧಿನಿಯಮ, 2005ರ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಬರುತ್ತವೆ ಎಂದು ತಿಳಿಸಿದೆ.

1.6 ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಬೆಂ.ಅ.ವಿ.ನಿ.ನಿ)ವು ಸರ್ಕಾರದಿಂದ ಸಾಕಷ್ಟು ಹಣಕಾಸು ನೆರವನ್ನು ಪಡೆಯುತ್ತಿರುವುದರಿಂದ ಅದೂ ಸಹ ಸಾರ್ವಜನಿಕ ಪ್ರಾಧಿಕಾರವೆಂದು

ಆಯೋಗವು ಹೇಳಿದೆ. ತರುವಾಯದ ಒಂದು ಪ್ರತ್ಯೇಕ ತೀರ್ಮಾನದಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯವು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತವು ಸಂವಿಧಾನದ 16ನೇ ಅನುಚ್ಛೇದದ ಉದ್ದೇಶಕ್ಕಾಗಿ ನಿರೂಪಿಸಲಾಗಿದೆ ಮತ್ತು ಅದು ನ್ಯಾಯಾಲಯಗಳ ರಿಟ್ ಅಧಿಕಾರವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದು ಹೇಳಿದೆ.

1.7 ಇತ್ತೀಚೆಗೆ, ಈ ಆಯೋಗವು, ಸ್ವತಃ ತಮ್ಮದೇ ದಾಖಲೆಗಳನ್ನು ನಿರ್ವಹಿಸುತ್ತಿರುವ / ದಾಖಲೆ ಕೊಠಡಿಗಳನ್ನು ಹೊಂದಿರುವ ಸರ್ಕಾರಿ ಕಚೇರಿಗಳ ಎಲ್ಲಾ ಮುಖ್ಯಸ್ಥರು, ಅಧಿನಿಯಮದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳೆಂದು ಘೋಷಿಸಿ ಸ್ಪಷ್ಟೀಕರಣ ನೀಡಿದೆ. ಈ ತೀರ್ಮಾನವು ವ್ಯಾಪಕ ಪರಿಣಾಮವನ್ನುಂಟುಮಾಡಿತು. ಆದಾಗ್ಯೂ, ಇದು ಸರ್ಕಾರಿ ಕಾರ್ಯನಿರ್ವಾಹಕತೆಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳನ್ನು ಗುರುತಿಸುವುದಕ್ಕೆ ಸುಲಭ ಮಾರ್ಗವನ್ನು ಕಲ್ಪಿಸಿದೆ. ಆದಾಗ್ಯೂ, ಸರ್ಕಾರಿ ಇಲಾಖೆಗಳು ಈ ಸ್ಪಷ್ಟೀಕರಣಕ್ಕೆ ಅನುಸಾರವಾಗಿ ತಮ್ಮ ನಿಯಂತ್ರಣದ ಅಡಿಯಲ್ಲಿನ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳನ್ನು ಗುರುತಿಸಿ ಪಟ್ಟಿಮಾಡುವುದು ಅಗತ್ಯವಾಗಿದೆ.

1.8 ಹೊಸದಾಗಿ ಗುರುತಿಸಲಾದ ಈ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು, ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳನ್ನು ಪಾಲಿಸುವುದು ಅವಶ್ಯಕವಾಗಿರುತ್ತದೆ. ಅಧಿನಿಯಮದ 4 (1) (ಬಿ) ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳು ತಾವಾಗಿಯೇ ಘೋಷಣೆಯೊಂದನ್ನು ಪ್ರಕಟಿಸಲು ಅಗತ್ಯಪಡಿಸಲಾಗಿದ್ದು, ಅದು ಇತರೆ ವಿಷಯಗಳ ಜೊತೆಗೆ ತನ್ನ ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಹಾಗೂ ತೀರ್ಮಾನ ಕೈಗೊಳ್ಳುವ ಕಾರ್ಯವಿಧಾನದಲ್ಲಿ ಅನುಸರಿಸುವ ಕ್ರಮ ಮತ್ತು ತನ್ನ ಪ್ರಕಾರ್ಯಗಳ ಬಿಡುಗಡೆಗಾಗಿ ಸೂತ್ರಗಳನ್ನು ನಿರೂಪಿಸುವುದನ್ನು ಒಳಗೊಳ್ಳುತ್ತದೆ. ಸ್ವಇಚ್ಛೆಯಿಂದ ಬಹಿರಂಗಪಡಿಸುವ ಈ ಅಂಶವು 'ನಾಗರಿಕ ಸನ್ನದಿ'ಗೆ ಹೆಚ್ಚಿನ ಸಂಬಂಧ ಹೊಂದಿದೆ. ಆದ್ದರಿಂದ, ಬೇರೆಬೇರೆ ಭೌಗೋಳಿಕ ಪ್ರದೇಶಗಳಲ್ಲಿರುವ ಒಂದೇ ತೆರನಾದ ಪದನಾಮಗಳನ್ನು ಹೊಂದಿರುವ ಇಲಾಖೆಯ ಸಾರ್ವಜನಿಕ ಪ್ರಾಧಿಕಾರಗಳು ಸ್ವಇಚ್ಛೆಯಿಂದ ಬಹಿರಂಗಪಡಿಸುವಂಥ ಅಂಶಗಳಲ್ಲಿ ಏಕರೂಪತೆ ಇರಬೇಕೆಂದು ಆಯೋಗವು ಅಭಿಪ್ರಾಯಪಡುತ್ತದೆ. ಉದಾಹರಣೆಗೆ, ಜಿಲ್ಲೆಗಳ, ಜಿಲ್ಲಾಧಿಕಾರಿಗಳ ಪ್ರಕಾರ್ಯಗಳು, ಜವಾಬ್ದಾರಿಗಳು ಮತ್ತು ಗುಣಮಟ್ಟಗಳು ಮುಂತಾದವುಗಳು ರಾಜ್ಯದಾದ್ಯಂತ ಹೆಚ್ಚೂ ಕಡಿಮೆ ಒಂದೇ ಆಗಿರಬೇಕು. ಆದ್ದರಿಂದ ಆಯೋಗವು, ನಾಗರಿಕ ಸನ್ನದಿನ ಸ್ವರೂಪದಂಥ ದಸ್ತಾವೇಜುಗಳ ಕರಡನ್ನು ಸಿದ್ಧಪಡಿಸುವುದಕ್ಕಾಗಿ ನಿರಂತರ ಕಾರ್ಯಾಗಾರಗಳನ್ನು ಏರ್ಪಡಿಸುವುದಕ್ಕೆ ಬೆಂಬಲ ನೀಡಲು ಉದ್ದೇಶಿಸಿದೆ.

1.9 ಈ ಅಧಿನಿಯಮದ ಮೇರೆಗೆ ಬಹಿರಂಗಪಡಿಸಬಹುದಾದ ಮಾಹಿತಿಗೆ ಸಂಬಂಧಪಟ್ಟಂತೆ ವಿವಿಧ ನ್ಯಾಯಾಲಯಗಳು ಮತ್ತು ಆಯೋಗಗಳು ಬಹುಮುಖ್ಯ ಆದೇಶಗಳನ್ನು ಸಹಾ ಮಾಡಿವೆ. ಕೇರಳ ಉಚ್ಚನ್ಯಾಯಾಲಯವು, ಮಹತ್ವದ ತೀರ್ಪೊಂದರಲ್ಲಿ, ಸಂವಿಧಾನದ 19ನೇ ಅನುಚ್ಛೇದದ ಮೇರೆಗೆ ಮಾಹಿತಿ ಪಡೆಯುವ ಹಕ್ಕಿಗೆ ಮಾನ್ಯತೆ ನೀಡಲಾಗಿದೆಯೆಂದು ಮತ್ತು ಅಧಿನಿಯಮದ ಉಪಬಂಧಗಳು ಗರಿಷ್ಠ ಪ್ರಮಾಣದಲ್ಲಿ ಮಾಹಿತಿಯನ್ನು ಬಹಿರಂಗಪಡಿಸುವುದನ್ನು ಮತ್ತು ಕನಿಷ್ಠ ಪ್ರಮಾಣದ ವಿನಾಯಿತಿಗಳನ್ನು ಸುನಿಶ್ಚಿತಗೊಳಿಸುತ್ತದೆಂದು ತೀರ್ಪು ನೀಡಿದೆ. ತನ್ಮೂಲಕ ಬಹಿರಂಗಪಡಿಸುವಿಕೆಯು ನಿಯಮವಾಗಿದ್ದು ಒಂದು ಮಾಹಿತಿಯನ್ನು ನಿರ್ದಿಷ್ಟವಾಗಿ ವಿನಾಯಿತಿಗೊಳಿಸದಿದ್ದ ಹೊರತು ಅದನ್ನು ಒದಗಿಸಲೇಬೇಕಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ದೃಢಪಡಿಸಿದೆ.

1.10 ವೈಯಕ್ತಿಕ ಮಾಹಿತಿಯ ನೀಡಿಕೆಯ ಸಂದರ್ಭದಲ್ಲಿಯೂ ಸಹ, ಅಂಥ ಮಾಹಿತಿಯನ್ನು ಬಹಿರಂಗಪಡಿಸುವುದು ಸಾರ್ವಜನಿಕ ಹಿತಾಸಕ್ತಿಯನ್ನು ಸಮರ್ಥಿಸುವುದೇ, ಇಲ್ಲವೇ ಎಂಬ ಬಗ್ಗೆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅಥವಾ ಅಪೀಲು ಪ್ರಾಧಿಕಾರಿಯು ಮನದಟ್ಟು ಮಾಡಿಕೊಂಡು ಅಂತಿಮ ನಿರ್ಣಯ ಕೈಗೊಳ್ಳುವುದರ ಮೇಲೆ ಅವಲಂಬಿತವಾಗಿರುತ್ತದೆ ಎಂದು ಮದರಾಸು ಉಚ್ಚ ನ್ಯಾಯಾಲಯವು ತೀರ್ಪು ನೀಡಿದೆ.

1.11 ವಿದ್ಯಾರ್ಥಿಗಳು ಮತ್ತು ಅಭ್ಯರ್ಥಿಗಳು ತಮ್ಮ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ನೋಡಲು ಅವಕಾಶ ಕಲ್ಪಿಸಿಕೊಟ್ಟ ಮೊಟ್ಟಮೊದಲ ಆಯೋಗ ಇದಾಗಿದೆ. ತರುವಾಯ, ಕೊಲ್ಕತ್ತಾ ಉಚ್ಚ ನ್ಯಾಯಾಲಯವು, ಪ್ರೀತಂ ರೂಜ್–ವಿರುದ್ಧ– ಕೊಲ್ಕತ್ತಾ ವಿಶ್ವವಿದ್ಯಾನಿಲಯ ಮತ್ತು ಇತರರ ಪ್ರಕರಣದಲ್ಲಿ ಪರೀಕ್ಷೆ ಬರೆದವನಿಗೆ ಮೌಲ್ಯಮಾಪನವಾಗಿರುವ ಉತ್ತರ ಪತ್ರಿಕೆಗಳನ್ನು ನೋಡುವ ಅವಕಾಶವಿರಬೇಕು ಎಂದು ತೀರ್ಪು ನೀಡಿದೆ. ಮಾಹಿತಿಯನ್ನು ಪಡೆಯಲು ನಾಗರಿಕರಿಗೆ ಇರುವ ಹಕ್ಕಿನೊಂದಿಗೆ ಅಧಿನಿಯಮವು ಪ್ರಾರಂಭವಾಗುತ್ತದೆ ಮತ್ತು ಅವನಿಗೆ ಆ ಮಾಹಿತಿಯನ್ನು ಒದಗಿಸುವ ಅಥವಾ ಈ ಅಧಿನಿಯಮದ ಮೂಲಕ ಗುರುತಿಸಿರುವ ಕಾರಣಗಳ ಮೇಲೆ ಅವನ ಮನವಿಯನ್ನು ನ್ಯಾಯಯುತವಾಗಿ ತಿರಸ್ಕರಿಸುವುದರೊಂದಿಗೆ ಅಧಿನಿಯಮವು ಮುಕ್ತಾಯವಾಗುತ್ತದೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಮಾಹಿತಿಯನ್ನು ಒದಗಿಸುವುದಕ್ಕೆ ಮುಂಚೆ ಏನಾಗಿತ್ತು ಮತ್ತು ಮಾಹಿತಿ ಒದಗಿಸಿದಾಗ ಅಥವಾ ಅದನ್ನು ನ್ಯಾಯಯುತವಾಗಿ ನಿರಾಕರಿಸಿದಾಗ ಪರಿಣಾಮವೇನಾಗಬಹುದು ಎಂಬುದು ಅಧಿನಿಯಮದ ಕಾರ್ಯಾಚರಣೆಗೆ ಒಳಪಡದ ವಿಷಯವಾಗಿದೆ.

1.12 ಸರ್ಕಾರಿ ನೌಕರರ ಆಸ್ತಿಗಳು ಮತ್ತು ಹೊಣೆಗಾರಿಕೆಗಳಿಗೆ ಸಂಬಂಧಪಟ್ಟ ಮಾಹಿತಿಯ ಸಂಬಂಧದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು, ಈ ಮೊದಲು, ಈ ಅಧಿನಿಯಮದ ಅಡಿಯಲ್ಲಿ ಈ

ಮಾಹಿತಿಯನ್ನು ಒದಗಿಸಲು ಸಾಧ್ಯವಿಲ್ಲವೆಂದು ಆದೇಶವನ್ನು ಮಾಡಿತ್ತು, (ರಿಟ್ ಅರ್ಜಿ ಸಂಖ್ಯೆ. 10663/ 2006 ದಿನಾಂಕ 1.7.2008). ಆದರೆ, ತರುವಾಯದ ತೀರ್ಪಿನಲ್ಲಿ (ರಿಟ್ ಅರ್ಜಿ ಸಂಖ್ಯೆ. 7953/ 2007 ದಿನಾಂಕ 16.07.2008) ಈ ಆದೇಶವನ್ನು ವಿಪರ್ಯಾಯಗೊಳಿಸಿ, ಸದರಿ ಮಾಹಿತಿಯನ್ನು ಒದಗಿಸಲೇಬೇಕೆಂದು ತೀರ್ಪು ನೀಡಿದೆ.

1.13 ಇಂತಹ ಪ್ರಮುಖ ತೀರ್ಮಾನಗಳನ್ನು ದಾಖಲಿಸಿಡುವ ಮತ್ತು ಅವುಗಳು ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾರ್ಗದರ್ಶನಕ್ಕಾಗಿ ದೊರೆಯುವಂತೆ ಮಾಡುವ ತುರ್ತು ಅಗತ್ಯವಿದೆಯೆಂದು ಆಯೋಗವು ಅಭಿಪ್ರಾಯಪಡುತ್ತದೆ.

1.14 ಆಯೋಗದಿಂದ ಈ ವಾರ್ಷಿಕ ವರದಿಗಳನ್ನು ಪ್ರಕಟಿಸುವಲ್ಲಿ ವಿಳಂಬ ಉಂಟಾದ ಕಾರಣ, ಉಲ್ಲೇಖಿತ ಅವಧಿಯ ಕೆಲವು ತೀರ್ಮಾನಗಳು/ ಮಾಹಿತಿಯು ಅಪ್ರಸ್ತುತವೆನಿಸಬಹುದು. ಆದ್ದರಿಂದ ಆಯೋಗವು, ತನ್ನ ವರದಿಗಳಲ್ಲಿ ಒಳಗೊಂಡಿರುವ ಮಾಹಿತಿಯು ಸಾಧ್ಯವಾದಷ್ಟು ಮಟ್ಟಿಗೆ, ವರದಿಯನ್ನು ಸಂಕಲಿಸುವ ದಿನಾಂಕದಂದು ಲಭ್ಯವಿರುವ ತಾಜಾ ಮಾಹಿತಿಯಾಗಿರಬೇಕೆಂದು ತೀರ್ಮಾನಿಸಿದೆ.

1.15 ಆಯೋಗವನ್ನು ಬಹುಮಟ್ಟಿಗೆ 'ಕಾಗದ ಬಳಕೆ ರಹಿತ ಕಚೇರಿ'ಯನ್ನಾಗಿ ಮಾಡಲು, ಆಯೋಗವು ಭಾರತ ಸರ್ಕಾರದ ನೆರವಿನೊಂದಿಗೆ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಹ ನಿರ್ಧರಿಸಿದೆ. ಒಮ್ಮೆ ಈ ಯೋಜನೆಯು ಕಾರ್ಯಾರಂಭವಾದರೆ, ಅದು ಆಯೋಗದ ಕೆಲಸ ಕಾರ್ಯಗಳನ್ನು ಸುವ್ಯವಸ್ಥಿತಗೊಳಿಸಲು, ಕೆಲಸದ ಪದ್ಧತಿಗಳನ್ನು ಸುಧಾರಿಸಲು ಮತ್ತು ಆಯೋಗದ ಜಾಲ ತಾಣದಲ್ಲಿ (ವೆಬ್‌ಸೈಟ್‌ನಲ್ಲಿ) ಹೆಚ್ಚು ಹೆಚ್ಚು ಮಾಹಿತಿ ಲಭ್ಯವಾಗುವಂತೆ ಮಾಡಲು ನೆರವಾಗುವುದು.

1.16 ಎರಡು ಏಜೆನ್ಸಿಗಳು, ಎಂದರೆ, ಎನ್.ಐ.ಸಿ. (ನ್ಯಾಷನಲ್ ಇನ್‌ಫರ್‌ಮ್ಯಾಟಿಕ್ಸ್ ಕಮೀಷನ್) ಮತ್ತು ಸಿಜಿಜಿ (ಸೆಂಟರ್ ಫಾರ್ ಗುಡ್ ಗವರ್ನೆನ್ಸ್, ಹೈದರಾಬಾದ್) – ಇವು ಆಯೋಗಕ್ಕೆ ತನ್ನ ವ್ಯವಸ್ಥೆಯನ್ನು (ಸಿಸ್ಟಮ್) ಮತ್ತು ತನ್ನ ವೆಬ್‌ಸೈಟನ್ನು ವಿನ್ಯಾಸಗೊಳಿಸಲು ಮತ್ತು ಸುಧಾರಿಸಲು ಸಾಕಷ್ಟು ನೆರವು ನೀಡಿವೆ. ಆ ಸಂಸ್ಥೆಗಳು ನೀಡಿದ ನೆರವು ಮತ್ತು ಬೆಂಬಲಕ್ಕಾಗಿ ಈ ಸಂದರ್ಭದಲ್ಲಿ ಆಯೋಗವು ಅವರುಗಳಿಗೆ ಧನ್ಯವಾದಗಳನ್ನು ತಿಳಿಸಲುಬಯಸುತ್ತದೆ.

1.17 ಆಯೋಗವು, 'ಮಾಹಿತಿ ಹಕ್ಕಿನ' ಕಾರ್ಯಸಾಧನೆಗಾಗಿ ತನ್ನ ಅಪಾರ ಬೆಂಬಲವನ್ನು ನೀಡಿದ್ದಕ್ಕಾಗಿ ರಾಜ್ಯ ಸರ್ಕಾರಕ್ಕೆ ಮತ್ತು ಅದರಲ್ಲೂ ವಿಶೇಷವಾಗಿ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಸುಧಾಕರ್ ರಾವ್ ಅವರಿಗೆ ಮತ್ತು ಅಪರ ಮುಖ್ಯ ಕಾರ್ಯದರ್ಶಿಯವರಾದ ಶ್ರೀಮತಿ ವತ್ಸಲ ವತ್ಸ ಅವರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಜನಸ್ಪಂದನ) ಪ್ರಧಾನ ಕಾರ್ಯರ್ಶಿಯವರಾದ ಶ್ರೀ ತಪನ್ ಸೇನಾಪತಿಯವರಿಗೆ ಸಹ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

0–0–0–0–0–0

# ಅಧ್ಯಾಯ – II

**ವರದಿಯ ವರ್ಷದ ಅವಧಿಯಲ್ಲಿನ ಪ್ರಮುಖ ಘಟನಾವಳಿಗಳು**

2.1 2007–08ನೇ ಸಾಲಿನಲ್ಲಿ, ರಾಜ್ಯ ಮತ್ತು ರಾಷ್ಟ್ರಮಟ್ಟಗಳೆರಡರಲ್ಲೂ ಮಾಹಿತಿ ಹಕ್ಕಿಗೆ ಸಂಬಂಧಿಸಿದಂತೆ ನಡೆದ ಕೆಲವು ಪ್ರಮುಖ ಘಟನಾವಳಿಗಳನ್ನು ಈ ಮುಂದೆ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ.

**ಮಾಹಿತಿ ಹಕ್ಕು ಅಧಿನಿಯಮ, 2005ರ ಬಗ್ಗೆ 'ಮಾಹಿತಿ ಪಡೆಯುವ ಜನರ ಹಕ್ಕಿನ ರಾಷ್ಟ್ರೀಯ ಆಂದೋಲನ' ವಿಷಯವಾಗಿ 2007ರ ಸೆಪ್ಟೆಂಬರ್ 29 ಮತ್ತು 30 ರಂದು ನವದೆಹಲಿಯಲ್ಲಿ ನಡೆಸಿದ ರಾಷ್ಟ್ರೀಯ ಪರಿಶೀಲನಾ ಸಭೆಯ ವಿವರ ಹೀಗಿದೆ:**

**2.2** 2005ರ ಮಾಹಿತಿ ಹಕ್ಕು ಅಧಿನಿಯಮವು ಜಾರಿಯಾಗುತ್ತಿರುವ ಬಗ್ಗೆ ಮಾಹಿತಿ ಪಡೆಯುವ ಜನರ ಹಕ್ಕಿನ ರಾಷ್ಟ್ರೀಯ ಆಂದೋಲನವು (ಎನ್.ಸಿ.ಪಿ.ಆರ್ಐ) 2007ರ ಸೆಪ್ಟೆಂಬರ್ 29 ಮತ್ತು 30 ರಂದು ನವದೆಹಲಿಯ ಸಂಸ್ಕೃತಿ ಆನಂದ ಗ್ರಾಮದಲ್ಲಿ ರಾಷ್ಟ್ರೀಯ ಪರಿಶೀಲನಾ ಸಭೆ ನಡೆಸಿತು. ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಕೆ. ಮಿಶ್ರಾ ಮತ್ತು ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ ಅವರು ರಾಷ್ಟ್ರೀಯ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡಿದ್ದರು. ಎನ್.ಸಿ.ಪಿ.ಆರ್.ಐ ಭಾರತದಾದ್ಯಂತ ವಿವಿಧ ರಾಜ್ಯಗಳಲ್ಲಿ 2005ರ ಮಾಹಿತಿ ಹಕ್ಕು ಅಧಿನಿಯಮವು ಜಾರಿಯಾಗುತ್ತಿರುವ ವಸ್ತುಸ್ಥಿತಿಯನ್ನು ವಿಶ್ಲೇಷಿಸಲು ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಿಸಿತು. ನಾಗರಿಕರ ಸನ್ನದು ವರದಿಯಲ್ಲಿ ಪರಿಶೀಲನೆಯ ವಿವರಗಳನ್ನು ಅಳವಡಿಸಿ ಚರ್ಚೆಗಾಗಿ ಮಂಡಿಸಲಾಯಿತು. ಈ ನಿರ್ಣಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು, ಮಾಹಿತಿ ಹಕ್ಕಿನ 2 ವರ್ಷಗಳು – ಪ್ರಜಾಪ್ರಭುತ್ವ ಭಾರತದಲ್ಲಿ ಮಾಹಿತಿ ಹಕ್ಕಿನ ಉಪಯುಕ್ತತೆ ಮತ್ತು ಅದರ ಪರಿಣಾಮ, ಕುಂದುಕೊರತೆಗಳ ನಿವಾರಣಾ ಮಾಧ್ಯಮವಾಗಿ ಮಾಹಿತಿಹಕ್ಕಿನ ಉಪಯೋಗ, ಭ್ರಷ್ಟಾಚಾರ ಬಯಲುಗೊಳಿಸುವಿಕೆ, ಸಾಮಾಜಿಕ ಲೆಕ್ಕ ಪರಿಶೋಧನೆಗೆ ಆಧಾರಗಳು ಮತ್ತು ಸಬಲೀಕರಣದ ಪರಿಣಾಮ, ಮುಂತಾದ ಅಂಶಗಳ ಬಗ್ಗೆ ಚರ್ಚೆ ಕೇಂದ್ರೀಕೃತವಾಗಿತ್ತು. 2007ರ ಸೆಪ್ಟೆಂಬರ್ 29 ರಂದು, ಮಾಹಿತಿ ಹಕ್ಕು ಅಧಿನಿಯಮದ ಜಾರಿಗೆ ಸಂಬಂಧಪಟ್ಟ ವಿವಿಧ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳ ಮಾಹಿತಿ ಆಯುಕ್ತರಗಳೊಂದಿಗೆ ಚರ್ಚಿಸುವುದಕ್ಕಾಗಿ ಒಂದು ವಿಶೇಷ ಸಭೆಯನ್ನು ನಡೆಸಲಾಯಿತು. ಅದರಲ್ಲಿ ಕಳೆದ ಎರಡು ವರ್ಷಗಳಲ್ಲಿ ಆಗಿರುವ ಅನುಭವ ಮತ್ತು ಕಲಿತ ಅಂಶಗಳು ಮಾಹಿತಿ ಆಯೋಗಗಳಿಗೆ ಸಂಬಂಧಪಟ್ಟ ವಿವಾದಾಂಶಗಳ ಬಗ್ಗೆ ಚರ್ಚಿಸಲಾಯಿತು.

2.3 ನೆಹರು ಮೆಮೊರಿಯಲ್ ಮ್ಯೂಸಿಯಂ ಅಂಡ್ ಲೈಬ್ರರಿ, ತೀನಮೂರ್ತಿ ಭವನ – ಇಲ್ಲಿ "ಸತ್ಯಾಗ್ರಹವಾಗಿ ಮಾಹಿತಿ ಹಕ್ಕು ಕುರಿತು ಒಂದು ವಿಶೇಷ ಸಭೆಯನ್ನು ನಡೆಸಲಾಯಿತು. ಪಶ್ಚಿಮ ಬಂಗಾಳದ

ರಾಜ್ಯಪಾಲರಾದ ಶ್ರೀ ಗೋಪಾಲಗಾಂಧಿಯವರು ಮುಖ್ಯ ಭಾಷಣವನ್ನು ಮಾಡಿ ಸತ್ಯಾಗ್ರಹದ ತತ್ತ್ವಗಳ ಮತ್ತು ಸತ್ಯಾಗ್ರಹದ ಸಾಧನವಾಗಿ ಮಾಹಿತಿ ಹಕ್ಕಿನ ಬಳಕೆಯ ಬಗ್ಗೆ ಬೆಳಕನ್ನು ಚೆಲ್ಲಿದರು. ಇದರಲ್ಲಿ ಭಾಗವಹಿಸಿದ ಶ್ರೀ ಪ್ರಭಾಕರ್ ಜೋಷಿ, ಶ್ರೀಮತಿ ಅರುಣಾರಾಯ್ ಮತ್ತು ಪ್ರೊಫೆಸರ್ ಮೃಚೂಲ ಮುಖರ್ಜಿ ಇವರುಗಳು ಮಾಹಿತಿ ಹಕ್ಕು ಮತ್ತು ಅದರ ಅನುಷ್ಠಾನದ ಬಗ್ಗೆ ವ್ಯಾಖ್ಯಾನ ಮಾಡಿದರು. ಭಾರತದ ಮಾಜಿ ಪ್ರಧಾನಮಂತ್ರಿ ದಿ. ವಿ.ಪಿ.ಸಿಂಗ್ ಇವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

2.4 ಎರಡನೆ ದಿನದಂದು, ಪ್ರಜಾಪ್ರಭುತ್ವಕ್ಕೆ ಅಪಾಯಗಳು, ಮಾಹಿತಿ ಹಕ್ಕುಗಳಿಗೆ ಸವಾಲುಗಳ ಹರವುಗಳು, ರಾಜ್ಯಗಳ ಮೂಲಕ ಮಾಹಿತಿ ಹಕ್ಕಿನ ಅನುಷ್ಠಾನ ಕುರಿತಂತೆ ನಿರೂಪಣೆ, ಪ್ರತಿಯೊಂದು ರಾಜ್ಯಕ್ಕಾಗಿ ಮುಂದಿನ ಕಾರ್ಯತಂತ್ರಗಳು ಮತ್ತು ಕ್ರಮದ ಮುನ್ನಡೆಯ ಯೋಜನೆಗಳಂತಹ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

2.5 ರಾಷ್ಟ್ರೀಯ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿದವರಲ್ಲಿ ಮುಖ್ಯವಾಗಿ ಶ್ರೀ ಸೈಲೇಶ್ ಗಾಂಧಿ, ಶ್ರೀಮತಿ ಅರುಣ ಕಾರ್ಯ, ಶೇಕರ್ ಸಿಂಗ್ ಮತ್ತು ಶ್ರೀ ನಿಖಿಲ್ ಡೇ, ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ, ಶ್ರೀ ಎ.ಎನ್ ವರ್ಮಾ, ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರು ಮತ್ತು ಮಾಹಿತಿ ಆಯುಕ್ತರುಗಳು ಮತ್ತು ರಾಜ್ಯ ಮಾಹಿತಿ ಆಯೋಗಗಳ ಮುಖ್ಯ ಮಾಹಿತಿ ಆಯುಕ್ತರುಗಳು ಮತ್ತು ಮಾಹಿತಿ ಆಯುಕ್ತರುಗಳು ಸೇರಿದಂತೆ ವಿವಿಧ ರಾಜ್ಯಗಳಿಂದ ಬಂದಿದ್ದ ಕಾರ್ಯಕರ್ತರು ಇದ್ದರು.

**2007ರ ಅಕ್ಟೋಬರ್ 17ರಂದು ರಾಜ್ಯದ ಮುಖ್ಯ ಮಾಹಿತಿ ಆಯುಕ್ತರುಗಳು ಮತ್ತು ಮಾಹಿತಿ ಆಯುಕ್ತರುಗಳೊಂದಿಗೆ ಕೇಂದ್ರ ಮಾಹಿತಿ ಆಯೋಗದ ಸಮ್ಮೇಳನ**

2.6 ಕೇಂದ್ರ ಮಾಹಿತಿ ಆಯೋಗ ಮತ್ತು ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು 2007ರ ಅಕ್ಟೋಬರ್, 17ರಂದು ನವದೆಹಲಿಯ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್ ಆಡಿಟೋರಿಯಂ – ಇಲ್ಲಿ ಮುಖ್ಯ ಮಾಹಿತಿ ಆಯುಕ್ತರು ಮತ್ತು ಮಾಹಿತಿ ಆಯುಕ್ತರುಗಳೊಂದಿಗೆ ಕೇಂದ್ರ ಮಾಹಿತಿ ಆಯೋಗದ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಈ ಸಮಾರಂಭವು ನವದೆಹಲಿಯ ಕೇಂದ್ರ ಮಾಹಿತಿ ಆಯೋಗ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ವಜ್ಹತೆ ಹಬ್ಬಿಬುಲ್ಲಾ – ಇವರ ಸ್ವಾಗತ ಭಾಷಣದೊಂದಿಗೆ ಪ್ರಾರಂಬವಾಯಿತು. ಈ ಸಮ್ಮೇಳನದಲ್ಲಿ ನಾಲ್ಕು ಪರಸ್ಪರ ಕಾರ್ಯ ನಿರ್ವಹಿಸುವ ಬಗೆಗಿನ ಸಭೆಗಳು ನಡೆದವು.

2.7 ಮೊದಲ ಸಭೆಯನ್ನು "4ನೇ ಪ್ರಕರಣದ ಜಾರಿ" ಎಂಬ ವಿಷಯಕ್ಕೆ ಮೀಸಲಿಡಲಾಗಿತ್ತು. ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ವಜ್ಹಲ್ ಹಬೀಬುಲ್ಲಾರವರು "4ನೇ ಪ್ರಕರಣದ ಜಾರಿ" ಕುರಿತಂತೆ

ನಿರೂಪಿಸಿದರು. ಶ್ರೀಮತಿ ರಾಧ ಚವ್ಹಾಣ, ಪ್ರಧಾನ ಸಮಾಲೋಚಕರು ಎನ್.ಇ.ಜಿ.ಪಿ – ಪಿಎಂಯು, ಮಾಹಿತಿ ತಂತ್ರಜ್ಞಾನ ಇಲಾಖೆ– ಇವರು ಇ–ಜಿಲ್ಲಾ ಯೋಜನೆಗಳು ಕುರಿತಂತೆ ನಿರೂಪಿಸಿದರು.

2.8 ಎರಡನೆ ಸಭೆಯನ್ನು, ಮಾಹಿತಿ ಆಯೋಗಗಳಿಗೆ ಅಥವಾ ಸಂಬಂಧಿಸಿದ ಸ್ವಾಯತ್ತೆ ಮತ್ತು ಇತರ ಆಡಳಿತಾತ್ಮಕ ವಿಷಯಗಳಿಗೆ ಮೀಸಲಿಡಲಾಗಿತ್ತು. ಈ ಆರ್.ಎಸ್. ಮುಷಾಹರಿ, ಮುಖ್ಯ ಮಾಹಿತಿ ಆಯುಕ್ತರು, ಅಸ್ಸಾಂ ಮತ್ತು ಶ್ರೀ ಡಿ.ಕೆ. ಗಜ್ಮೆಲ್, ಮುಖ್ಯ ಮಾಹಿತಿ ಆಯುಕ್ತರು, ಸಿಕ್ಕಿಂ – ಇವರುಗಳು ಈ ವಿಷಯ ಕುರಿತಂತೆ ನಿರೂಪಣೆ ಮಾಡಿದರು.

2.9 ಮೂರನೆ ಸಭೆಯನ್ನು "ಅಧಿನಿಯಮದ ತೀರ್ಮಾನಗಳು ಮತ್ತು ದಂಡನೆಯ ಖಂಡಗಳ ಜಾರಿ" ಎಂಬ ವಿಷಯಕ್ಕೆ ಮೀಸಲಿಡಲಾಗಿತ್ತು. ಶ್ರೀ ವಿ.ವಿ. ಗಿರಿ, ರಾಜ್ಯ ಮಾಹಿತಿ ಆಯುಕ್ತರು, ಕೇರಳ ಮತ್ತು ಶ್ರೀ ವೆಂಕಟರತ್ನಂ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಗೋವಾ – ಇವರುಗಳು ಈ ವಿಷಯ ಕುರಿತಂತೆ ನಿರೂಪಿಸಿದರು.

2.10 ನಾಲ್ಕನೆ ಸಭೆಯನ್ನು "ಮಾಹಿತಿ ಹಕ್ಕಿನ ಆಡಳಿತದ ಮುಂದಿನ ಕ್ರಮವಾದ ಬೆಳವಣಿಗೆ" ಎಂಬ ವಿಷಯಕ್ಕೆ ಮೀಸಲಿಡಲಾಗಿತ್ತು. ಶ್ರೀ. ಎ.ಕೆ. ವಿಜಯವರ್ಗಿಯ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಛತ್ತೀಸ್ ಘಡ ಹಾಗೂ ತರುವಾಯ ಶ್ರೀ ತೊಲಿಯ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಉತ್ತರ ಖಂಡ, ಈ ವಿಷಯ ಕುರಿತಂತೆ ನಿರೂಪಿಸಿದರು.

2.11 ಮುಕ್ತಾಯದ ಸಭೆಯಲ್ಲಿ ಶ್ರೀ ಎ.ಎನ್. ತಿವಾರಿ ಕೇಂದ್ರ ಮಾಹಿತಿ ಆಯುಕ್ತ – ಇವರು ಶ್ರೀ ಸುರೇಶ್ ಪಚೌರಿ, ರಾಜ್ಯ ಸಚಿವರು, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಭಾರತ ಸರ್ಕಾರ ಇವರಿಗೆ ಪರಸ್ಪರ ಕಾರ್ಯ ನಡೆಸುವ ಬಗೆಗಿನ ಸಭೆಗಳ ಶಿಫಾರಸುಗಳ ಸಾರಾಂಶಗಳನ್ನು ಹೇಳಿದರು. ಶ್ರೀ ಸುರೇಶ ಪಚೌರಿ – ಇವರು ಸಮಾರೋಪ ಭಾಷಣವನ್ನು ಮಾಡಿದರು.

2.12 ಸಾಯಂಕಾಲ, ಸಭೆಯಲ್ಲಿ ಭಾಗವಹಿಸಿದ್ದವರು ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿಯವರನ್ನು ಭೇಟಿ ಮಾಡಿದರು.

**ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸೇಠ್ ಶಂಕರ್‌ಲಾಲ್ ಲಹೋಟಿ ಕಾನೂನು ಕಾಲೇಜು, ಗುಲ್ಬರ್ಗ ಮತ್ತು ಹೈದರಾಬಾದ್ ಕರ್ನಾಟಕ ಪರಿಸರ ಅರಿವು ಮತ್ತು ಸಂರಕ್ಷಣೆ ಸಂಸ್ಥೆ, ಗುಲ್ಬರ್ಗ – ಇವುಗಳಿಂದ ಗುಲ್ಬರ್ಗದಲ್ಲಿ 2008ರ ಫೆಬ್ರವರಿ 23ರಂದು ಮಾಹಿತಿ ಹಕ್ಕು ಅಧಿನಿಯಮ ಕುರಿತಂತೆ ಒಂದು ದಿನದ ಕಾರ್ಯಗಾರ:**

2.13 ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸೇಠ್ ಶಂಕರ್‌ಲಾಲ್ ಲಹೋಟಿ ಕಾನೂನು ಕಾಲೇಜು, ಗುಲ್ಬರ್ಗ ಮತ್ತು ಹೈದರಾಬಾದ್ ಕರ್ನಾಟಕ ಪರಿಸರ ಅರಿವು ಮತ್ತು ಸಂರಕ್ಷಣೆ ಸಂಸ್ಥೆ, ಗುಲ್ಬರ್ಗ

ಇವುಗಳು ಮಾಹಿತಿ ಹಕ್ಕು ಅಧಿನಿಯಮ ಕುರಿತಂತೆ ಗುಲ್ಬರ್ಗದಲ್ಲಿ 2008ರ ಫೆಬ್ರವರಿ 23ರಂದು ಒಂದು ದಿವಸದ ಕಾರ್ಯಾಗಾರವನ್ನು ಏರ್ಪಡಿಸಿದ್ದವು. ಈ ಶಿಬಿರವನ್ನು ಶ್ರೀ ಕೆ.ಕೆ. ಮಿಶ್ರಾ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಇವರಿಂದ ಉದ್ಘಾಟಿಸಲಾಯಿತು. ಈ ಕಾರ್ಯಾಗಾರದಲ್ಲಿ ರಾಜ್ಯ ಮಾಹಿತಿ ಆಯುಕ್ತರುಗಳು ಈ ಕಾರ್ಯಾಗಾರದ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿದ್ದರು.

2.14 ಈ ಕಾರ್ಯಾಗಾರದಲ್ಲಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳು, ಪರಿಸರವಾದಿಗಳು ಮತ್ತು ಸಾರ್ವಜನಿಕರು ಸಹ ಭಾಗವಹಿಸಿದ್ದರು. ಈ ಪರಿಸರವಾದಿಗಳು ಮತ್ತು ಇತರರು ಅಲ್ಲದೆ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ವರ್ಗವು ಸಹ ಮಾಹಿತಿ ಹಕ್ಕಿನ ಬಳಕೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅರಿವನ್ನು ಮೂಡಿಸುವುದಕ್ಕಾಗಿ ಈ ಶಿಬಿರವನ್ನು ಮಾರ್ಪಡಿಸುವಲ್ಲಿ ತೀವ್ರ ಆಸಕ್ತಿಯನ್ನು ತೋರಿಸಿತ್ತು.

**ಮಾಹಿತಿ ಹಕ್ಕು ಅಧಿನಿಯಮ ಕುರಿತಂತೆ 2008ರ ಮಾರ್ಚ್ 8ರಂದು ಬೆಂಗಳೂರಿನಲ್ಲಿ ರಾಷ್ಟ್ರೀಯ ಸಮನ್ವಯ ಸಮಿತಿಯ ಸಭೆ:**

2.15 ಮುಖ್ಯ ಮಾಹಿತಿ ಆಯುಕ್ತರುಗಳು ಮತ್ತು ರಾಜ್ಯ ಮಾಹಿತಿ ಆಯುಕ್ತರುಗಳ 2ನೇ ಸಮ್ಮೇಳನದಲ್ಲಿ ತೆಗೆದುಕೊಳ್ಳಲಾದ ತೀರ್ಮಾನದ ಅನುಸರಣೆಯಲ್ಲಿ, ಕೇಂದ್ರ ಮಾಹಿತಿ ಆಯೋಗವು, ಮಾಹಿತಿ ಅಧಿನಿಯಮ, 2005ಕ್ಕೆ ತಿದ್ದುಪಡಿಗಳನ್ನು ಸೂಚಿಸುವುದೂ ಸೇರಿದಂತೆ ಮಾಹಿತಿ ಆಯೋಗಗಳಿಂದ ನೀಡಲಾದ ಸಲಹೆಗಳು ಮತ್ತು ಶಿಫಾರಸುಗಳ ಅನುಷ್ಠಾನಕ್ಕೆ ಸಹಕರಿಸಲು ಒಂದು ಉಪ–ಸಮಿತಿಯನ್ನು ರಚಿಸಿದೆ.

2.16 ಹತ್ತು ಸದಸ್ಯರನ್ನೊಳಗೊಂಡ ಈ ಸಮಿತಿಯಲ್ಲಿ ಒಂಭತ್ತು ರಾಜ್ಯ ಮುಖ್ಯ ಮಾಹಿತಿ ಆಯುಕ್ತರುಗಳು ಮತ್ತು ಒಬ್ಬ ಕೇಂದ್ರ ಮಾಹಿತಿ ಆಯುಕ್ತರು ಇರುತ್ತಾರೆ. ಇದರಲ್ಲಿ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಕೆ. ಮಿಶ್ರಾ – ಇವರು ಸಹ ಒಬ್ಬ ಸದಸ್ಯರಾಗಿದ್ದಾರೆ. ಈ ಸಮಿತಿಯು ಅಲ್ಲಿ ವಿವಿಧ ರಾಜ್ಯಗಳ ರಾಜಧಾನಿಗಳಲ್ಲಿ ಅನೇಕ ಸಭೆಗಳನ್ನು ನಡೆಸಿದ್ದು ರಾಜ್ಯಗಳ ಮುಖ್ಯ ಮಾಹಿತಿ ಆಯುಕ್ತರುಗಳು ಮತ್ತು ಮಾಹಿತಿ ಆಯುಕ್ತರು – ಇವರೊಂದಿಗೆ ಪರಸ್ಪರ ಚರ್ಚಿಸಿರುತ್ತದೆ. ಅಂಥ ಒಂದು ಸಭೆಯನ್ನು 8.3.2008ರಂದು ಬೆಂಗಳೂರಿನ ಬಾಲಬ್ರೂಯಿ ಅತಿಥಿಗೃಹದಲ್ಲಿ ಏರ್ಪಡಿಸಲಾಗಿತ್ತು. ಸಮಿತಿಯು ಕೆಲವು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿತ್ತು. ಈ ಸಭೆಯಲ್ಲಿ ಎಲ್ಲಾ ಸಾರ್ವಜನಿಕರು, ಸರ್ಕಾರೇತರ ಸಂಘ ಸಂಸ್ಥೆಗಳು ಮಾಧ್ಯಮಗಳು, ಸಂಸ್ಥೆಗಳು ಅದರ ಪರಿಶೀಲನಾಂಶಗಳು ಕುರಿತಂತೆ ಅವರ ಸಲಹೆಗಳನ್ನು ನೀಡುವಂತೆ ಆಹ್ವಾನಿಸಲು ತೀರ್ಮಾನಿಸಲಾಯಿತು. ಮಾಹಿತಿ ಹಕ್ಕಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗಾಗಿ ರಾಷ್ಟ್ರೀಯ ಸಂಪನ್ಮೂಲ ಕೇಂದ್ರವನ್ನು

ಸ್ಥಾಪಿಸುವುದಕ್ಕಾಗಿ ಶಿಫಾರಸು ಮಾಡಲು ಸಹ ನಿರ್ಧರಿಸಲಾಯಿತು ಮತ್ತು ಅಂಥ ಕೇಂದ್ರವನ್ನು ಸ್ಥಾಪಿಸುವುದಕ್ಕಾಗಿ ಪ್ರಸ್ತಾವನೆಯನ್ನು ತಯಾರಿಸಲು ಸೆಂಟರ್ ಫಾರ್ ಗುಡ್ ಗವರ್ನೆನ್ಸ್, ಹೈದರಾಬಾದ್– ಇದನ್ನು ಕೋರಲಾಯಿತು. ಎಲ್ಲಾ ಸರ್ಕಾರಿ ಕಚೇರಿಗಳ ಆಧುನೀಕರಣ ಮತ್ತು ನಿರ್ವಹಣೆಯನ್ನು ಕೈಗೊಳ್ಳಲು ರಾಜ್ಯ ಮತ್ತು ಕೇಂದ್ರ ಸರ್ಕಾರ ಶಿಫಾರಸುಗಳನ್ನು ಮಾಡಲು ಸಹ ಸಮಿತಿಯು ತೀರ್ಮಾನಿಸಿತು. ಕೇಂದ್ರ ಮಾಹಿತಿ ಆಯೋಗ ಮತ್ತು ಎಲ್ಲಾ ರಾಜ್ಯ ಮಾಹಿತಿ ಆಯೋಗಗಳ ವೆಬ್‌ಸೈಟ್‌ಗಳಿಗೆ ಸಂಪರ್ಕದೊಂದಿಗೆ ರಾಷ್ಟ್ರೀಯ ಪ್ರವೇಶದ್ವಾರವನ್ನು ಸ್ಥಾಪಿಸಲು ಸಹ ಶಿಫಾರಸು ಮಾಡಲಾಯಿತು.

**ಮೈಸೂರಿನ ಜೆ.ಎನ್.ಎಸ್. ಕಾನೂನು ಕಾಲೇಜು ಮೂಲಕ 25 ಮತ್ತು 2007ರ ಫೆಬ್ರವರಿ 26ರಂದು ಮಾಹಿತಿ ಹಕ್ಕು, ಕೆಲಸದ ಸ್ಥಳದಲ್ಲಿನ ಲೈಂಗಿಕ ಕಿರುಕುಳ, ಭವಿಷ್ಯ ನಿಧಿ ಮತ್ತು ಸೇವಾ ಕಾನೂನುಗಳು ಕುರಿತಂತೆ ಎರಡು ದಿನಗಳ ಶಿಬಿರವನ್ನು ಏರ್ಪಡಿಸಲಾಗಿತ್ತು.**

2.17. ಮಾಹಿತಿ ಹಕ್ಕು, ಕೆಲಸ ನಿರ್ವಹಿಸುವ ಸ್ಥಳದಲ್ಲಿ ಲೈಂಗಿಕ *ಕಿರುಕು*ಳ, ಭವಿಷ್ಯ ನಿಧಿ ಹಾಗೂ ಸೇವಾ ಕಾನೂನುಗಳು ಕುರಿತಂತೆ ಕ್ರಿವಟ್, ಬೆಂಗಳೂರು ಇದರೊಂದಿಗೆ ಜೆಎಸ್‌ಎಸ್ ಕಾಲೇಜು, ಮೈಸೂರು ಇದರಿಂದ ಮೈಸೂರಿನಲ್ಲಿ 25ನೇ ಮತ್ತು 26ನೇ ಫೆಬ್ರವರಿ 2007 ರಂದು ಎರಡು ದಿವಸಗಳ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರವನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ. ಕೆ. ಮಿಶ್ರಾ ಇವರಿಂದ ಉದ್ಘಾಟಿಸಲಾಯಿತು. ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ. ಎ. ತಿಪ್ಪೆಸ್ವಾಮಿಯವರು ಸಹ ಈ ಕಾರ್ಯಾಗಾರದಲ್ಲಿ ಬಾಗವಹಿಸಿದ್ದರು.

2.18. ಈ ಕಾರ್ಯಾಗಾರದಲ್ಲಿ ಮುಖ್ಯವಾಗಿ ಜೆಎಸ್‌ಎಸ್ ವಿದ್ಯಾಪೀಠವು ನಡೆಸುವ ವಿವಿಧ ಶಿಕ್ಷಣ ಸಂಸ್ಥೆಗಳ ಸಾಂಸ್ಥಿಕ ಮುಖ್ಯಸ್ಥರು ಹಾಗೂ ವಿವಿಧ ಮಟ್ಟಗಳಲ್ಲಿನ ವಿದ್ಯಾಪೀಠದ ಅಧಿಕಾರಿಗಳು ಸಹ ಭಾಗವಹಿಸಿದ್ದರು. ಕಾನೂನಿನ ನಿರ್ದಿಷ್ಟ ನಿಬಂಧನೆಗಳ ಬಗ್ಗೆ ವಿದ್ಯಾರ್ಥಿಗಳು ಅಧ್ಯಾಪಕ ವರ್ಗ ಹಾಗೂ ಸಾರ್ವಜನಿಕರಿಗೆ ತಿಳಿಸಿಕೊಡುವಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜಿನಿಂದ ಕೈಗೊಂಡಿರುವ ಉಪಕ್ರಮಗಳು ಮತ್ತು ಪ್ರಯತ್ನಗಳನ್ನು ಶ್ಲಾಘಿಸಲಾಯಿತು.

0–0–0–0–0–0

## ಆಧ್ಯಾಯ–III

### ಸರ್ಕಾರದ ಪ್ರಾಧಿಕಾರಗಳಿಂದ ಮಾಹಿತಿ ಹಕ್ಕು ಅಧಿನಿಯಮದ 4 (1) (ಎ) ಮತ್ತು 4 (1) (ಬಿ) ಪ್ರಕರಣಗಳ ಉಪಬಂಧಗಳ ಪಾಲನೆ

**ಪೀಠಿಕೆ:**

**3.1.** ಮಾಹಿತಿ ಹಕ್ಕು ಅಧಿನಿಯಮದ 4ನೇ ಪ್ರಕರಣವನ್ನು ಇದರಲ್ಲಿ ನಾಗರಿಕರಿಗೆ ಸರ್ಕಾರದ ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ ಮೂಲ ಮಾಹಿತಿಯನ್ನು ಸ್ವಯಂಪ್ರೇರಿತವಾಗಿ ಬಹಿರಂಗಪಡಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಿರುವುದರಿಂದ ಆಧಿನಿಯಮದ ಜೀವಾಳವಾಗಿರುವುದಾಗಿ ಪರಿಗಣಿಸಲಾಗಿದೆ. ಅಧಿನಿಯಮವು 12ನೇ ಅಕ್ಟೋಬರ್ 2007 ರಿಂದ ಸಂಪೂರ್ಣವಾಗಿ ಜಾರಿಗೊಳ್ಳಬೇಕಾಗಿದ್ದರೂ ಇದಕ್ಕೆ ಮುಂಚೆಯೇ 4,5,12,13,14,15,16 ಮತ್ತು 17ನೇ ಪ್ರಕರಣಗಳಡಿಯ ಕೆಲವು ಶಾಸನಬದ್ಧ ಉಪಬಂಧಗಳು 15ನೇ ಜೂನ್ 2005 ರಿಂದ ಜಾರಿಗೆ ಬಂದಿದ್ದವು. ಹಾಗಾಗಿ, ಅಧಿನಿಯಮದಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೂಲ ಸೌಕರ್ಯವನ್ನು ಸೃಜಿಸಲು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು (ಪಿಐಒ) ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು (ಎಪಿಐಒ) ಹಾಗೂ ಪ್ರಥಮ ಅಪೀಲು ಪ್ರಾಧಿಕಾರಿಗಳನ್ನು ಪದನಾಮೀಕರಿಸಲು, ಮಾಹಿತಿ ಆಯೋಗಗಳನ್ನು ರಚಿಸಲು ಮತ್ತು ಅಧಿನಿಯಮದ ಅನುಷ್ಠಾನಕ್ಕಾಗಿ ಆಡಳಿತ ಸಿಬ್ಬಂದಿ ತರಬೇತಿಯನ್ನು ನೀಡಲು ಅವುಗಳಿಗೆ ಅಧಿಕ ಪೂರ್ವಸಿದ್ಧತೆಯ ಕಾಲಾವಕಾಶವನ್ನು ನೀಡಿತ್ತು.

3.2. ಆದರೂ, ಬಹು ಹೆಚ್ಚಿನ ಸರ್ಕಾರಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳು ಈ ಸಂಬಂಧವಾಗಿ ಸಕಾಲಿಕವಾಗಿ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಈ ಪೂರ್ವಸಿದ್ದತಾ ಅವಧಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳು ದಾಖಲೆಗಳ ಪಟ್ಟಿಯನ್ನು ತಯಾರಿಸುವ ಮತ್ತು ವಿಷಯ ಸೂಚಿಯನ್ನು ತಯಾರಿಸುವ ಹಾಗೂ ಪೂರ್ವ ನಿಯಮಕ ವಿಷಯಗಳ ಪ್ರಕಟಣೆಯ ಕಾರ್ಯಗಳಂಥ ತಮ್ಮ ಶಾಸನಬದ್ಧ ಕರ್ತವ್ಯಗಳನ್ನು ನೆರವೇರಿಸಲು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಕಾರ್ಯತ: ಬಹಳಷ್ಟು ಸಾರ್ವಜನಿಕ ಪ್ರಾಧಿಕಾರಗಳು ಹಾಗೆ ಮಾಡಲಿಲ್ಲ.

3.3 ಅಧಿನಿಯಮದ 4 (1)(ಎ) ಮತ್ತು 4(1) (ಬಿ) ಪ್ರಕರಣಗಳ ಉಪಬಂಧಗಳನ್ನು ಈ ಕೆಳಗೆ ಯಥಾವತ್ತಾಗಿ ನಿರೂಪಿಸಲಾಗಿದೆ.:

4(1) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು,–

(ಎ) ಈ ಅಧಿನಿಯಮದ ಅಡಿಯಲ್ಲಿ ಮಾಹಿತಿ ಹಕ್ಕಿಗಾಗಿ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಕ್ರಮಬದ್ಧ ಸೂಚಿಪಟ್ಟಿ ಮತ್ತು ಸೂಚೀಕರಣಗೊಂಡ ಅದರ ಎಲ್ಲಾ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಸೂಕ್ತ ಸಮಯದೊಳಗಾಗಿ ಮತ್ತು ಸಂಪನ್ಮೂಲಗಳ

ಲಭ್ಯತೆಗೊಳಪಟ್ಟು ಗಣಕೀಕರಣಕ್ಕೆ ಸೂಕ್ತವಾದ ಎಲ್ಲಾ ದಾಖಲೆಗಳನ್ನು ಗಣಕೀಕರಿಸುವಂತೆ ಮತ್ತು ಅಂತಹ ದಾಖಲೆಗಳು ಸುಲಭವಾಗಿ ದೊರೆಯುವಂತೆ ದೇಶಾದ್ಯಂತ ವಿವಿಧ ಸಿಸ್ಟಂಗಳಲ್ಲಿ ಸಂಪರ್ಕಜಾಲದ ಮೂಲಕ ಸಂಪರ್ಕ ಕಲ್ಪಿಸುವಂತೆ ಮಾಡತಕ್ಕದ್ದು.

(ಬಿ) ಈ ಅಧಿನಿಯಮವನ್ನು ಅಧಿನಿಯಮಿತಿಗೊಳಿಸಿದ ದಿನಾಂಕದಿಂದ ಒಂದುನೂರ ಇಪ್ಪತ್ತು ದಿನಗಳೊಳಗಾಗಿ,–

(i) ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳನ್ನು;

(ii) ಅದರ ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು

(iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು;

(iv) ಅದರ ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳನ್ನು;

(v) ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳನ್ನು;

(vi) ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿಯನ್ನು;

(vii) ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳನ್ನು;

(viii) ಮಂಡಲಿಗಳು, ಪರಿಷತ್‌ಗಳು ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಲಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಪಟ್ಟಿಕೆಯನ್ನು;

(ix) ಅದರ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆಯನ್ನು

(x) ಅದರ ವಿನಿಯಮಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನವನ್ನು

(xi) ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯವನ್ನು ;

(xii) ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು;

(xiii) ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳನ್ನು;

(xiv) ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸುವ ಮಾಹಿತಿಗೆ ಸಂಬಂಧಿಸಿದ ವಿವರಗಳನ್ನು;

(xv) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು ;

(xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳನ್ನು;

(xvii) ನಿಯಮಿಸಬಹುದಾದಂಥ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಅ ತರುವಾಯ ಪ್ರತಿವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ

– ಪರಿಷ್ಕರಿಸತಕ್ಕದ್ದು.

3.4. ಮಾಹಿತಿಯನ್ನು ಪಡೆಯುವುದಕ್ಕಾಗಿ ಈ ಅಧಿನಿಯಮದ ಉಪಯೋಗವನ್ನು ಕನಿಷ್ಠ ಪ್ರಮಾಣದಲ್ಲಿ ಅವಲಂಬಿಸುವ ಹಾಗೆ, ಅಂತರ್ಜಾಲವೂ ಸೇರಿದಂತೆ, ಅಂಥ ಮಾಹಿತಿಯನ್ನು ವಿವಿಧ ಸಂಪರ್ಕ ಸಾಧನಗಳ ಮೂಲಕ ನಿಯಮಿತ ಮಧ್ಯಂತರಗಳಲ್ಲಿ ಸ್ವಪ್ರೇರಣೆಯಿಂದ ಒದಗಿಸಲು ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು 4(1) (ಬಿ) ಪ್ರಕರಣದ ಅಗತ್ಯಗಳಿಗನುಸಾರವಾಗಿ ಕ್ರಮ ತೆಗೆದುಕೊಳ್ಳುವುದು ಅವುಗಳ ನಿರಂತರ ಪ್ರಯತ್ನವಾಗಿರತಕ್ಕದೆಂದು ಸಹ ಅಧಿನಿಯಮದಲ್ಲಿ ಹೇಳಲಾಗಿದೆ.

**ದಾಖಲೆಗಳ ನಿರ್ವಹಣೆ ಮತ್ತು ಉಸ್ತುವಾರಿ:**

**3**.5 ಈ ಅಧಿನಿಯಮದಲ್ಲಿ ದಾಖಲೆಗಳು, ದಸ್ತಾವೇಜುಗಳು, ಸುತ್ತೋಲೆಗಳು, ಆದೇಶಗಳು, ಕರಾರುಗಳು, ಕಾಗದಪತ್ರ ಮುಂತಾದವುಗಳನ್ನು ಮಾಹಿತಿ ಎಂಬುದಾಗಿ ಪರಿಭಾಷಿಸಲಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ, ಅರ್ಜಿದಾರರು ಅಂಥ ದಾಖಲೆಗಳು ಮತ್ತು ದಸ್ತಾವೇಜುಗಳನ್ನು ಒದಗಿಸುವಂತೆ ಕೇಳುತ್ತಾರೆ. ಅಂಥ ಸೌಕರ್ಯಗಳನ್ನು ಒದಗಿಸಲು ದಾಖಲೆಗಳ ಸರಿಯಾದ ನಿರ್ವಹಣೆ ಮತ್ತು ಉಸ್ತುವಾರಿಯು ಅತಿ ಮುಖ್ಯವಾದ ಕಾರ್ಯವಾಗಿದ್ದು ಸಾರ್ವಜನಿಕ ಪ್ರಾಧಿಕಾರ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸಹ ಅವು ಹೊಂದಿರುವ ದಾಖಲೆಗಳ ಬಗ್ಗೆ ನಾಗರಿಕರು ತಿಳಿದುಕೊಳ್ಳಲು ಸಾಧ್ಯವಾಗುವಂತೆ ಅಧಿನಿಯಮದಡಿ ಕೋರಲಾದ ಮಾಹಿತಿಯನ್ನು ಒದಗಿಸಬೇಕು. ಆದ್ದರಿಂದ, ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ಅದರ ಸುಪರ್ದಿನಲ್ಲಿ ಕ್ರಮಬದ್ಧ ಸೂಚಿಪಟ್ಟಿ ಮತ್ತು ಸೂಚೀಕರಣಗೊಂಡ ಎಲ್ಲಾ ದಾಖಲೆಗಳನ್ನು ನಿರ್ವಹಿಸಿಕೊಂಡು ಬರುವುದು ಅದರ ಮುಖ್ಯ ಕರ್ತವ್ಯವಾಗಿದೆ.

3.6. ಆದರೆ, ಕಾರ್ಯತ: ಬಹುಮಟ್ಟಿಗೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ದಾಖಲೆಗಳ ನಿರ್ವಹಣೆ ಮತ್ತು ಉಸ್ತುವಾರಿಯು ನಿರ್ಲಕ್ಷತೆಯ ಸ್ಥಿತಿಯಲ್ಲಿರುವುದು ಮುಂದುವರೆದಿದೆ.

3.7 ಎರಡನೆ ಆಡಳಿತ ಸುಧಾರಣಾ ಆಯೋಗವು ತನ್ನ ಪ್ರಥಮ ವರದಿಯಲ್ಲಿ ಅಭಿಪ್ರಾಯಪಟ್ಟಂತೆ ನಮ್ಮ ಮಾಹಿತಿ ವ್ಯವಸ್ಥೆಯಲ್ಲಿನ ಅತ್ಯಂತ ದುರ್ಬಲ ಕೊಂಡಿಯೆಂದರೆ ಒಟ್ಟಾರೆ ದಾಖಲೆ ನಿರ್ವಹಣೆಯಲ್ಲಿನ ನಿರ್ಲಕ್ಷ್ಯತೆ ದಾಖಲೆ ನಿರ್ವಹಣಾ ವ್ಯವಸ್ಥೆಯನ್ನು ಸುಧಾರಿಸಲು ಹಲವಾರು ಯತ್ನಗಳಿದ್ದಾಗ್ಯೂ ವಿಶೇಷವಾಗಿ ಕಂದಾಯ ಮತ್ತು ಮೋಜಣಿ ಇಲಾಖೆಗಳು ನಿರ್ವಹಿಸಿರುವ ಭೂ ದಾಖಲೆಗಳಿಂದ ಹೆಚ್ಚು ಅಪೇಕ್ಷಿತ ಫಲಿತಾಂಶಗಳಿಲ್ಲ, ಈ ದಾಖಲೆಗಳ ಪರಿಷ್ಕರಣೆ ಮತ್ತು ನಿರ್ವಹಣೆಯು ಸಮರ್ಪಕತೆಗೆ ದೂರವಾಗಿವೆ ಮತ್ತು ಅನೇಕ ಪ್ರಕರಣಗಳಲ್ಲಿ ಈ ದಾಖಲೆಗಳು ಅಸ್ತಿತ್ವದಲ್ಲೇ ಇಲ್ಲ. ಅಸ್ತತ್ವದಲ್ಲಿದ್ದರೂ, ಅವು ಅತೀ ಸಡಿಲವಾಗಿದೆ. ಪ್ರಸಕ್ತ, ರಾಜ್ಯದಲ್ಲಿ ದಾಖಲೆಗಳ ಸೃಜನೆ, ನಿರ್ವಹಣೆ, ಉಸ್ತುವಾರಿ, ಸಂರಕ್ಷಣೆ ಮತ್ತು ನಾಶ ಕುರಿತಂತೆ ಯಾವುದೇ ಕಾನೂನಿಲ್ಲ.

3.8 ಕರ್ನಾಟಕ ಸರ್ಕಾರ ಸಚಿವಾಲಯದ ಕಚೇರಿ ಕಾರ್ಯವಿಧಾನ ಕೈಪಿಡಿಯು, ಸಚಿವಾಲಯ ಸಂಘಟನೆಯ ಸಂರಚನೆ, ಅದರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳೊಂದಿಗೆ ಅದರ ಕಾರ್ಯ ನಿರ್ವಹಣೆ ಕಾರ್ಯ, ಪರಿಷ್ಕರಣೆ, ವಿಲೆ, ಮೇಲ್ವಿಚಾರಣೆ ನಮೂನೆಗಳು ಮತ್ತು ಕಾರ್ಯ ವಿಧಾನಗಳನ್ನು ನಿರೂಪಿಸುತ್ತದೆ ಮತ್ತು ರಾಜ್ಯ ಸಚಿವಾಲಯದ ಹೊರಗಿನ ಸರ್ಕಾರಿ ಕಚೇರಿಗಳಲ್ಲಿ ಅನುಸರಿಸುವ ಕಚೇರಿ ಕಾರ್ಯ ನಿಧಾನದ ಕಿರುಹೊತ್ತಿಗೆಯು ಎಲ್ಲಾ ಹಂತಗಳಲ್ಲಿನ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳನ್ನು ಒಳಗೊಂಡ ಕಚೇರಿ ಕಾರ್ಯ ವಿಧಾನಗಳು ಮತ್ತು ಪ್ರಕ್ರಿಯೆಗಳನ್ನು ನಿರ್ದಿಷ್ಟಪಡಿಸುತ್ತದೆ. ಆದರೆ ಕೈಪಿಡಿಯಲ್ಲಾಗಲೀ ಅಥವಾ ಕಿರುಹೊತ್ತಿಗೆಯಲ್ಲಾಗಲೀ ಸಾರ್ವಜನಿಕ ದಾಖಲೆಗಳು ಕಳೆದು ಹೋದ ಅಥವಾ ಹಾನಿಯಾದ

ಸಂದರ್ಭದಲ್ಲಿನ ಬಾಧ್ಯತೆಗಳು, ಹೊಣೆಗಾರಿಕೆಗಳು ಮತ್ತು ಕೈಗೊಳ್ಳುವ ಕ್ರಮದ ರೂಪುರೇಷೆಯನ್ನಾಗಲೀ ಅಥವಾ ವಿವರಣೆಯನ್ನಾಗಲೀ ಅದರಲ್ಲಿ ನಿರೂಪಿಸಿಲ್ಲ.

3.9 ಹಲವು ಸರ್ಕಾರಿ ಕಚೇರಿಗಳಲ್ಲಿರುವ ದಾಖಲೆ ಕೊಠಡಿಗಳು, ಗೋದಾಮುಗಳನ್ನು ಹೋಲುತ್ತಿದ್ದು ಅಲ್ಲಿ ಸಾರ್ವಜನಿಕ ದಾಖಲೆಗಳನ್ನು ಅಸ್ತವ್ಯಸ್ತವಾಗಿ ರಾಶಿ ಹಾಕಲಾಗಿದೆ. ದಾಖಲೆಗಳ ಸಮರ್ಪಕ ವ್ಯವಸ್ಥೆ ಇಲ್ಲ. ಆದ್ದರಿಂದ ಸುಸ್ಥಿತಿಗೆ ತರುವುದು ಅತ್ಯಂತ ಪ್ರಯಾಸಕರ ಮತ್ತು ಕಾಲಹರಣ ಕಾರ್ಯವಿಧಾನವಾಗಿದೆ.

3.10 ಯಾವುದೇ ದಾಖಲೆ/ದಸ್ತಾವೇಜು ಪತ್ತೆಯಾಗದಿರುವೆಡೆ ಆ ಲೋಪವು ನಿರ್ಧಿಷ್ಟ ಸಾರ್ವಜನಿಕ ಪ್ರಾಧಿಕಾರದ ನಿಯಮಗಳ ಉಪೇಕ್ಷೆಯೆಂದೇ ಹೇಳಬೇಕು. ದಾಖಲಾತಿಗಳ ನಷ್ಟಕ್ಕೆ ಸ್ಪಷ್ಟ ಜವಾಬ್ದಾರಿಯನ್ನು ವಹಿಸಬೇಕಿದೆ. ಆಯೋಗವು ಅಂತಹ ಎಲ್ಲ ಪ್ರಕರಣಗಳಲ್ಲಿ, (i) ಜವಾಬ್ದಾರಿ ವಹಿಸಲು ಆಂತರಿಕ ವಿಚಾರಣೆಯನ್ನು ನಡೆಸುವುದು ಮತ್ತು (ii) ಅಧಿಕಾರ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡುವುದು ಇವುಗಳ ಸಂಬಂಧದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತಿದೆ.

3.11 ದಾಖಲೆಗಳನ್ನು ಶೀಘ್ರವಾಗಿ ಪಡೆಯಲು ಅನುಕೂಲವಾಗುವಂತೆ ದಾಖಲೆ ಕೊಠಡಿಗಳ ಸ್ಥಿತಿಯನ್ನು ಸುಧಾರಿಸಲು ತುರ್ತು ಮತ್ತು ಶೀಘ್ರ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಅರ್ಜಿದಾರರು ಕೋರಿರುವ ಪ್ರಮುಖ ದಾಖಲೆಗಳು ಕಣ್ಮರೆಯಾಗಿರುವುದನ್ನು ಪಿಐಓ ಗಳು ಹೆಚ್ಚಾಗಿ ವರದಿ ಮಾಡುತ್ತಿದ್ದಾರೆ. ಭೂಮಿಗೆ ಸಂಬಂಧಪಟ್ಟಂತೆ ಇವುಗಳ ಸಂಖ್ಯೆಯು ಖಾಯಂ ದಾಖಲೆಗಳಾಗಿವೆ ಮತ್ತು ಅಂತಹ ದಾಖಲೆಗಳ ನಷ್ಟವು ವಂಚನೆಯ ಕ್ಲೇಮುಗಳ ಹೆಚ್ಚಳಕ್ಕೆ ಆಸ್ಪದ ನೀಡಬಲ್ಲುದು.

3.12 ದಾಖಲಾತಿಗಳ ವಿಷಯಪಟ್ಟಿ ಮತ್ತು ಅನುಕ್ರಮಣಿಕೆ ಕುರಿತಂತೆ, ಎನ್‌ಐಸಿ ಮತ್ತು ಇ–ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿರುವ ವೆಬ್ ಆಧಾರಿತ ಕಾಗದ ರಹಿತ ಸಾಫ್ಟ್‌ವೇರ್ ಅನ್ವಯಿಕೆಯನ್ನು ದಾಖಲೆಗಳ ವಿಷಯಪಟ್ಟಿ ಮತ್ತು ಅನುಕ್ರಮಣಿಕೆಗಾಗಿ ಬಳಸಬಹುದಾಗಿದೆ. ಈ ಕಾಗದ ರಹಿತ ಸಾಫ್ಟ್‌ವೇರ್ ಆನ್ವಯಿಕೆಯು ಕಡತ ಮೇಲ್ವಿಚಾರಣಾ ವ್ಯವಸ್ಥೆಯ (ಎಫ್‌ಎಂಎಸ್) ಅಭಿವೃದ್ಧಿಯಲ್ಲಿ ಬಳಸಲಾದ ಸಾಫ್ಟ್‌ವೇರ್ ಮತ್ತು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಅಂದರೆ "ಸಚಿವಾಲಯ ವಾಹಿನಿ" ಯಲ್ಲಿ ಬಳಸಿರುವ ಪತ್ರ ಮೇಲ್ವಿಚಾರಣಾ ವ್ಯವಸ್ಥೆ (ಎಲ್‌ಎಂಎಸ್)ಯಂತಿದೆ.

3.13 ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಎಫ್‌ಎಂಎಸ್/ ಎಲ್‌ಎಂಎಸ್ ಅನ್ನು 2003ನೇ ಸಾಲಿನಲ್ಲಿ ಆರಂಭಿಸಲಾಯಿತು. ಸಚಿವಾಲಯದ ವಾಹಿನಿಯಲ್ಲಿ ಲಭ್ಯವಿರುವ ಎಲ್ಲಾ ವಿದ್ಯುನ್ಮಾನ ದತ್ತಾಂಶವನ್ನು ವಿಷಯಪಟ್ಟಿ ಮತ್ತು ಅನುಕ್ರಮಣಿಕೆ ಅನ್ವಯಕ್ಕಾಗಿ ರವಾನಿಸಬಹುದಾಗಿದೆ. ಇ–ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿದ ವಿಷಯಪಟ್ಟಿ ಮತ್ತು ಅನುಕ್ರಮಣಿಕೆ ಅನ್ವಯವನ್ನು ಬಳಸಿ ಎಫ್‌ಎಂಎಸ್/

ಎಲ್‌ಎಂಎಸ್ ಆರಂಭಿಸುವುದಕ್ಕೆ ಮುಂಚಿತವಾಗಿ ಸೃಜಿಸಿದ ಎಲ್ಲ ದಾಖಲೆಗಳನ್ನು ನಮೂದಿಸುವುದು ಸೇರಿಸುವುದು ಅಗತ್ಯವಾಗಿದೆ.

3.14 ಪ್ರಮುಖ ದಸ್ತಾವೇಜುಗಳ ದಾಖಲೆ ಪಾಲಕನಾಗಿ ಕಾರ್ಯ ನಿರ್ವಹಿಸುತ್ತಿರುವ ಪತ್ರಾಗಾರ ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಅವರು ನಿರ್ವಹಿಸುತ್ತಿರುವ ದಾಖಲೆಗಳ ಇಲಾಖಾವಾರು ಪಟ್ಟಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಒಂದು ಸುಸ್ಪಷ್ಟ ವಿಷಯಪಟ್ಟಿ ಮತ್ತು ಅನುಕ್ರಮಣಿಕೆ ಅನ್ವಯಿಕೆಗೆ ತರಬೇಕಿದೆ.

3.15 ಕೇಂದ್ರ ಸರ್ಕಾರವು, ಸಾರ್ವಜನಿಕ ದಾಖಲಾತಿಗಳ ಸೃಜನೆ, ನಿರ್ವಹಣೆ, ವ್ಯವಸ್ಥಾಪನೆ ಮತ್ತು ಸಂರಕ್ಷಣೆ ಕುರಿತಾದ ನಿಯಂತ್ರಣವನ್ನು ವಿನಿಯಮಿಸುವ "ಸಾರ್ವಜನಿಕ ದಾಖಲಾತಿಗಳ ಅಧಿನಿಯಮ, 1993" ಅನ್ನು ಅಧಿನಿಯಮಿಸಿದೆ. ಸದರಿ ಅಧಿನಿಯಮವು ದಾಖಲಾತಿಗಳ ಅನಧಿಕೃತ ನಾಶಕ್ಕೆ ಐದು ವರ್ಷಗಳವರೆಗೆ ಶಿಕ್ಷೆ ವಿಧಿಸುವುದಕ್ಕೆ ಉಪಬಂಧ ಕಲ್ಪಿಸಿದೆ. ಕರ್ನಾಟಕವು ಯಾವುದೇ ಅಂತಹ ಶಾಸನವನ್ನು ಹೊಂದಿಲ್ಲ.

3.16 ಆಯೋಗವು ತನ್ನ ಮೊದಲನೆ ಮತ್ತು ಎರಡನೆ ವರ್ಷದ ವರದಿಯಲ್ಲಿ ರಾಜ್ಯ ಸರ್ಕಾರವು ಸಾರ್ವಜನಿಕ ದಾಖಲಾತಿಗಳ ಕಣ್ಮರೆ / ನಷ್ಟದ ಪ್ರಕರಣಗಳು ಹೆಚ್ಚುತ್ತಿರುವುದರಿಂದಾಗಿ ವ್ಯವಹರಿಸಲು ಸಮಗ್ರ ಶಾಸನವೊಂದನ್ನು ಜಾರಿಗೊಳಿಸಬೇಕೆಂದು ಈಗಾಗಲೇ ಶಿಫಾರಸು ಮಾಡಿದೆ.

3.17 ಪತ್ರಾಗಾರ ಇಲಾಖೆಯು, ದಾಖಲಾತಿಗಳ ಸೃಜನೆ, ನಿರ್ವಹಣೆ ಮತ್ತು ವ್ಯವಸ್ಥಾಪನೆ ಕುರಿತಂತೆ ಒಂದು ಮಸೂದೆಯ ಕರಡು ಪ್ರತಿಯನ್ನು ಸಿದ್ಧಪಡಿಸಿದ್ದು, ಅದನ್ನು ಶಿಕ್ಷಣ ಮತ್ತು ಕಾನೂನು ಇಲಾಖೆಗಳ ಪರಿಗಣನೆಗಾಗಿ ಅದನ್ನು ಸರ್ಕಾರಕ್ಕೆ ಕಳುಹಿಸಿರುವುದಾಗಿ ತಿಳಿದು ಬಂದಿದೆ. ಇದನ್ನು ತ್ವರಿತಗೊಳಿಸುವುದು ಅಗತ್ಯವಾಗಿದೆ.

3.18 ಒಂದು ಸಮಗ್ರ ಶಾಸನವನ್ನು ಅಧಿನಿಯಮಿಸುವವರೆಗೆ, ಸರ್ಕಾರವು ಸರ್ಕಾರಿ ದಾಖಲೆಗಳ ನಷ್ಟವನ್ನು ಕಳ್ಳತನ ಮತ್ತು ಅಥವಾ ಅಪರಾಧಿಕ ನಂಬಿಕೆ ದ್ರೋಹದ ಪ್ರಕರಣವಾಗಿ ಪರಿಗಣಿಸಬೇಕೆಂದು ಮತ್ತು ಪೊಲೀಸರು ಪ್ರಥಮ ವರ್ತಮಾನ ವರದಿ (ಎಫ್‌ಐಆರ್)ಯನ್ನು ದಾಖಲಿಸಿ ಪ್ರಮುಖ ಸಾರ್ವಜನಿಕ ದಾಖಲೆಗಳ ನಷ್ಟವನ್ನೊಳಗೊಂಡಂತೆ ದಾಖಲಾದ ಎಲ್ಲ ಪ್ರಕರಣಗಳ ಬಗ್ಗೆ ತನಿಖೆಯನ್ನು ಪ್ರಾರಂಭಿಸುವಂತೆ ಸರ್ಕಾರ ನಿರ್ದೇಶಿಸಬೇಕೆಂದು ಆಯೋಗವು ಪ್ರಥಮ ವಾರ್ಷಿಕ ವರದಿಯಲ್ಲಿ ಮಾಡಿರುವ ತನ್ನ ಶಿಫಾರಸನ್ನು ಪುನರುಚ್ಚರಿಸಿದೆ.

**ಸ್ವಯಂ ಬಹಿರಂಗಪಡಿಸುವ ಪ್ರಕಟನೆ**

3.19 ಮಾಹಿತಿ ಹಕ್ಕು ಅಧಿನಿಯಮವು, ಸಾರ್ವಜನಿಕ ಪ್ರಾಧಿಕಾರಗಳ ರಚನೆ, ಅಧಿಕಾರಗಳು, ಪ್ರಕಾರ್ಯಗಳು, ಪ್ರಮಾಣಿಕಗಳು, ಅವುಗಳು ಹೊಂದಿರುವ ದಾಖಲೆಗಳು, ಅವುಗಳು ಅನುಷ್ಠಾನಗೊಳಿಸಿರುವ ವಿವಿಧ

ಅಧಿನಿಯಮಗಳು, ಅವುಗಳ ಆಯವ್ಯಯ ಮತ್ತು ಸಮಾಲೋಚನೆಗಾಗಿ ನಾಗರಿಕರಿಗೆ ಅವಕಾಶಗಳು ಮೊದಲಾದವುಗಳ ಬಗ್ಗೆ ಸಾಮಾನ್ಯ ಜನರ ಹಿತಾಸಕ್ತಿಯ ಮಾಹಿತಿಯನ್ನು ಸಾಧ್ಯವಾದಷ್ಟು ವ್ಯಾಪಕವಾಗಿ ಪೂರ್ವಭಾವಿಯಾಗಿ ಬಹಿರಂಗಪಡಿಸಲು, ಪ್ರಕಟಿಸಲು ಮತ್ತು ಪ್ರಸಾರ ಮಾಡಲು ಸಾರ್ವಜನಿಕ ಪ್ರಾಧಿಕಾರಗಳ ಮೇಲೆ ಜವಾಬ್ದಾರಿ ವಹಿಸಿದೆ. ವಿಶೇಷವಾಗಿ ಇದು ಪ್ರಮುಖವಾದುದಾಗಿದೆ, ಏಕೆಂದರೆ ಕೆಲವು ಸಲ ಸಾರ್ವಜನಿಕರಿಗೆ ಯಾವ ಮಾಹಿತಿ ಸರ್ಕಾರದ ಸ್ವಾಧೀನದಲ್ಲಿದೆ ಎಂಬ ಬಗ್ಗೆ ಕಿಂಚಿತ್ತೂ ಮಾಹಿತಿ ಇರುವುದಿಲ್ಲ.

3.20 ಅಧಿನಿಯಮದ 4(1) (ಬಿ) ಪ್ರಕರಣದ ಮೇರೆಗೆ ಪೂರ್ವಭಾವಿಯಾಗಿ ಬಹಿರಂಗಪಡಿಸುವ ಅಗತ್ಯತೆಯು ಜೂನ್ 15,2005ರಂದು ಅಧಿನಿಯಮದ ಅಧಿನಿಯಮಿತಿಯೊಂದಿಗೆ ಜಾರಿಗೆ ಬಂದಿದೆ. ಯಾವುದೇ ಸಂದರ್ಭದಲ್ಲಿ, ಸಾರ್ವಜನಿಕ ಪ್ರಾಧಿಕಾರಗಳು ಅಧಿನಿಯಮಿತಿಯಿಂದ 120 ದಿನಗಳೊಳಗೆ ಅಂದರೆ 12ನೇ ಅಕ್ಟೋಬರ್ 2005ರೊಳಗೆ, ಅಧಿನಿಯಮದ ಈ ಉಪಬಂಧವನ್ನು ಪಾಲಿಸಿರತಕ್ಕದ್ದು.

3.21 ಅಧಿನಿಯಮವು, ಸಾರ್ವಜನಿಕರಿಗೆ ಸುಲಭವಾಗಿ ಕೈಗೆ ಎಟಕುವ ರೀತಿಯಲ್ಲಿ ನಮೂನೆ ಮತ್ತು ಆ ರೀತಿಯಲ್ಲಿ ಮಾಹಿತಿಯನ್ನು ವ್ಯಾಪಕವಾಗಿ ಪ್ರಸಾರ ಮಾಡುವುದನ್ನು ಅಗತ್ಯಪಡಿಸಿದೆ. ಈ ಮಾಹಿತಿಯು ಸಾರ್ವಜನಿಕ ಮಾಹಿತಿ ಅಧಿಕಾರಿಯವರ ಬಳಿ ಲಭ್ಯವಾಗುವಂತೆ ಸಹ ಮಾಡಬೇಕು.

3.22 ಪ್ರಚಾರ ಮಾಧ್ಯಮವು ವಿವಿಧ ಪರಿಗಣನೆಗಳನ್ನು ಅವಲಂಬಿಸಿದ್ದು, ವಿದ್ಯುನ್ಮಾನ ನಮೂನೆ, ಮುಂತಾದವುಗಳಲ್ಲಿ ಲಭ್ಯವಾಗುವಂತೆ ಮಾಡುವಲ್ಲಿ ಸಾರ್ವಜನಿಕರಿಗೆ ಅರ್ಥವಾಗುವಂತೆ ಆ ಭಾಷೆಯಲ್ಲಿ ಮಾಹಿತಿಯನ್ನು ಪ್ರಕಟಿಸಬೇಕಾಗುತ್ತದೆ.

3.23 ಮಾಹಿತಿಯನ್ನು ಅಂತರ ಜಾಲದ ಮೂಲಕ ಪ್ರಸಾರ ಮಾಡುವುದು ತುಂಬಾ ಸರಳ ಮತ್ತು ಪರಿಣಾಮಕಾರಿ ವಿಧಾನವಾಗಿರುತ್ತದೆ. ಆದಾಗ್ಯೂ, ಇತ್ತೀಚಿನ ಸಮೀಕ್ಷೆಯು ಕರ್ನಾಟಕದಲ್ಲಿನ ಹೆಚ್ಚಿನ ಸಂಖ್ಯೆಯ ಸಾರ್ವಜನಿಕ ಪ್ರಾಧಿಕಾರಗಳು ಅವುಗಳ ವೆಬ್‌ಸೈಟ್ ಈ ಮಾಹಿತಿಯನ್ನು ಪ್ರಕಟಿಸುತ್ತಿಲ್ಲವೆಂದು ತಿಳಿಸುತ್ತದೆ.

3.24 ಮಾಹಿತಿ ಹಕ್ಕು ಅಧಿನಿಯಮದ 4ನೇ ಪ್ರಕರಣದಡಿಯಲ್ಲಿ ಶಾಸನಾತ್ಮಕ ಪ್ರಕಟಣೆಗಳನ್ನು ಪರಿಶೀಲಿಸುವಾಗ, ದೂರುಗಳು/ಅಪೀಲುಗಳ ವಿಚಾರಣೆ ನಡೆಸುವಾಗ ಆಯೋಗವು ಸಾರ್ವಜನಿಕ ಪ್ರಾಧಿಕಾರಗಳು ಪ್ರಕಟಿಸುತ್ತಿರುವ ಪೂರ್ವ ನಿಯಾಮಕ ಪ್ರಕಟಣೆಗಳು ಈ ಮುಂದಿನ ಕಾರಣಗಳಿಗಾಗಿ ತೃಪ್ತಿಕರವಾಗಿಲ್ಲವೆಂಬುದನ್ನು ಗಮನಿಸಿದೆ:

(1) ಅವುಗಳ ಕರಡು ಅಸಮರ್ಪಕವಾಗಿರುವುದು.
(2) ಅವು ಅಪೂರ್ಣವಾಗಿವೆ.
(3) ಅವು ಅಗತ್ಯಪಡಿಸಿದಂತೆ ವಾರ್ಷಿಕವಾಗಿ ಪೂರ್ಣಗೊಂಡಿರುವುದಿಲ್ಲ.

(4) ಪ್ರಸಾರಣಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಲಾಗಿಲ್ಲ.

3.25 ದಾಖಲೆಗಳ ಸೂಚಿಪಟ್ಟಿಯನ್ನು ತಯಾರಿಸುವ ಮತ್ತು ವಿಷಯಸೂಚಿ ಪಟ್ಟಿಯನ್ನು ತಯಾರಿಸುವ ಮತ್ತು ತಾವಾಗಿಯೇ ಘೋಷಣೆಗಳ ಪ್ರಕಟಣೆಯನ್ನು ಮಾಡುವ ಅಗತ್ಯತೆಗಳ ಅನುಸರಣೆಯನ್ನು ಸ್ವತಂತ್ರ ಏಜನ್ಸಿಯ ಮೂಲಕ ನಿಯತಕಾಲಿಕವಾಗಿ ಪರಿಶೋಧನೆ ಮಾಡಬೇಕೆಂದು ಆಯೋಗವು ಅಭಿಪ್ರಾಯಪಟ್ಟಿದೆ. ಗುಣಮಟ್ಟದ ಕಾರ್ಯವಿಧಾನವನ್ನು ಮೊದಲೇ ರೂಪಿಸಿದ ಕಾರ್ಯಕ್ರಮದ ಪ್ರಕಟಣೆಯಲ್ಲಿ ಸೂಚಿಸಬೇಕು.

3.26 ಈ ವಿಷಯದ ಬಗ್ಗೆ ಆಯೋಗದ ಶಿಫಾರಸ್ಸುಗಳ ಅಧ್ಯಾಯ VIರ ಶಿಫಾರಸ್ಸುಗಳಲ್ಲಿ ಒಳಗೊಂಡಿರುತ್ತವೆ.

0–0–0–0–0–0

## ಅಧ್ಯಾಯ– IV

**ಸಾಮಾನ್ಯ ಮಾಹಿತಿ (ಖರ್ಚು, ಪರಿಹಾರ, ದಂಡಗಳು ಪ್ರಶ್ನಿಸಲಾದ ಆದೇಶಗಳು ಮತ್ತು ಹೊರಸ್ಥಳ ಸಭೆಗಳು) ಅಧಿನಿಯಮದ ಮೇರೆಗೆ ಘೋಷಿಸಿದ ವೆಚ್ಚ/ಪರಿಹಾರ:**

**4.1** 19(8)(ಬಿ) ಪ್ರಕರಣದಲ್ಲಿ ಯಾವುದೇ ನಷ್ಟ ಅಥವಾ ಉಂಟಾದ ಹಾನಿಗಾಗಿ ಫಿರ್ಯಾದುದಾರನಿಗೆ ಪರಿಹಾರವನ್ನು ನೀಡುವಂತೆ ಸಾರ್ವಜನಿಕ ಪ್ರಾಧಿಕಾರವನ್ನು ಅಗತ್ಯಪಡಿಸಲು ಆಯೋಗಕ್ಕೆ ಅಧಿಕಾರ ನೀಡಿದೆ. ಅಲ್ಲದೆ, ದೂರುಗಳು / ಅಪೀಲುಗಳ ವಿಚಾರಣೆಯ ಅವಧಿಯಲ್ಲಿ ಅನೇಕ ಪ್ರತಿವಾದಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಯಾವುದೇ ಸಕಾರಣವಿಲ್ಲದೆ ವಿಚಾರಣೆಗಳನ್ನು ಮುಂದೂಡಲು ಕೋರುತ್ತಾರೆ. ಕೆಲವು ಸಂದರ್ಭದಲ್ಲಿ ಅವರು ಗೈರುಹಾಜರಾದ ಪರಿಣಾಮ ಪ್ರಕರಣಗಳನ್ನು ಮುಂದಕ್ಕೆ ಹಾಕುವುದರಿಂದ, ಅರ್ಜಿದಾರರಿಗೆ ಅನಾನುಕೂಲ ಉಂಟಾಗುತ್ತದೆ. ಸೂಕ್ತ ಪ್ರಕರಣಗಳಲ್ಲಿ ಮುಂದೂಡಲಾಗುವ ವೆಚ್ಚವನ್ನು ಸಾರ್ವಜನಿಕ ಪ್ರಾಧಿಕಾರ ಅಥವಾ ಸ್ವತಃ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಪಾವತಿ ಮಾಡಬೇಕೆಂದು ಆಯೋಗವು ತೀರ್ಪುನೀಡಿದೆ.

**4.2** ವೆಚ್ಚ/ಪರಿಹಾರ ತೀರ್ಪುಗಳ ಅಂಥ ಪ್ರಕರಣಗಳನ್ನು ಸಂಕ್ಷಿಪ್ತಗೊಳಿಸಿ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಆದೇಶ ಸಂಖ್ಯೆ ಮತ್ತು ದಿನಾಂಕ | ಪಕ್ಷಕಾರರು | ಆದೇಶದ ಸಾರಾಂಶ | ವಿಧಿಸಿದ ಮೊಬಲಗು | ಸಂದಾಯದ ವಿವರಗಳು |
|---|---|---|---|---|---|
| 1 | ಕೆಐಸಿ 164 ಸಿಓಎಂ 07 ದಿನಾಂಕ 7-06-2007 | ಶ್ರೀ ಸುನಿಲ್ ಎಸ್ ಹರ್ಚಿಕಾರ್ – ವಿರುದ್ಧ – ಸಾಮಾಅ ಮತ್ತು ಇಇ (ವಿದ್ಯುಚ್ಛಕ್ತಿ), ಹೆಸ್ಕಾಂ ಶಿರಸಿ | ಪರಿಹಾರದ ಸಂದಾಯದ ಅರ್ಜಿಗೆ ಸಂಬಂಧಿಸಿದಂತೆ, ಆಯೋಗದ ಮುಂದೆ ವ್ಯವಹರಣೆಗಳನ್ನು ನಡೆಸಲು ಫಿರ್ಯಾದುದಾರನಿಗೆ ಉಂಟಾದ ಹಾನಿಗಾಗಿ 1,500/– ರೂಪಾಯಿಗಳ ಮೊತ್ತವು ಸೂಕ್ತವೆಂಬುದು ಆಯೋಗದ ಅಭಿಪ್ರಾಯವಾಗಿದೆ. ತದನುಸಾರವಾಗಿ, ಆಯೋಗವು ಪ್ರತಿವಾದಿ ಸಾರ್ವಜನಿಕ ಪ್ರಾಧಿಕಾರ ಎಂದರೆ, ವ್ಯವಸ್ಥಾಪಕ ನಿರ್ದೇಶಕ ಹೆಸ್ಕಾಂ ಹುಬ್ಬಳ್ಳಿ ಇವರು ಫಿರ್ಯಾದುದಾರನಿಗೆ 30 ದಿನಗಳ ಒಳಗಾಗಿ ರಾಮನಗರದಲ್ಲಿ ಪಾವತಿಸಬಹುದಾದ ಡಿಮಾಂಡ್ ಡ್ರಾಫ್ಟ್/ಪೇ ಆರ್ಡರ್ ಮೂಲಕ, ಆರ್‌ಪಿಎಡಿಯಲ್ಲಿ, ಆಯೋಗಕ್ಕೆ ಮಾಹಿತಿ ನೀಡಿ 1,500 ರೂಪಾಯಿಗಳ ಪರಿಹಾರವನ್ನು ಪಾವತಿಸಲು ನಿರ್ದೇಶಿಸಿದೆ. | 1500/– | 30/7/2007 |
| 2 | ಕೆಐಸಿ 64 ಸಿಓಎಂ 07 ದಿನಾಂಕ 16–05–2007 | ಶ್ರೀ ಬಿ.ಸಿ. ನಾಯಕ್ ವಿರುದ್ಧ ಸಾಮಾಅ ಮತ್ತು ಮುಖ್ಯ ಸಂಚಾರ ವ್ಯವಸ್ಥಾಪಕರು, ಎನ್‌ಡಬ್ಲ್ಯುಕೆಆರ್‌ಟಿಸಿ ಹುಬ್ಬಳ್ಳಿ | ಪರಿಹಾರವನ್ನು ಘೋಷಿಸಿರುವುದಕ್ಕೆ ಸಂಬಂಧಿಸಿದಂತೆ, ಅರ್ಜಿದಾರನು, ಆಯೋಗದ ಮುಂದೆ ಪ್ರಕರಣಕ್ಕೆ ಹಾಜರಾಗಲು ಖರ್ಚುಮಾಡಿದ ಸಾರಿಗೆ ವೆಚ್ಚ, ವೆಚ್ಚಗಳು ಇತ್ಯಾದಿಗಳಿಗಾಗಿ 7000/– ರೂಪಾಯಿಗಳ ಪರಿಹಾರವನ್ನು ಘೋಷಿಸಲು ಕೋರಿ ದಿನಾಂಕ 16–05–07 ರಂದು ಮತ್ತೊಂದು ಅರ್ಜಿಯನ್ನು ಸಲ್ಲಿಸಿದ್ದಾನೆ. ಫಿರ್ಯಾದುದಾರನು ಸಲ್ಲಿಸಿದ ಕ್ಲೇಮು ಅತ್ಯಧಿಕವಾದದ್ದು ಎಂದು ಆಯೋಗ ಮನಗಂಡಿದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿದ ನಂತರ, ಆಯೋಗವು ಸಾರ್ವಜನಿಕ ಪ್ರಾಧಿಕಾರ ಎಂದರೆ ಎನ್‌ಡಬ್ಲ್ಯುಕೆಆರ್‌ಟಿಸಿ ಹುಬ್ಬಳ್ಳಿ ಇವರು ಫಿರ್ಯಾದುದಾರನಿಗೆ ಉಂಟಾದ ನಷ್ಟಕ್ಕಾಗಿ "ಪೇಯಿಸ್ ಅಕೌಂಟ್ ಓನ್ಲಿ" ಯಾಗಿ ಡಿ.ಡಿ. ಅಥವಾ ಪೇ ಆರ್ಡರ್ ಮೂಲಕ ಶಿರಸಿಯಲ್ಲಿ ಈತನಿಗೆ ಸಂದಾಯವಾಗುವಂತೆ 30 ದಿನಗಳ ಒಳಗಾಗಿ, ಆರ್‌ಪಿಎಡಿ ಮೂಲಕ, ಆಯೋಗಕ್ಕೆ ಮಾಹಿತಿ ನೀಡಿ | 1000/– | 16/6/2007 |

| | | | | | |
|---|---|---|---|---|---|
| | | | 1000/– ರೂಪಾಯಿಗಳ ಮೊತ್ತವನ್ನು (ಆಯೋಗದ ಮುಂದೆ ಪ್ರತಿ ವಿಚಾರಣೆಗೆ ಹಾಜರಾಗುವುದಕ್ಕೆ ರೂ.500/–) ಪಾವತಿ ಮಾಡಲು ನಿರ್ದೇಶಿಸಿದೆ. | | |
| 3 | ಕೆಐಸಿ 352 ಎಪಿಎಲ್ 07 ದಿನಾಂಕ 24–10–2007 | ಶ್ರೀ ಸುರೇಶ್ ಬಿ. ಹರ್ಚಿಕಾರ್ ವಿರುದ್ಧ ಎಇಇ, ಹೆಸ್ಕಾಂ ದಾಂಡೇಲಿ ಮತ್ತು ಮತ್ತೊಬ್ಬ | ಅಪೀಲುದಾರನು ಆಯೋಗದ ಮುಂದೆ ವ್ಯವಹರಣೆಗಳನ್ನು ನಡೆಸುವುದಕ್ಕಾಗಿ ತಾನು ಖರ್ಚುಮಾಡಿದ ತಪ್ಪಿಸಬಹುದಾಗಿದ್ದ ವೆಚ್ಚಗಳಗಾಗಿ ರೂ 1000/– ವೆಚ್ಚವನ್ನು ಸಂದಾಯ ಮಾಡಬೇಕೆಂದು ಆಯೋಗವು ವ್ಯವಸ್ಥಾಪಕ ನಿರ್ದೇಶಕರು ಹೆಸ್ಕಾಂ ಹುಬ್ಬಳ್ಳಿ ಇವರು ಅಪೀಲುದಾರನು ಖರ್ಚು ಮಾಡಿದ ತಪ್ಪಿಸಬಹುದಾದ ವೆಚ್ಚಗಳಿಗಾಗಿ ರೂ 1000/– ರೂಪಾಯಿಗಳ ವೆಚ್ಚವನ್ನು ಡಿಡಿ ಅಥವಾ ಪೇ ಆರ್ಡರ್ ಮೂಲಕ, ರಾಮನಗರ, ಜೊಯ್ಡಾ ತಾಲ್ಲೂಕಿನಲ್ಲಿ ಸಂದಾಯವಾಗುವಂತೆ ಆರ್‌ಪಿಎಡಿ ಮೂಲಕ ಆಯೋಗಕ್ಕೆ ತಿಳಿಸಿ 30 ದಿನಗಳ ಒಳಗಾಗಿ ನೀಡಲು ನಿರ್ದೇಶಿಸಿದೆ. | 1000/– | 28/11/2007 |
| 4 | ಕೆಐಕೆಐಸಿ 53 ಸಿಎಂ 2007 ದಿನಾಂಕ 16–05–2007 | ಶ್ರೀ ಎನ್.ಸಿ. ಚನ್ನಬಸಪ್ಪ ವಿರುದ್ಧ ಪಿಐಓ ಮತ್ತು ಇಇ ಹಾರಂಗಿ ಜಲಾಶಯ, ವಿಭಾಗ ಕೆ.ಆರ್. ನಗರ | ಆಯೋಗವು ಮಾಹಿತಿಯನ್ನು ಒದಗಿಸುವಲ್ಲಿ ಅತಿ ವಿಳಂಬವಾಗಿರುವುದನ್ನು ಗಮನಿಸಿದೆ. ಪ್ರತಿವಾದಿಯು, ಮಾಹಿತಿಗಾಗಿ ಮನವಿಯ ಬಗ್ಗೆ ಪ್ರಾಮಾಣಿಕವಾಗಿ ವ್ಯವಹರಿಸಿದ್ದಲ್ಲಿ, ಫಿರ್ಯಾದುದಾರನಿಗೆ ಉಂಟಾದ ತೊಂದರೆ ಹಾಗೂ ತಪ್ಪಿಸಬಹುದಾದ ವೆಚ್ಚವನ್ನು ಈತ ತಡೆಯಬಹುದಾಗಿತ್ತು. ಫಿರ್ಯಾದುದಾರನು 600 ರೂಪಾಯಿಗಳ ಪರಿಹಾರವನ್ನು ಕೋರಿದ್ದಾನೆ ಮತ್ತು ಆಯೋಗವು ಸಾರ್ವಜನಿಕ ಪ್ರಾಧಿಕಾರ ಎಂದರೆ ಕಾವೇರಿ ನೀರಾವರಿ ನಿಗಮ ನಿಯಮಿತವು, ಫಿರ್ಯಾದುದಾರನಿಗೆ ಉಂಟು ಮಾಡಿದ ಹಾನಿಗೆ ಪರಿಹಾರವನ್ನು ಪಾವತಿಸಲು ನಿರ್ದೇಶಿಸಿದೆ. | 600/– | 28/9/2007 |
| 5 | ಕೆಐಸಿ 97 ಸಿಎಂ 2007 ದಿನಾಂಕ 25–07–2007 | ಎಸ್.ಎನ್. ಸುಬ್ರಹ್ಮಣ್ಯ ವಿರುದ್ಧ ನಿರ್ದೇಶಕರು ಹಾಪ್‌ಕಾಮ್ಸ್, ಬೆಂಗಳೂರು | ಆಯೋಗವು ಫೀರ್ಯಾದುದಾರರ ನಿವೇದನೆಯನ್ನು ಪರಿಗಣಿಸಿದೆ ಮತ್ತು ಶ್ರೀ ವಿಶ್ವನಾಥ ವ್ಯವಸ್ಥಾಪಕ ನಿರ್ದೇಶಕರು ಹಾಪ್‌ಕಾಮ್ಸ್ ಇವರು 30 ದಿನಗಳ ಒಳಗಾಗಿ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಆರ್‌ಪಿಎಡಿ ಮೂಲಕ ಡಿಡಿ ಅಥವಾ ಪೇ ಆರ್ಡರ್‌ನಲ್ಲಿ ಪ್ರಕರಣವು ಮುಂದೂಡಿದ ಕಾರಣದಿಂದ ಫಿರ್ಯಾದುದಾರನಿಗೆ ವೈಯುಕ್ತಿಕವಾಗಿ ಉಂಟಾದ ನಷ್ಟಕ್ಕಾಗಿ ರೂ.500/–ನ್ನು ಪಾವತಿ ಮಾಡಲು ನಿರ್ದೇಶಿಸಿದೆ. | 500/– | 3/9/2007 |
| 6 | ಕೆಐಸಿ 551 ಸಿಎಂ 2007 ದಿನಾಂಕ 23–04–07 | ಶ್ರೀ ಸಿ.ಎಂ. ಸುಬ್ಬಯ್ಯ ವಿರುದ್ಧ ಪಿಐಓ ಆಯುಕ್ತರ ಕಛೇರಿ, ಬಿಬಿಎಂಪಿ, ಬೆಂಗಳೂರು | ಪರಿಹಾರದ ಕೋರಿಕೆಗೆ ಸಂಬಂಧಿಸಿದಂತೆ, ಅರ್ಜಿದಾರ ತನ್ನ ಲಿಖಿತ ಹೇಳಿಕೆಯಲ್ಲಿ, 14,800/– ರೂಪಾಯಿಗಳು ಪರಿಹಾರವನ್ನು ಕೋರಿರುತ್ತಾನೆ. ಇದರಲ್ಲಿ ರೂ.1,800/– ಸಾರಿಗೆ ವೆಚ್ಚಕ್ಕಾಗಿ, ರೂ.1000/– ಚಿಕ್ಕಪುಟ್ಟ ಮತ್ತು ಪ್ರಾಸಂಗಿಕ ವೆಚ್ಚಗಳಿಗಾಗಿ ಮತ್ತು ರೂ.12,000/–ವೈಯಕ್ತಿಕ ಸಮಯದ ನಷ್ಟಕ್ಕಾಗಿ ಸಂಬಂಧಿಸಿರುತ್ತದೆ. ಶ್ರೀ ಸುಬ್ಬಯ್ಯನು ಸಾರ್ವಜನಿಕ ಪ್ರಾಧಿಕಾರದ ಗಮನಕ್ಕೆ ಅನೇಕ ದೋಷಗಳನ್ನು ತರುವಲ್ಲಿ ವ್ಯಹಿಸಲಾದ ಸಮಯ ಮತ್ತು ಪ್ರಯತ್ನವು ಅತಿ ಮಹತ್ವದ್ದಾಗಿದ್ದರೂ, ಆಯೋಗವು ಈ ಬಗೆಯ ಹಾನಿಗಳಿಗಾಗಿ ಶುಲ್ಕವಿಧಿಸಿದ್ದ ಹೊರತು ಇದಕ್ಕಾಗಿ ನೀಡುವುದು ಸರಿಯಾದುದಲ್ಲ. ಆದ್ದರಿಂದ, ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರ ಎಂದರೆ ಶ್ರೀ ಕೆ. ಜೈರಾಜ್, ಆಯುಕ್ತರು, ಬಿ.ಬಿ.ಎಂ.ಪಿ. ಇವರು ಒಂದು ತಿಂಗಳ ಒಳಗಾಗಿ ಶ್ರೀ ಸುಬ್ಬಯ್ಯರವರಿಗೆ ಕ್ರಾಸ್ ಮಾಡಿದ ಆಕೌಂಟ್ಸ್ ಪೇಯಿ ಡಿಡಿ ಮೂಲಕ, ಆಯೋಗಕ್ಕೆ ಮಾಹಿತಿ ನೀಡಿ, ಆರ್‌ಪಿಎಡಿ ಮೂಲಕ ಫಿರ್ಯಾದುದಾರನಿಗೆ ಕಳುಹಿಸಲು ರೂ.2800/– (ಎರಡು ಸಾವಿರದ ಎಂಟುನೂರು ರೂಪಾಯಿಗಳು ಮಾತ್ರ) ಪರಿಹಾರವನ್ನು ಪಾವತಿಸಲು ಆಯೋಗವು ನಿರ್ದೇಶಿಸಿದೆ. | 2800 | 20/8/2007 |
| 7 | ಕೆಐಸಿ 567 ಸಿಎಂ 2007 ದಿನಾಂಕ 7–05–2007 | ಶ್ರೀ ದೇವಿದಾಸ್ ಎನ್. ಪಿಸ್ಸೆ ವಿರುದ್ಧ ಪಿಐಓ ಮತ್ತು ಡಿಆರ್‌ಸಿಎಸ್, ಗುಲ್ಬರ್ಗಾ | ಎಲ್ಲ ಸಂಗತಿಗಳು, ಸಂದರ್ಭಗಳು ಮತ್ತು ಪ್ರತಿವಾದಿಯು ಮಾಡಿದ ನಿವೇದನೆಗಳನ್ನು ಗಣನೆಗೆ ತೆಗೆದುಕೊಂಡ ನಂತರ, ಮತ್ತು ಮಾಹಿತಿ ಹಕ್ಕು ಅಧಿನಿಯಮ 2005ರ 20(1)ನೇ ಪ್ರಕರಣದ ಮೇರೆಗೆ ಆಯೋಗಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಆಯೋಗವು ಈ ಮೂಲಕ ಶ್ರೀ ದೇವರಾಜ್, ಸಾಮಾಅ ಮತ್ತು ಸಹಕಾರ ಸಂಘಗಳ ಉಪರಿಜಿಸ್ಟ್ರಾರ್, ಗುಲ್ಬರ್ಗಾ ಇವರಿಗೆ ಮಾಹಿತಿ ಒದಗಿಸುವಲ್ಲಿನ ವಿಳಂಬ ಹಾಗೂ ಸಂಬಂಧಪಟ್ಟ ಸಾಮಾಅಗಳಿಗೆ ಮಾಹಿತಿಗಾಗಿ ಸಲ್ಲಿಸಿದ ಮನವಿಯ ಸಂಬಂಧಪಟ್ಟಭಾಗವನ್ನು ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳದೇ ಇರುವುದಕ್ಕಾಗಿ ರೂ.250/– ದಂಡವನ್ನು ವಿಧಿಸಿದೆ. | 250/– | 8/10/2007 |

| | | | | | |
|---|---|---|---|---|---|
| 8 | ಕೆಐಸಿ 735 ಸಿಓಎಂ 2007 ದಿನಾಂಕ 5–09–2007 | ಶ್ರೀ ರವೀಂದ್ರ ವಿರುದ್ಧ ಪಿಐಓ, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು | ಆಯೋಗವು, ಫಿರ್ಯಾದುದಾರನಿಗೆ ಉಂಟಾದ ಹಾನಿಗಾಗಿ ಪರಿಹಾರವನ್ನು ಘೋಷಿಸುವ ಅರ್ಜಿಯನ್ನು ಅನುಮತಿಸುವುದು ಅವಶ್ಯಕವೆಂದು ಪರಿಗಣಿಸಿದೆ. ಆದ್ದರಿಂದ, ಆಯೋಗವು, ಅಧಿನಿಯಮದ 19(8)(ಬಿ) ಪ್ರಕರಣದ ಮೇರೆಗೆ ನಿಹಿತವಾದ ತನ್ನ ಅಧಿಕಾರದಂತೆ, ಸಾರ್ವಜನಿಕ ಪ್ರಾಧಿಕಾರ ಎಂದರೆ, ಅಂಗವಿಕಲರ ಕಲ್ಯಾಣ ಮತ್ತು ಹಿರಿಯನಾಗರಿಕರ ಕಲ್ಯಾಣ ನಿರ್ದೇಶನಾಲಯ ಇವರು ಫಿರ್ಯಾದುದಾರನಿಗೆ ಉಂಟಾದ ಹಾನಿಗಾಗಿ 500/– ರೂಪಾಯಿಗಳ ಪರಿಹಾರವನ್ನು ಪಾವತಿಸಲು ನಿರ್ದೇಶಿಸಿದೆ. ಇದನ್ನು 30 ದಿನಗಳ ಒಳಗಾಗಿ ಆರ್‌ಪಿಎಡಿ ಮುಖಾಂತರ ಮತ್ತು ಆಯೋಗಕ್ಕೆ ತಿಳಿಸಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿಡಿ/ ಪೇ ಆರ್ಡರ್ ಮೂಲಕ ಸಂದಾಯ ಮಾಡತಕ್ಕದ್ದು. | 500 | 3/10/2007 |
| 9 | ಕೆಐಸಿ 858 ಸಿಓಎಂ 2007 ದಿನಾಂಕ 22–05–2007 | ಶ್ರೀ ಬೆನ್ನೂರು ಸಾಯಿಬಾಬಾ ಆನಂದರಾವ್ ವಿರುದ್ಧ ಪಿಐಓ ಮತ್ತು ಪ್ರಿನ್ಸಿಪಾಲರು ಸಂಯುಕ್ತ ಪದವಿಪೂರ್ವ ಕಾಲೇಜು, ಸಂತಾಪುರ, ಔರಾದ್ | ಫಿರ್ಯಾದುದಾರನು, ತನ್ನ ಅರ್ಜಿಯನ್ನು ಸಲ್ಲಿಸಲು ಬೆಂಗಳೂರಿಗೆ ಪ್ರಯಾಣ ಮಾಡುವ ಅಗತ್ಯವಿರಲಿಲ್ಲ ಇದನ್ನು ಅಂಚೆ ಮೂಲಕವೇ ಕಳುಹಿಸಬಹುದಿತ್ತೆಂದು ಆಯೋಗವು ಅಭಿಪ್ರಾಯಪಟ್ಟಿದೆ. ತದನುಸಾರವಾಗಿ, ಆಯೋಗವು, ಸಾರ್ವಜನಿಕ ಪ್ರಾಧಿಕಾರ ಎಂದರೆ, ಸಂಯುಕ್ತ ಪದವಿಪೂರ್ವ ಕಾಲೇಜು, ಸಂತಾಪುರ, ಔರಾದ್ ಇದನ್ನು ಪ್ರತಿನಿಧಿಸುವ ಇದರ ಪ್ರಿನ್ಸಿಪಾಲರು ಮಾಹಿತಿಯನ್ನು ನೀಡಲು ವಿಳಂಬ ಮಾಡಿದ ಕಾರಣಕ್ಕಾಗಿ ಸಂಸ್ಥೆಗಳ ನಿಧಿಗಳಿಂದ 1000/– ರೂಪಾಯಿಗಳ ಮೊತ್ತವನ್ನು ಫಿರ್ಯಾದುದಾರನಿಗೆ ಉಂಟಾದ ಹಾನಿಗಾಗಿ ಪರಿಹಾರ ಎಂದು ಪಾವತಿ ಮಾಡಲು ನಿರ್ದೇಶಿಸಿದೆ. | 1000/– | ವರದಿಯಾಗಿಲ್ಲ |
| 10 | ಕೆಐಸಿ 1006 ಸಿಓಎಂ 2007 ದಿನಾಂಕ 18–04–2007 | ಡಾ॥ ಹೆನ್ರಿಟ್ಟಾ ಡಿ'ಕೋಸ್ಟಾ ವಿರುದ್ಧ ಎಇಇ (ಭಾರತಿನಗರ) ಬಿಬಿಎಂಪಿ, ಬೆಂಗಳೂರು | ಫಿರ್ಯಾದುದಾರಳು, ಫಿರ್ಯಾದು, ಪ್ರತಿವಾದಿಗಳ ಗೈರುಹಾಜರಿಯ ಕಾರಣ ಮುಂದೂಡಲಾದ್ದರಿಂದ ತಾನು ಒಂದು ದಿನ ತನ್ನ ವೈದ್ಯಕೀಯ ಕೆಲಸಕ್ಕೆ ರಜೆ ಹಾಕಬೇಕಾಯಿತು ಮತ್ತು ಆಯೋಗದ ಮುಂದೆ ಈ ವ್ಯವಹರಣೆಗಳಿಲ್ಲ ಹಾಜರಾಗಿದ್ದು, ಮುಂದೂಡಿದಕ್ಕಾಗಿ ಉಂಟಾದ ವೆಚ್ಚವನ್ನು ತನಗೆ ನೀಡಬೇಕೆಂದು ತಿಳಿಸಿರುತ್ತಾಳೆ. ತದನುಸಾರವಾಗಿ, ಮಾಹಿತಿ ಹಕ್ಕು ಅಧಿನಿಯಮ 2005ರ 19(8)(ಬಿ) ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಆಯೋಗವು, ಸಾರ್ವಜನಿಕ ಪ್ರಾಧಿಕಾರ ಎಂದರೆ, ಬಿಬಿಎಂಪಿ, ಬೆಂಗಳೂರು ಇವರು ಫಿರ್ಯಾದುದಾರಳಿಗೆ ಈ ದಿನ ಮುಂದೂಡಿದ ಕಾರಣಕ್ಕಾಗಿ ಆಕೆಗೆ ಉಂಟಾದ ಹಾನಿಗಳಿಗಾಗಿ ರೂ.500/– ವೆಚ್ಚವನ್ನು ಪಾವತಿ ಮಾಡತಕ್ಕದು ಎಂದು ನಿರ್ದೇಶಿಸಿದೆ. | 500 | 6/8/2007 |
| 11 | ಕೆಐಸಿ 1155 ಸಿಓಎಂ 2007 ದಿನಾಂಕ: 11.01.2008 | ಶ್ರೀ ಎನ್. ಶಶಿಕುಮಾರ್ ವಿರುದ್ಧ ಪಿಐಓ ಮತ್ತು ತಹಶೀಲ್ದಾರ್ ಮಾಲೂರು ತಾಲೂಕು | ಗೈರುಹಾಜರಿ ಮತ್ತು ಈ ಆಯೋಗದ ಆದೇಶಗಳನ್ನು ಪಾಲಿಸದೆ ಈ ವಿಚಾರಣೆ ನಿರರ್ಥಕವಾದ್ದರಿಂದ ಫಿರ್ಯಾದುದಾರನಿಗೆ ಅನವಶ್ಯಕವಾಗಿ ಸಮಯ ಮತ್ತು ಹಣದ ನಷ್ಟ ಉಂಟಾಗಿದೆ. ಆದ್ದರಿಂದ, ಮಾಹಿತಿ ಹಕ್ಕು ಅಧಿನಿಯಮ, 2005ರ 19(8)(ಬಿ) ಮೇರೆಗೆ ನಿಹಿತಗೊಂಡಿರುವ ಅಧಿಕಾರಗಳನ್ನು ಚಲಾಯಿಸಿ, ಆಯೋಗವು, ಈ ಮೂಲಕ ಆಯೋಗವು, ಈ ಆದೇಶವನ್ನು ಸ್ವೀಕರಿಸಿದ ದಿನದಿಂದ ಒಂದು ತಿಂಗಳೊಳಗೆ ಆಯೋಗಕ್ಕೆ ತಿಳಿಸುವುದರೊಂದಿಗೆ ಫಿರ್ಯಾದುದಾರನಿಗೆ ನೋಂದಾಯಿತ ಅಂಚೆ ಮುಖಾಂತರ ಡಿ.ಡಿ. ಕಳುಹಿಸಿಕೊಡುವ ಮೂಲಕ 500–00 ರೂ.ಗಳನ್ನು ಸಂದಾಯ ಮಾಡುವ ಮೂಲಕ ಆತನಿಗೆ ನಷ್ಟ ಪರಿಹಾರ ನೀಡಲು ಈ ಮೂಲಕ ಸಾರ್ವಜನಿಕ ಪ್ರಾಧಿಕಾರಿಗೆ ಅಂದರೆ ಮಾಲೂರಿನ ತಹಶೀಲ್ದಾರರಿಗೆ ನಿರ್ದೇಶಿಸಿದೆ. | 500/– | 26/3/2008 |
| 12. | ಕೆಐಸಿ 1259 ಸಿಎಂಒ 2007, ದಿನಾಂಕ 26.7.2007 | ಶ್ರೀ ಸುರೇಶಕುಮಾರ್ ವಿರುದ್ಧ – ಸಾಮಾಅ ಮತ್ತು ನಿರ್ದೇಶಕರು ಪಂಚಾಯತರಾಜ್, ಗ್ರಾಅಪಂರಾ – ಇಲಾಖೆ ಕ.ಸ.ಸ. ಬೆಂಗಳೂರು. | ಫಿರ್ಯಾದುದಾರನು, ಮಾಹಿತಿಯನ್ನು ಪರಿಶೀಲಿಸಿದ್ದು ನೀಡಿರುವ ಈ ಮಾಹಿತಿ ಪರ್ಯಾಪ್ತವಾಗಿದೆ ಎಂದು ಹೇಳಿದ್ದಾನೆ. ಆದರೆ, ಮಾಹಿತಿ ವಿಳಂಬವಾಗಿದ್ದು ಆತ ಕೊಳ್ಳೆಗಾಲದಿಂದ ಬೆಂಗಳೂರಿಗೆ ಬಂದು ಹೋಗುವುದಕ್ಕಾಗಿ ಮಾಡಿರುವ ವೆಚ್ಚಗಳಿಗಾಗಿ ಆತನಿಗೆ 200/– ರೂ.ಗಳಷ್ಟು ನಷ್ಟ ಪರಿಹಾರ ನೀಡಬೇಕಿರುತ್ತದೆ. ತದನುಸಾರವಾಗಿ, ಮಾಹಿತಿ ಹಕ್ಕು ಅಧಿನಿಯಮ, 2005ರ 19 (8) (ಬಿ) ಪ್ರಕರಣದಡಿ ಆಯೋಗಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಆಯೋಗವು ಒಂದು ತಿಂಗಳೊಳಗೆ ಆಯೋಗಕ್ಕೆ ತಿಳಿಸುವುದರೊಂದಿಗೆ ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ ಮುಖಾಂತರ ಕೊಳ್ಳೆಗಾಲದಲ್ಲಿರುವ ವಿಜಯ ಬ್ಯಾಂಕ್‌ಗೆ ಡಿಮ್ಯಾಂಡ್ ಡ್ರಾಫ್ಟ್ ನೀಡುವ ಮೂಲಕ ಫಿರ್ಯಾದುದಾರನಿಗೆ 200/– ರೂ.ಗಳಷ್ಟು ಮೊತ್ತವನ್ನು ಸಂದಾಯ ಮಾಡಬೇಕೆಂದು ಸಾರ್ವಜನಿಕ ಪ್ರಾಧಿಕಾರಿಗೆ ಅಂದರೆ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ನಿರ್ದೇಶಿಸಿದೆ. | 200/– | 1/12/2007 |
| 13. | ಕೆಐಸಿ 1491 ಸಿಓಎಂ 2007 ದಿನಾಂಕ 27.11.2007 | ಶ್ರೀ ಎಸ್.ಬಿ. ಸುರಪುರ ವಿರುದ್ಧ ಸಾಮಾಅ, ವಾಕರಸಾನಿ, ಬಾಗಲಕೋಟೆ. | ಫಿರ್ಯಾದುದಾರನು ಆಯೋಗದ ಮುಂದೆ ಪ್ರಕರಣವನ್ನು ಪ್ರತಿನಿಧಿಸಲು ಸಿರಸಿಯಿಂದ ಬೆಂಗಳೂರಿಗೆ ಬಂದು ಹೋಗುವುದಕ್ಕೆ ಮತ್ತು ಬೆಂಗಳೂರಿನಲ್ಲಿ ತಂಗುವುದಕ್ಕಾಗಿ ಆತ ಮಾಡಿರುವ ವೆಚ್ಚಗಳಿಗಾಗಿ ಮಾಹಿತಿ ಹಕ್ಕು ಅಧಿನಿಯಮ, 2005ರ 19(8) (ಬಿ) ಪ್ರಕರಣದ ಮೇರೆಗೆ ನಷ್ಟ ಪರಿಹಾರ ನೀಡುವಂತೆ ಕೋರಿರುವನು. ಉಭಯ | | |

| | | | | | |
|---|---|---|---|---|---|
| | | | ಪಕ್ಷಕಾರರ ವಿಚಾರಣೆಯನ್ನು ನಡೆಸಿದ ತರುವಾಯ ಆಯೋಗವು, ಒಂದು ತಿಂಗಳೊಳಗೆ ಆಯೋಗಕ್ಕೆ ತಿಳಿಸುವುದರೊಂದಿಗೆ ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ ಮುಖಾಂತರ ಸಿರಸಿಯಲ್ಲಿ ಸಂದಾಯವಾಗುವಂತೆ ಕ್ರಾಸಡ್ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ವಾಕರಸಾನಿ ವು ಶ್ರೀ ವಿ.ಎನ್ ಬೀಳಗಿ ಇವರಿಗೆ 1000/– ರೂ.ಗಳ ನಷ್ಟಪರಿಹಾರ ನೀಡುವಂತೆ ನಿರ್ದೇಶಿಸಿದೆ. ಶ್ರೀ ಪಾರ್ಥಸಾರಥಿ, ವಿಭಾಗೀಯ ನಿಯಂತ್ರಕರು, ವಾಕರಸಾನಿ ಇವರು ಆಯೋಗದ ಈ ನಿರ್ದೇಶನವನ್ನು ಪಾಲಿಸುವಂತೆ ನಿರ್ದೇಶಿಸಲಾಗಿದೆ. | 1000/– | 11.1.2008 |
| 14. | ಕೆಐಸಿ 1772 ಸಿಓಎಂ 2007<br>ದಿನಾಂಕ 11.9.2007 | ಶ್ರೀ ಎನ್. ವೆಂಕಟೇಶ್ – ವಿರುದ್ಧ – ಸಾಮಾಅ ಮತ್ತು ಆಯುಕ್ತರು, ಪುರಸಭೆ, ರಾಬರ್ಟ್‌ಸನ್ ಪೇಟೆ, ಕೆಜಿಎಫ್ | ಪ್ರತಿವಾದಿ ಪರ ವಕಿಲರು ಲಿಖಿತ ಹೇಳಿಕೆ ಸಲ್ಲಿಸಲು ಕಾಲಾವಕಾಶ ಕೋರಿರುವರು. ಈ ಪ್ರಕರಣದಲ್ಲಿ ದಿನಾಂಕ 31.7.2007 ರಂದು ಸಮನು ಹೊರಡಿಸಲಾಯಿತು ಮತ್ತು ಪ್ರತಿವಾದಿಗೆ ಲಿಖಿತ ಹೇಳಿಕೆ ಸಲ್ಲಿಸುವುದಕ್ಕಾಗಿ ಒಂದೂವರೆ ತಿಂಗಳಿಗಿಂತ ಹೆಚ್ಚು ಕಾಲಾವಕಾಶವಿತ್ತೆಂದು ಆಕೆಗೆ ಸೂಚಿಸಲಾಯಿತು. ಆಕೆಯ ಪ್ರಕರಣ ಮುಂದೂಡುವಂತೆ ಕೋರಿದ್ದರಿಂದ ಆಯೋಗವು, ಪ್ರತಿವಾದಿಯು ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ ಮುಖಾಂತರ ಫಿರ್ಯಾದುದಾರನಿಗೆ ಮುವ್ವತ್ತು ದಿನಗಳೊಳಗೆ ಜಾಯೋಗಕ್ಕೆ ತಿಳಿಸುವುದರೊಂದಿಗೆ ಕೆಜಿಎಫ್ ನಲ್ಲಿ ಸಂದಾಯ ವಾಗುವಂತೆ ಡಿ.ಡಿ. ಮೂಲಕ 500 ರೂ.ಗಳ ವೆಚ್ಚ ಸಂದಾಯ ಮಾಡಬೇಕೆಂದು ನಿರ್ದೇಶಿಸಿದೆ. | 500/– | 12/10/2007 |
| 15. | ಕೆಐಸಿ 2030 ಸಿಓಎಂ 2007<br>ದಿನಾಂಕ 1.10.2007 | ಶ್ರೀ ವಿ. ವೆಂಕಟೇಶ್ –ವಿರುದ್ಧ – ಆಯೋಗ್ಯಾಧಿಕಾರಿ, ಮೈಸೂರು ಮಹಾ ನಗರ ಪಾಲಿಕೆ. | ಪ್ರತಿವಾದಿಯು ಅಗತ್ಯಪಡಿಸಲಾದಂತೆ ಆಯೋಗದ ಮುಂದೆ ಹಾಜರಾಗುವುದಾಗಲಿ ಅಥವಾ ಆಯೋಗಕ್ಕೆ ಅನುಸರಣ ವರದಿಯನ್ನು ಕಳುಹಿಸಿಕೊಡುವುದಾಗಲೀ ಮಾಡಿಲ್ಲ ಎಂಬ ಸಂಗತಿಯ ದೃಷ್ಟಿಯಲ್ಲಿ ಈ ವಿಚಾರಣೆಯು ನಿಷ್ಫಲವಾಗಿರುತ್ತದೆ. ಆದ್ದರಿಂದ, ಆಯೋಗವು, ಫಿರ್ಯಾದುದಾರನಾದ ಶ್ರೀ ವೆಂಕಟೇಶ್‌ಗೆ 500/– ರೂ.ಗಳ ವೆಚ್ಚ ನೀಡುವಂತೆ ಐತೀರ್ಪು ನೀಡಿರುತ್ತದೆ ಮತ್ತು ಪ್ರತಿವಾದಿಯು ಈ ಮೊತ್ತವನ್ನು ಆಯೋಗಕ್ಕೆ ತಿಳಿಸುವುದರೊಂದಿಗೆ ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ ಮುಖಾಂತರ ಮೈಸೂರಿನಲ್ಲಿ ಸಂದಾಯವಾಗುವಂತೆ ಕ್ರಾಸಡ್ ಡಿ.ಡಿ. ಮೂಲಕ ಫಿರ್ಯಾದುದಾರನಿಗೆ ಕಳುಹಿಸಿಕೊಡಬೇಕೆಂದು ನಿರ್ದೇಶಿಸಿದೆ. | 500/– | 12.11.2007 |
| 16. | ಕೆಐಸಿ 2384 ಸಿಓಎಂ 2007 ದಿನಾಂಕ 17.01.2008 | ಶ್ರೀ ಎಂ. ಚೌಡಪ್ಪ ವಿರುದ್ಧ ಕಾ.ಅ., ತಾಲ್ಲೂಕು ಪಂಚಾಯತ್, ಶ್ರೀನಿವಾಸಪುರ. | ಆಯೋಗದ ಅಧೀನ ಕಾರ್ಯದರ್ಶಿ ದೂರವಾಣಿ ಮುಖಾಂತರ ಪ್ರತಿವಾದಿಯನ್ನು ಸಂಪರ್ಕಿಸಲು ಯತ್ನಿಸಿದಾಗ ಅವರು ಚುನಾವಣಾ ಕರ್ತವ್ಯದಲ್ಲಿರುವರೆಂದು ತಿಳಿದು ಬಂದಿರುತ್ತದೆ. ಪ್ರತಿವಾದಿಯ ಗೈರುಹಾಜರಿಯಿಂದಾಗಿ ಈ ವಿಚಾರಣೆಯು ನಿಷ್ಫಲವಾಗಿದ್ದರಿಂದ, ಫಿರ್ಯಾದುದಾರ 500/– ರೂ.ಗಳ ವೆಚ್ಚವನ್ನು ಕ್ಲೈಮು ಮಾಡಿರುತ್ತಾನೆ. ಆಯೋಗವು ಈ ವೆಚ್ಚವನ್ನು ಆತನಿಗೆ ನೀಡಬೇಕೆಂದು ತೀರ್ಮಾನಿಸಿದೆ. ತದನುಸಾರವಾಗಿ, ಆಯೋಗವು ಈ ಮೂಲಕ ಶ್ರೀ ಗೋಪಾಲ್, ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತಿ, ಶ್ರೀನಿವಾಸಪುರ ತಾಲ್ಲೂಕು ಇವರಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಶ್ರೀನಿವಾಸಪುರ ಶಾಖೆ ಇಲ್ಲಿ ಸಂದಾಯವಾಗುವಂತೆ ಖಾತೆಗೆ ಸಂದಾಯವಾಗುವ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಫಿರ್ಯಾದುದಾರನಿಗೆ 500 ರೂ.ಗಳ ವೆಚ್ಚವನ್ನು ಸಂದಾಯ ಮಾಡುವಂತೆ ಮತ್ತು ಆಯೋಗಕ್ಕೆ ಅನುಸರಣಾ ವರದಿಯನ್ನು ಕಳುಹಿಸಿಕೊಡುವಂತೆ ನಿರ್ದೇಶಿಸಿದೆ. | 500/– | ವರದಿ ಮಾಡಿಲ್ಲ |
| 17. | ಕೆಐಸಿ 3118 ಸಿಓಎಂ 2007, ದಿನಾಂಕ 2.1.2008 | ಶ್ರೀ ವೆಂಕಟೇಶ್ ಭೋವಿ ವಿರುದ್ಧ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ನಾಲಾ ವಿಭಾಗ, ಹೆಬ್ಬೂರು ತುಮಕೂರು. | ಫಿರ್ಯಾದುದಾರನು, ತಾನು ಬೆಂಗಳೂರಿನಿಂದ ಹೆಬ್ಬೂರಿಗೆ ಬಂದು ಹೋಗುವುದಕ್ಕಾಗಿ ಖರ್ಚು ಮಾಡಿರುವ ಸುಮಾರು 300 ರೂ.ಗಳಷ್ಟು ವೆಚ್ಚವನ್ನು ಪ್ರತಿವಾದಿ ವೈಯಕ್ತಿಕವಾಗಿ ತುಂಬಿಕೊಡುವಂತೆ ಕೇಳಿರುವನು. ತದನುಸಾರವಾಗಿ 19(8) (ಬಿ) ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಆಯೋಗವು ಪ್ರತಿವಾದಿಗೆ ಫಿರ್ಯಾದುದಾರ ಪ್ರಮಾಣೀಕೃತ ಛಾಯಾಪ್ರತಿಗಳನ್ನು ಪಡೆದುಕೊಳ್ಳುವುದಕ್ಕಾಗಿ ಆತನ ಕಚೇರಿಗೆ ಬಂದಾಗ ದಿನಾಂಕ 18.1.2008ರಂದು 300 ರೂ.ಗಳ (ಮುನ್ನೂರು ರೂ.ಗಳು ಮಾತ್ರ) ನಷ್ಟ ಪರಿಹಾರ ಪಾವತಿಸುವಂತೆ ನಿರ್ದೇಶಿಸಿದೆ. | 300/– | 24.3.2008 |

**ಮಾಹಿತಿ ಹಕ್ಕು ಅಧಿನಿಯಮದ 20ನೇ ಪ್ರಕರಣದ ಮೇರೆಗೆ ದಂಡಗಳನ್ನು ವಿಧಿಸಿರುವ ಆದೇಶಗಳು:**

**4.3** ಮಾಹಿತಿ ಹಕ್ಕು ಅಧಿನಿಯಮದ 19(8)(ಸಿ) ಪ್ರಕರಣ ಮತ್ತು 20 (1)ನೇ ಪ್ರಕರಣವು, ಮಾಹಿತಿ ನೀಡುವಲ್ಲಿ ವಿಳಂಬ ಮಾಡುವುದು, ಅಪೂರ್ಣ / ತಪ್ಪುದಾರಿಗೆಳೆಯುವ ಮಾಹಿತಿ ನೀಡುವುದು ಅಥವಾ ಮಾಹಿತಿಯನ್ನು ನಾಶಪಡಿಸುವುದು ಮೊದಲಾದವುಗಳಿಗೆ ಸಂಬಂಧಿಸಿದಂತೆ ತಪ್ಪಿತಸ್ಥ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಅಧಿನಿಯಮದ ಮೇರೆಗೆ ಉಪಬಂಧಿಸಿರುವ ದಂಡಗಳನ್ನು ವಿಧಿಸುವುದಕ್ಕೆ ಕೇಂದ್ರ/ರಾಜ್ಯ ಮಾಹಿತಿ ಆಯೋಗಗಳಿಗೆ ಅಧಿಕಾರ ನೀಡುತ್ತವೆ.

**4.4** ಈ ಮುಂದಿನ ಪಟ್ಟಿಯಲ್ಲಿ ವರ್ಷಾವಧಿಯಲ್ಲಿ ಆಯೋಗವು ವಿಧಿಸಿರುವ ದಂಡಗಳ ಸಾರಾಂಶಗಳನ್ನು ಹೇಳಲಾಗಿದೆ:

| ಕ್ರಮ ಸಂಖ್ಯೆ | ಆದೇಶ ಸಂಖ್ಯೆ ಮತ್ತು ದಿನಾಂಕ | ಪಕ್ಷಕಾರರು | ಆದೇಶದ ಸಾರಾಂಶ | ವಿಧಿಸಿದ ಮೊತ್ತ | ಸಂದಾಯದ ವಿವರಗಳು |
|---|---|---|---|---|---|
| 1. | 437 ಸಿಓಎಂ 7 ಸಿಡಬ್ಲ್ಯು ಕೆಐಸಿ 45 ಸಿಓಎಂ 07 458 ಸಿಓಎಂ 07 ದಿನಾಂಕ 4.9.2007 | ಜೆ.ಎಸ್. ರೇಣುಕ –ವಿರುದ್ಧ– ಶ್ರೀ ತಿಮ್ಮಪ್ಪ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಬೆಂಗಳೂರು. | ದಿನಾಂಕ 31.5.2005ರ ತನ್ನ ಆದೇಶದಲ್ಲಿ ಆಯೋಗವು, ಪ್ರತಿವಾದಿಯು ನಿರ್ಧಿಷ್ಟಪಡಿಸಿದ 30 ದಿನಗಳ ಅವಧಿಯೊಳಗೆ ಫಿರ್ಯಾದುದಾರನಿಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡುವುದಕ್ಕೆ ವಿಫಲನಾಗಿರುತ್ತಾನೆ ಎಂಬುದನ್ನು ಗಮನಕ್ಕೆ ತೆಗೆದುಕೊಂಡಿರುತ್ತದೆ. ಅಧಿನಿಯಮದ 20(1)ನೇ ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಆಯೋಗವು, ನಿರ್ಧಿಷ್ಟಪಡಿಸಿದ ಅವಧಿಯೊಳಗೆ ಸರಿಯಾದ ಮಾಹಿತಿಯನ್ನು ನೀಡುವುದಕ್ಕೆ ವಿಫಲವಾಗಿರುವುದಕ್ಕಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯಾದ ಶ್ರೀ ತಿಮ್ಮಪ್ಪ ಇವರಿಗೆ 10,000/– ರೂ.ಗಳ ದಂಡ ವಿಧಿಸಿರುತ್ತದೆ. ಈ ದಂಡವನ್ನು ಅವರು ವೈಯಕ್ತಿಕವಾಗಿ ಪಾವತಿಸತಕ್ಕದ್ದು. | **10,000/–** | **31.10.2007** |
| 2. | ಕೆಐಸಿ 811 ಸಿಓಎಂ 07 ದಿನಾಂಕ 12.9.2007 | ಕೆ.ವಿ. ಶಿವಕುಮಾರ್ – ವಿರುದ್ಧ – ಸಾಮಾಅ ಮತ್ತು ಆಯುಕ್ತರು ನಗರ ಸಭೆ, ಕೋಲಾರ | ಆಯೋಗವು, ಯಾವುದೇ ಸಮಂಜಸವಾದ ಕಾರಣವಿಲ್ಲದೆ ನಿಗದಿ ಪಡಿಸಿದ ಕಾಲದೊಳಗೆ ಕೋರಿರುವ ಮಾಹಿತಿಯನ್ನು ನೀಡದಿರುವುದಕ್ಕಾಗಿ ಈ ಮೂಲಕ ಶ್ರೀಮತಿ ಸೈದಾ ನಿಲೋಫರ್ ಜಬೀನ್‌ರವರಿಗೆ 1,000/– ರೂ.ಗಳ (ಒಂದು ಸಾವಿರ ರೂ.ಗಳು ಮಾತ್ರ) ದಂಡ ವಿಧಿಸಿರುತ್ತದೆ. | **1000/–** | **25.5.2008** |
| 3. | ಕೆಐಸಿ 262 ಎಪಿಎಲ್ 07 ಸಿ 192 ಎಪಿಎಲ್ 07 ದಿನಾಂಕ 20.11.2007 | ಶ್ರೀ ಪ್ರಕಾಶ್ – ವಿರುದ್ಧ – ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಬಳ್ಳಾರಿ. | ಅರ್ಜಿ ಸಲ್ಲಿಸಿದಾಗ ಕಡತವು ಬಹುಮಟ್ಟಿಗೆ ಪ್ರತಿವಾದಿಯ ಬಳಿಯೇ ಇತ್ತು. ಇದೂ ಅಲ್ಲದೆ, ಆ ಸಮಯದಲ್ಲಿ ಮಾಹಿತಿಯನ್ನು ಉಚಿತವಾಗಿ ಒದಗಿಸಬೇಕಾಗಿದ್ದರೂ ಪ್ರತಿವಾದಿಯು ದಿನಾಂಕ 26.3.2007ರಂದು ಹೆಚ್ಚುವರಿ ಶುಲ್ಕ ಪಾವತಿಸುವಂತೆ ಫಿರ್ಯಾದುದಾರರನ್ನು ಕೇಳಿರುವನು. ಪ್ರತಿವಾದಿಯು, ನನಗೆ ಕಾನೂನಿನ ಉಪಬಂಧಗಳ ಬಗ್ಗೆ ಸಂಪೂರ್ಣವಾಗಿ ಅರಿವಿಲ್ಲದಿರುವುದರಿಂದಾಗಿ ಆತನನ್ನು ಇದೊಂದು ಬಾರಿ ಕ್ಷಮಿಸುವಂತೆ ಹೇಳಿದ್ದಾನೆ. ಈ ಪ್ರಕರಣದಲ್ಲಿ ಗರಿಷ್ಠ 25,000/– ರೂ.ಗಳ ದಂಡ ವಿಧಿಸಬಹುದಾಗಿದ್ದರೂ, ಆಯೋಗವು, ಮಾಹಿತಿ ನೀಡುವುದಕ್ಕೆ ವಿಳಂಬ ಮಾಡಿರುವುದಕ್ಕಾಗಿ ಪ್ರತಿವಾದಿಗೆ 1000/– ರೂ.ಗಳ ದಂಡವನ್ನು ಮಾತ್ರ ವಿಧಿಸಿ ಪರ್ಯಾಪ್ತವಾಗಿದೆಯೆಂದು ಭಾವಿಸಿರುತ್ತದೆ. | **1000/–** | **5.1.2008** |
| 4. | ಕೆಐಸಿ 2051 ಸಿಓಎಂ 08 ದಿನಾಂಕ 20.9.2007 | ಶ್ರೀ ರಮೇಶ್ – ವಿರುದ್ಧ – ಶ್ರೀ ಬಾದರ್ ಪಾಷ, ಜಿಲ್ಲಾ ರಿಜಿಸ್ಟ್ರಾರ್, ಗುಲ್ಬರ್ಗ. | ಪ್ರತಿವಾದಿಯು ಕೋರಿರುವ ಮಾಹಿತಿಯನ್ನು ತನ್ನಲ್ಲಿಯೇ ಇಟ್ಟುಕೊಂಡು ಅದನ್ನು ಎರಡು ತಿಂಗಳಿಗಿಂತ ಹೆಚ್ಚು ವಿಳಂಬ ಮಾಡಿದ ನಂತರ 31.8.07 ರಂದು ಫಿರ್ಯಾದುದಾರನಿಗೆ ನೀಡಿದ್ದಾನೆ. ಪ್ರತಿವಾದಿಯಿಂದ ನೀಡಿರುವ ವಿವರಣೆಯು ಮನವರಿಕೆ ಮಾಡುವಂತಿರುವುದಿಲ್ಲ ಅಥವಾ ಅಂಗೀಕಾರಾರ್ಹ ವಾಗಿರುವುದಿಲ್ಲ. ಆದರೂ ಸಹಾನುಭೂತಿ ದೃಷ್ಟಿಯಿಂದ ಪ್ರತಿವಾದಿಗೆ ಕೇವಲ 500/– ರೂ.ಗಳ ದಂಡವನ್ನು ವಿಧಿಸಲಾಗಿದೆ. | **500/–** | **22.10.2007** |
| 5. | ಕೆಐಸಿ 821 ಸಿಓಎಂ 07 ದಿನಾಂಕ 15.10.2007 | ಶ್ರೀ ಥಾಮಸ್ ಮೂಲಿಮನೆ – ವಿರುದ್ಧ – ಕಾ.ಅ.ತಾಲ್ಲೂಕು ಪಂಚಾಯತಿ, ಮಾನ್ವಿ. | ಪ್ರತಿವಾದಿಗೆ ಎರಡು ಬಾರಿ ಸಮನ್ಸ್‌ಗಳನ್ನು ನೀಡಿದ ನಂತರವೂ ಕೂಡ ಆತ ಫಿರ್ಯಾದುದಾರನಿಗೆ ಕೋರಿರುವ ಮಾಹಿತಿಯನ್ನು ನೀಡದಿರುವ ಪ್ರತಿವಾದಿಯ ಧೋರಣೆಯನ್ನು ಆಯೋಗವು ಗಂಭೀರವಾಗಿ ಗಮನಿಸಿರುತ್ತದೆ. ಆಯೋಗವು ಪ್ರತಿವಾದಿಯ ಮೌಖಿಕ ವಿವರಣೆಯನ್ನು ಸರಿಯೆಂದು ಮತ್ತು ಸಿಂಧುವೆಂದು ಪರಿಗಣಿಸದೆ ಅಧಿನಿಯಮದ 20(1)ನೇ ಪ್ರಕರಣದ ಮೇರೆಗೆ ತನಗೆ ನಿಹಿತವಾದ ಅಧಿಕಾರದ ಮೇರೆಗೆ ಮಾನ್ವಿ ತಾಲ್ಲೂಕಿನ | | |

| | | | | | |
|---|---|---|---|---|---|
| | | | ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಯಾದ ಶ್ರೀ ವೀರ ನಾಯ್ಕರಿಗೆ 10,000/– ರೂ.ಗಳ ದಂಡ ವಿಧಿಸಿದೆ. ರಾಯಚೂರಿನ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾದ ಶ್ರೀ ಅನೀರ್ಘ್ ಸಿರಾಜ್‌ರವರಿಗೆ ಈ 10,000/– ರೂ.ಗಳನ್ನು ತಲಾ 5000/– ರೂ.ಗಳಂತೆ ಎರಡು ಕಂತಿನಲ್ಲಿ ನವೆಂಬರ್ 2007ರಲ್ಲಿ ಸಂದಾಯವಾಗುವ 2007ನೇ ಅಕ್ಟೋಬರ್ ತಿಂಗಳು ಮತ್ತು ಡಿಸೆಂಬರ್ 2007ರಲ್ಲಿ ಸಂದಾಯವಾಗುವ 2007ನೇ ನವೆಂಬರ್ ತಿಂಗಳ ಪ್ರತಿವಾದಿಯ ಸಂಬಳದಿಂದ ಮುರುಗಡೆ ಮಾಡಿಕೊಳ್ಳುವಂತೆ ನಿರ್ದೇಶಿಸಲಾಗಿದೆ. | **5000/–** | **18.1.2009** |
| 6. | ಕೆಐಸಿ 1702 ಸಿಓಎಂ 08 ದಿನಾಂಕ 24.9.2007 | ಶ್ರೀ ನಾರಾಯಣಾಚಾರ್ – ವಿರುದ್ಧ – ಸಾಮಾಅ ಮತ್ತು ಸಹಾಯಕ ಕಾರ್ಯ ಪಾಲಕ ಇಂಜಿನಿಯರ್ ಲೋ.ಇ. ಅರಕಲಗೂಡು. | ಪ್ರತಿವಾದಿ ದಿನಾಂಕ 20.11.07ರಂದು ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವನು. ವಿವರಣೆ ತೃಪ್ತಿಕರವಾಗಿಲ್ಲ. ಪ್ರತಿವಾದಿಯು, ಅರ್ಜಿ ಜೊತೆ ಶುಲ್ಕಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಪೋಸ್ಟಲ್ ಆರ್ಡರ್ ಅನ್ನು ಒಪ್ಪಿಕೊಳ್ಳುವುದಕ್ಕೆ ನಿರಾಕರಿಸಿದ್ದು. ಅದರನಂತರ ಮಾಹಿತಿ ನೀಡುವುದಕ್ಕೆ ವಿಳಂಬ ಮಾಡಿರುತ್ತಾನೆ. ಆಯೋಗವು ಈ ಪ್ರಕರಣದಲ್ಲಿ 25,000/– ರೂ.ಗಳ ಗರಿಷ್ಠ ದಂಡ ವಿಧಿಸುವಂತಿದ್ದರೂ ಸಹಾನುಭೂತಿ ದೃಷ್ಟಿಯಿಂದ ಪ್ರತಿವಾದಿಗೆ 1000/– ರೂ.ಗಳ ದಂಡ ವಿಧಿಸುವುದು ಪರ್ಯಾಪ್ತವಾಗಿದೆಯೆಂದು ಪರಿಗಣಿಸಿರುತ್ತದೆ. ತದನುಸಾರವಾಗಿ, ಮಾಹಿತಿ ಹಕ್ಕು ಅಧಿನಿಯಮ, 2005ರ 20(1)ನೇ ಪ್ರಕರಣದ ಮೇರೆಗೆ ತನ್ನಲ್ಲಿ ನಿಹಿತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಆಯೋಗವು ಈ ಮೂಲಕ, ಲೋಕೋಪಯೋಗಿ ಇಲಾಖೆ, ಅರಕಲಗೂಡು ಉಪವಿಭಾಗದ ಈ ಹಿಂದಿನ ಸಹಾಯ ಕಾರ್ಯಪಾಲಕ ಇಂಜಿನಿಯರ್ ಮತ್ತು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚಿಕ್ಕಪೇಟೆ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಡಿ. ರಾಮೇಗೌಡ ಇವರಿಗೆ 1000/– ರೂ.ಗಳ ದಂಡ ವಿಧಿಸಿರುತ್ತದೆ. | **1000/–** | **16.1.2008** |
ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ತಮ್ಮ ಸಂಸ್ಥೆಯಲ್ಲಿ ಸಾಕಷ್ಟು ಹಿರಿಯರಾಗಿರುವುದು ಅಗತ್ಯವಾಗಿದ್ದು, ಅಧಿನಿಯಮದ ಮೇರೆಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಸಂಪೂರ್ಣ ವ್ಯವಸ್ಥಾಪನಾ ಬೆಂಬಲ ಇರಬೇಕು ಎಂಬುದು ಸಹ ಆಯೋಗದ ಅಭಿಪ್ರಾಯವಾಗಿದೆ. ತಮಗೆ ಅಗತ್ಯ ನೆರವು ನೀಡಬೇಕು ಹಾಗೂ ಅವರಿಗೆ ಸಂಬಂಧಿಸಿದ ದಾಖಲೆಗಳು ಲಭ್ಯವಾಗುವಂತೆ ಮಾಡಬೇಕು ಎಂದು ಇತರರಿಗೆ ನಿರ್ದೇಶನ ನೀಡಲು ಶಕ್ತರಾಗಿರಬೇಕು. ಅವರಿಗೆ ತಕ್ಕಷ್ಟು ತರಬೇತಿಯನ್ನು ನೀಡಬೇಕು.

**VIII.** **ಅಧಿನಿಯಮದ 4(1)(ಎ) ಮತ್ತು 4(1)(ಬಿ) ಪ್ರಕರಣಗಳ ಪಾಲನೆಯ ಬಗ್ಗೆ ಪರಿಶೋಧನೆ:** ದಾಖಲೆಗಳ ಪ್ರಕಟಣೆಯ ಪ್ರವರ್ಗೀಕರಣ ಮತ್ತು ಸೂಚಿಪಟ್ಟಿ ಮಾಡುವ ಅಗತ್ಯತೆಗಳು ಮತ್ತು ಸ್ವಯಂ ಘೋಷಣೆಯ ಮೂಲಕ ಬಹಿರಂಗಪಡಿಸುವುದನ್ನು ಪಾಲನೆಯನ್ನು ಒಂದು ಸ್ವತಂತ್ರ ಏಜೆನ್ಸಿಯಿಂದ ನಿಯತವಾಗಿ ಪರಿಶೀಲನೆ ಮಾಡಿಸಬೇಕು ಎಂಬುದಾಗಿ ಆಯೋಗವು ಅಭಿಪ್ರಾಯಪಟ್ಟಿದೆ.

**IX.** **ತಮ್ಮ ಸ್ವಂತ ದಾಖಲೆಗಳು/ದಾಖಲೆಗಳ ಕೊಠಡಿಗಳನ್ನು ಹೊಂದಿರುವಂಥ ಎಲ್ಲಾ ಸರ್ಕಾರಿ ಕಚೇರಿಗಳನ್ನು ಪ್ರತ್ಯೇಕ ಸಾರ್ವಜನಿಕ ಪ್ರಾಧಿಕಾರಗಳು ಎಂದು ಪರಿಗಣಿಸಬೇಕು:** 4(1)(ಎ) ಪ್ರಕರಣದಲ್ಲಿ, ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ಅಧಿನಿಯಮದ ಮೇರೆಗೆ ಮಾಹಿತಿ ಹಕ್ಕಿನಲ್ಲಿ ಕಲ್ಪಿಸಿರುವ ವಿಧಾನ ಮತ್ತು ನಮೂನೆಯಲ್ಲಿ ತನ್ನ ಎಲ್ಲ ದಾಖಲೆಗಳನ್ನು ಯುಕ್ತವಾಗಿ ಸೂಚೀಕರಣ ಮಾಡಬೇಕು ಮತ್ತು ಸೂಚೀಪಟ್ಟಿ ಮಾಡಿ ನಿರ್ವಹಿಸತಕ್ಕದ್ದು ಮತ್ತು ಸೂಕ್ತಸಮಯದೊಳಗಾಗಿ ಎಲ್ಲ ದಾಖಲೆಗಳನ್ನು ಸೂಕ್ತವಾಗಿ ಗಣಕೀಕರಿಸುವಂತೆ ಮತ್ತು ಸಂಪನ್ಮೂಲಗಳ ಲಭ್ಯತೆಗೆ ಒಳಪಟ್ಟು ಸೂಕ್ತವಾದ ಎಲ್ಲ ದಾಖಲೆಗಳನ್ನು ಗಣಕೀಕರಿಸುವಂತೆ ಮತ್ತು ಅಂತಹ ದಾಖಲೆಗಳು ಸುಲಭವಾಗಿ ದೊರೆಯುವಂತೆ ದೇಶಾದ್ಯಂತ ವಿವಿಧ ಸಿಸ್ಟಂಗಳಲ್ಲಿ ಸಂಪರ್ಕಜಾಲದ ಮೂಲಕ ಸಂಪರ್ಕ ಕಲ್ಪಿಸುವುದನ್ನು ಖಚಿತಪಡಿಸತಕ್ಕದ್ದು. ಕರ್ನಾಟಕ ಮಾಹಿತಿ ಆಯೋಗವು, ಈ ಜವಾಬ್ದಾರಿಯನ್ನು ತಮ್ಮ ಸ್ವಂತ ದಾಖಲೆಗಳು/ದಾಖಲೆಗಳ ಕೊಠಡಿಗಳನ್ನು ನಿರ್ವಹಿಸುವ ಎಲ್ಲಾ ಸರ್ಕಾರಿ ಕಚೇರಿಗಳಿಗೆ ವಹಿಸಬೇಕೆಂದು ನಿರ್ಧರಿಸಿದ್ದು ಅವುಗಳೆಲ್ಲವನ್ನೂ ಸಾರ್ವಜನಿಕ ಪ್ರಾಧಿಕಾರಗಳೆಂದು ಪರಿಗಣಿಸಿದರೆ ಮಾತ್ರವೇ ಹೀಗೆ ಮಾಡಬಹುದಾಗಿರುತ್ತದೆ.

**X.** **ಕಾಗದ ರಹಿತ ಕಾರ್ಯಾರಂಭ:** 4(1)(ಎ) ಪ್ರಕರಣದಲ್ಲಿ, ಸೂಕ್ತವಾಗಿ ಗಣಕೀಕರಿಸಬೇಕಾದ ಎಲ್ಲ ದಾಖಲೆಗಳನ್ನು ಸೂಕ್ತ ಸಮಯದೊಳಗೆ ಮತ್ತು ಸಂಪನ್ಮೂಲಗಳ ಲಭ್ಯತೆಗೆ ಒಳಪಟ್ಟು ಗಣಕೀಕರಿಸಬೇಕೆಂದು ಉಪಬಂಧಿಸಿದೆ. ಆದ್ದರಿಂದ ಆಯೋಗವು, ತನ್ನ ಸಂಸ್ಥೆಯನ್ನು ಭಾರತ ಸರ್ಕಾರದ ಅನುದಾನವನ್ನು ಬಳಸಿಕೊಳ್ಳುವ ಮೂಲಕ "ಕಾಗದ ರಹಿತ ಕಚೇರಿ"ಯನ್ನಾಗಿ ಮಾಡಲು ತೀರ್ಮಾನಿಸಿದೆ. ಇದು ಇತರ ಸರ್ಕಾರಿ ಕಚೇರಿಗಳಿಗೆ ಮಾದರಿಯಾಗುವಂತಿರಬೇಕು. ಎನ್‌ಐಸಿ ಮತ್ತು ಸಿಜಿಜಿಯ ನೆರವನ್ನು ಈ ಯೋಜನೆಗಾಗಿ ಕೋರಲಾಗಿದೆ.

**XI. ಎಲ್ಲಾ ಅಧಿನಿಯಮ, ನಿಯಮ, ಸಂಹಿತೆ, ವಿನಿಯಮ, ಸರ್ಕಾರಿ ಆದೇಶಗಳ ಸಾಫ್ಟ್‌ಕಾಪಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಾಗುವಂತೆ ಮಾಡಬೇಕು:** 4(1)(ಬಿ)(iv)ನೇ ಪ್ರಕರಣದಲ್ಲಿ ದಾಖಲೆಗಳನ್ನು ದಸ್ತಾವೇಜೀಕರಿಸಬೇಕೆಂದು ಅಗತ್ಯಪಡಿಸಿರುವುದರಿಂದ ಸಚಿವಾಲಯದ ಇಲಾಖೆಗಳು ಮತ್ತು ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು ಕೂಡಲೇ, ಎಲ್ಲಾ ಅಧಿನಿಯಮ, ನಿಯಮ, ಸಂಹಿತೆ, ವಿನಿಯಮ ಸರ್ಕಾರಿ ಆದೇಶಗಳ ಸಾಫ್ಟ್‌ಕಾಪಿಗಳನ್ನು ತಮ್ಮ ವೆಬ್‌ಸೈಟುಗಳಲ್ಲಿ ದಾಖಲೀಸಬೇಕು ಮತ್ತು ಪ್ರಕಟಿಸಬೇಕು. ಅನೇಕ ಪ್ರಕರಣಗಳಲ್ಲಿ ಅಧಿನಿಯಮ, ನಿಯಮ ಮತ್ತು ವಿನಿಯಮಗಳನ್ನು ದಾಖಲೀಸಿಲ್ಲ ಎಂಬುದನ್ನು ಆಯೋಗವು ಗಮನಿಸಿದೆ. ಇಲಾಖೆಗಳು ಈ ಗುರಿಯನ್ನು ಪೂರ್ಣಗೊಳಿಸುವ ಹೊಣೆಗಾರರನ್ನಾಗಿ ಮಾಡಬೇಕು ಹಾಗೂ ಅವುಗಳ ವಾರ್ಷಿಕ ವರದಿಯಲ್ಲಿ ಈ ಬಗ್ಗೆ ಪ್ರಮಾಣಪತ್ರವನ್ನು ಒದಗಿಸಬೇಕು.

**XII. ಮಾಹಿತಿ ಹಕ್ಕು ಅಧಿನಿಯಮ, 2005ರ 4(1)(ಬಿ) ಪ್ರಕರಣದ ಮೇರೆಗೆ ನಿರ್ಧಿಷ್ಟರೂಪದ ನಾಗರಿಕಸನ್ನದು /ಸ್ವತಃ ಬಹಿರಂಗಗೊಳಿಸುವುದು:** ಶ್ರೀಮತಿ ರಜನಿ ರಾಜ್ದಾನ್, ಕಾರ್ಯದರ್ಶಿ, ಆಡಳಿತ ಸುಧಾರಣೆಗಳು ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ, ಭಾರತ ಸರ್ಕಾರ ಇವರು, ರಾಜ್ಯ ಸರ್ಕಾರಗಳ ಎಲ್ಲಾ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಆಡಳಿತ ಸುಧಾರಣೆ ಆಯೋಗವು ತನ್ನ ನಾಲ್ಕನೇ ವರದಿಯಲ್ಲಿ ನಾಗರಿಕರ ಸನ್ನದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಅವಶ್ಯಕತೆಯಿರುವುದರ ಬಗ್ಗೆ ಒತ್ತು ನೀಡಿರುವುದನ್ನು ತಿಳಿಸಿದ್ದಾರೆ. ಆಡಳಿತ ಸುಧಾರಣಾ ಆಯೋಗವು, ಸೇವಾ ಮಟ್ಟಗಳನ್ನು ಗೊತ್ತುಪಡಿಸಬೇಕು ಹಾಗೂ ಈ ಸೇವಾ ಮಟ್ಟಗಳನ್ನು ಗೊತ್ತುಪಡಿಸದಿದ್ದರೆ ಪರಿಹಾರಗಳನ್ನು ನಿರ್ಧರಿಸುವ ಮೂಲಕ ನಾಗರಿಕ ಸನ್ನದನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರಬೇಕೆಂದು ಶಿಫಾರಸು ಮಾಡಿದೆ.

ಕರ್ನಾಟಕ ಮಾಹಿತಿ ಆಯೋಗವು ತನ್ನ ಹಲವಾರು ತೀರ್ಪುಗಳಲ್ಲಿ, ಮಾಹಿತಿ ಹಕ್ಕು ಅಧಿನಿಯಮದ 4(1)(ಬಿ) ಪ್ರಕರಣದ ಉಪಬಂಧಗಳಲ್ಲಿ ಗೊತ್ತುಪಡಿಸಿರುವಂತೆ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು (i) ಅದರ ರಚನೆ, ಪ್ರಕಾರ್ಯಗಳು ಮತ್ತು ಕರ್ತವ್ಯಗಳ ಸಂಬಂಧಪಟ್ಟಂತೆ (ii)ಅದರ ಅಧಿಕಾರಿಗಳು ಮತ್ತು ನೌಕರರ ಅಧಿಕಾರಗಳು ಮತ್ತು ಕರ್ತವ್ಯಗಳು; (iii)ಮೇಲ್ವಿಚಾರಣೆ ಮತ್ತು ಉತ್ತರದಾಯಿತ್ವದ ಮಾರ್ಗವೂ ಸೇರಿದಂತೆ ತೀರ್ಮಾನವನ್ನು ಕೈಗೊಳ್ಳುವಲ್ಲಿ ಕ್ರಮವನ್ನು ಅನುಸರಿಸುವ ರೀತಿ; (iv) ಅದರ ಪ್ರಕಾರ್ಯಗಳು ಮುಂತಾದವುಗಳನ್ನು ನಿರ್ವಹಿಸುವುದಕ್ಕಾಗಿ ಅದರಿಂದ ರೂಪಿಸಲಾದ ಸೂತ್ರಗಳು 'ನಾಗರಿಕರ' ಸನ್ನದಿನಂತೆಯೇ ಇರುವುವು. ಹಾಗಾಗಿ, ನಾಗರಿಕರ ಸನ್ನದು ನಿಯಮಿಸಲಾದ ನಮೂನೆಗಳು, ನಮೂನೆಯೊಂದಿಗೆ ಲಗತ್ತಿಸಲಾಗುವ ದಸ್ತಾವೇಜುಗಳೂ ಸೇರಿದಂತೆ ಮಾಹಿತಿಯು ಎಲ್ಲ ರೀತಿಯಲ್ಲೂ ಪೂರ್ಣಗೊಂಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪಟ್ಟಿಯ ಪರಿಶೀಲನೆ,

ಅರ್ಜಿಯನ್ನು ಯಾವ ಅಧಿಕಾರಿಗೆ ವಹಿಸಿಕೊಡಲಾಗಿತ್ತು, ಅರ್ಜಿಗೆ ಸಂಬಂಧಪಟ್ಟಂತೆ ವಿಚಾರಣೆಗಳನ್ನು ಯಾವ ಅಧಿಕಾರಿಯಿಂದ ಮಾಡಲಾಗುತ್ತಿದೆ, ತೀರ್ಮಾನವನ್ನು / ಒದಗಿಸಲಾದ ಸೇವೆಯನ್ನು ಯಾವ ಸಮಯದೊಳಗೆ ನೀಡಲಾಗುವುದೆಂಬುದೂ ಸೇರಿದಂತೆ ಈ ಸೇವೆಯನ್ನು ಒದಗಿಸುವಲ್ಲಿ ಅದರಿಂದ ಅನುಸರಿಸಲಾದ ಕ್ರಮಗಳೊಂದಿಗೆ ನಾಗರಿಕರಿಗೆ ಸಾರ್ವಜನಿಕ ಪ್ರಾಧಿಕಾರವು ಒದಗಿಸಿದ ಸೇವೆಗಳನ್ನು ಪಟ್ಟಿ ಮಾಡಲು ಪ್ರಾರಂಭಿಸತಕ್ಕದ್ದು.

ವಿವಿಧ ಸ್ಥಳಗಳಲ್ಲಿ, ಒಂದೇ ಸ್ವರೂಪದ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಎಲ್ಲಾ ಕಾರ್ಯ ನಿರ್ವಾಹಕರಿಗಾಗಿ ನಾಗರಿಕ ಸನ್ನದುಗಳು ಹಾಗೂ ತಾವಾಗಿಯೇ ಬಹಿರಂಗ ಪಡಿಸುವವರು ಉದಾಹರಣೆಗೆ: ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಇವರೇ ಮುಂತಾದವರು ಹೆಚ್ಚು ಕಡಿಮೆ ರಾಜ್ಯಾದ್ಯಂತ ಒಂದೇ ಬಗೆಯವರಾಗಿರುತ್ತಾರೆ ಎಂಬುದಾಗಿ ಆಯೋಗವು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಆಯೋಗವು, ನಿಯತಕಾಲಿಕವಾಗಿ ಸ್ವಯಂ ಪರಿಶೀಲನಾ ಕ್ರಮದೊಂದಿಗೆ ವಿವಿಧ ಸಾರ್ವಜನಿಕ ಪ್ರಾಧಿಕಾರಗಳಿಗಾಗಿ ಒಂದೇ ನಾಗರಿಕರ ಸನ್ನದುದಾರರಿಗೆ/ತಾವಾಗಿಯೇ ಬಹಿರಂಗಪಡಿಸುವವರಿಗೆ, ಆಡಳಿತಾತ್ಮಕ ತರಬೇತಿ ಸಂಸ್ಥೆ, ಮೈಸೂರು ಇದರ ನೆರವನ್ನು ಕೋರಿದೆ;

**XIII.** ಬಿಪಿಎಲ್ ಕಾರ್ಡ್‌ನ್ನು ಹೊಂದಿರುವವರಿಗೆ 100 ಪುಟಗಳ "ಉಚಿತ" ಮಾಹಿತಿಯನ್ನು ಒದಗಿಸುವುದೂ ಸಹ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಕಷ್ಟಕರವಾಗಿದೆ ಎಂಬುದನ್ನು ಸಹ ಆಯೋಗವು ಗಮನಿಸಿದೆ. ಹಾಗಿದ್ದಾಗ್ಯೂ, ಕೆಲವು ಇಲಾಖೆಗಳಿಗೆ ಒದಗಿಸಲಾಗುತ್ತಿರುವ "ಸಾದಿಲ್ವಾರು ಮೊಬಲಗು" ತೀರಾ ಅಲ್ಪ ಪ್ರಮಾಣದ್ದಾಗಿದೆ. ಆದ್ದರಿಂದ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಈ ಮೊಬಲಗನ್ನು ಸರ್ಕಾರದ ಖಜಾನೆಗೆ ಸಲ್ಲಿಸುವ ಬದಲು ಮಾಹಿತಿಯ ವೆಚ್ಚವೆಂಬಂತೆ ಸಂಗ್ರಹಿಸಲಾದ ಮೊಬಲಗನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಅನುಮತಿಸಬೇಕೆಂದು ಶಿಫಾರಸ್ಸು ಮಾಡಲಾಯಿತು. ಈ ಸಂಬಂಧದಲ್ಲಿ ಅಗತ್ಯವಾದ ಆದೇಶಗಳನ್ನು ಹೊರಡಿಸಬಹುದಾಗಿದೆ.

**XIV.** ಇದುವರೆಗೂ, ಅಧಿನಿಯಮದ 4(1)(ಎ) ಮತ್ತು 4(1)(ಬಿ) ಪ್ರಕರಣದ ಅಡಿಯಲ್ಲಿ "ತನ್ನಷ್ಟಕ್ಕೆ ತಾನೇ" ಮತ್ತು ಕ್ರಿಯಾತ್ಮಕವಾಗಿ ಘೋಷಣೆಗಳನ್ನು ಪಾಲಿಸಲು ಮತ್ತು ಪ್ರಕಟಿಸಲು ವಿಫಲವಾಗಿರುವುದರಿಂದ, ಸಾರ್ವಜನಿಕ ಪ್ರಾಧಿಕಾರಗಳು (ಕಚೇರಿಯ ಮುಖ್ಯಸ್ಥರು) ಹೆಚ್ಚಿನ ಆಸಕ್ತಿ ತೆಗೆದುಕೊಂಡಿಲ್ಲದಿರುವುದು ಕಂಡು ಬಂದಿದೆ. ಆದ್ದರಿಂದ, ಸಾರ್ವಜನಿಕ ಪ್ರಾಧಿಕಾರಗಳನ್ನು ಇದಕ್ಕಾಗಿ ಹೊಣೆಗಾರರನ್ನಾಗಿ ಮಾಡತಕ್ಕದ್ದು. 20(1)ನೇ ಪ್ರಕರಣದ ಅಡಿಯಲ್ಲಿ ದಂಡಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗಿಂತ ಕಚೇರಿಯ ಮುಖ್ಯಸ್ಥರ ಮೇಲೆ ವಿಧಿಸುವುದು ಸೂಕ್ತವಾಗಿರುತ್ತದೆ.

0–0–0–0–0–0

# ಅನುಬಂಧ

**2007–2008ನೇ ವರ್ಷದಲ್ಲಿನ ಆಯೋಗದ ಕೆಲವು ಮುಖ್ಯ ಆದೇಶಗಳು:**

ಪರಿಶೀಲನೆಯಂತೆ, ಈ ವರ್ಷದಲ್ಲಿ ಸಾರ್ವಜನಿಕ ದಾಖಲೆಗಳ ನಿರ್ವಹಣೆ, ವ್ಯವಸ್ಥಾಪನೆಯೂ ಸೇರಿದಂತೆ ಮಾಹಿತಿ ಹಕ್ಕು ಅಧಿನಿಯಮದ ಸೂಕ್ತ ಮತ್ತು ಪರಿಣಾಮಕಾರಿ ಅನುಷ್ಠಾನದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಂದ ಅನುಸರಿಸಬೇಕಾದ ಸಾಮಾನ್ಯ ತತ್ವಗಳು, ಮಾರ್ಗಸೂಚಿಗಳು ಮತ್ತು ಕಾರ್ಯ ವಿಧಾನಗಳನ್ನು ವಿಧಿಸುವ ಹಲವಾರು ಆದೇಶಗಳನ್ನು ಆಯೋಗವು ಹೊರಡಿಸಿದೆ.

ಮಾಹಿತಿ ಹೊಂದಿರುವವರ, ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮತ್ತು ಸಾರ್ವಜನಿಕ ಪ್ರಾಧಿಕಾರಗಳ ಉಲ್ಲೇಖ ಮತ್ತು ಮಾರ್ಗದರ್ಶನಕ್ಕಾಗಿ ಆದೇಶಗಳ ಸಂಬಂಧಪಟ್ಟ ಉದ್ಧೃತ ಭಾಗಗಳನ್ನು ಒದಗಿಸಲು ಈ ಅಧ್ಯಾಯದಲ್ಲಿ ಪ್ರಯತ್ನ ಪಡಲಾಗಿದೆ.

**(i) 2(ಎಚ್) ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರದ ನಿರ್ವಹಣೆ:**

**ಕೆಸಿಐ 1231 ಕಾಂ 2006**
**ಕರ್ನಾಟಕ ಮಾಹಿತಿ ಆಯೋಗ**
(ಶ್ರೀ ಎಸ್.ಎನ್.ಅಂಗಡಿ ವಿರುದ್ಧ ಕಾರ್ಯದರ್ಶಿ, ಬಸವ ಸಮಿತಿ, ಬೆಂಗಳೂರು)
**ಆದೇಶ**

**10.12.2007**

1. ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ, ದಿನಾಂಕ 22.9.2006ರ ತನ್ನ ಕೋರಿಕೆಯಲ್ಲಿ ಪ್ರತಿವಾದಿಯನ್ನು ಫಿರ್ಯಾದಿದಾರನು – ಬೆಂಗಳೂರಿನ ಹೈಗ್ರೌಂಡ್ಸ್‌ನಲ್ಲಿರುವ ಬಸವ ಸಮಿತಿ ಕಚೇರಿಗಾಗಿ ನಿವೇಶನ ಮಂಜೂರಾತಿ, ಬಸವ ಸಮಿತಿ ಟ್ರಸ್ಟ್‌ನ ಸ್ಥಾಪನೆ, ಹಲವಾರು ಕಾರಣಗಳಿಗಾಗಿ ಸಮಿತಿಯು ವಹಿಸಿದ ವೆಚ್ಚ – ಇವೇ ಮುಂತಾದವು ಸೇರದಂತೆ ಒಂಭತ್ತು ಬಾಬುಗಳಿಗೆ ಸಂಬಂಧಪಟ್ಟಂತೆ ಕಾಗದಪತ್ರಗಳು/ದಸ್ತಾವೇಜುಗಳನ್ನು ಅಪೇಕ್ಷಿಸಿರುವುದಾಗಿ ಹೇಳಿದನು.
2. ಇಲ್ಲಿ, ಇನ್ನು ಮುಂದೆ ಸಮಿತಿಯು ಪ್ರತಿವಾದಿ ಎಂಬುದಾಗಿ ಉಲ್ಲೇಖಿಸಲಾಗುವುದು. ಅದು, ದಿನಾಂಕ 19.10.2006ರಂದು ಉತ್ತರವನ್ನು ಅವನಿಗೆ ಕಳುಹಿಸಿದ್ದು ಅದರಲ್ಲಿ, ಕೋರಲಾದ ಮಾಹಿತಿಯ ಕೆಲಭಾಗವನ್ನು ನೀಡಲಾಗಿರುವುದಾಗಿ ತಿಳಿಸಿದೆ. ಮೇಲ್ಕಂಡ ವಿವಾದಾಂಶಗಳ ಮೇಲಿನ ಫಿರ್ಯಾದುದಾರನ ಅರ್ಜಿಯು ಜಿಲ್ಲಾ ರಿಜಿಸ್ಟ್ರಾರರಲ್ಲಿ ಇತ್ಯರ್ಥದಲ್ಲಿದೆ ಎಂದು ಸಹ ತಿಳಿಸಿತು. ಅಲ್ಲದೇ, ಅದೇ ವಿವಾದಗಳನ್ನು 5.2.06 ಮತ್ತು 10.9.2006ರಂದು ನಡೆದ ಸಂಘದ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಫಿರ್ಯಾದಿದಾರನು ಎತ್ತಿದ್ದು ಆ ವಿವಾದಾಂಶಗಳನ್ನು ಚರ್ಚಿಸಲಾಯಿತು ಮತ್ತು ಮಾಹಿತಿಯನ್ನು ಪದಾಧಿಕಾರಿಗಳಿಂದ ಒದಗಿಸಲಾಯಿತು. ಕೆಲವು ವಿವಾದಾಂಶಗಳ ಮೇಲೆ ಸಮಿತಿಯು ಫಿರ್ಯಾದಿದಾರನನ್ನು ಸರ್ಕಾರ/ಸಂಬಂಧಪಟ್ಟ ಪ್ರಾಧಿಕಾರಗಳನ್ನು ಕಾಣುವಂತೆ ಕೇಳಿತು.
3. ಉತ್ತರದಿಂದ ಬಾಧಿತರಾದ ಫಿರ್ಯಾದುದಾರ ಆ ದೂರನ್ನು ಆಯೋಗದ ಮುಂದೆ ದಾಖಲಿಸಿದನು. ತಾನು ಕೇಳಿದ ದಾಖಲೆಗಳನ್ನು ನೋಡುವ ಅವಕಾಶವನ್ನು ಪ್ರತಿವಾದಿಯು ತನಗೆ ನೀಡದೆ ಅದಕ್ಕೆ ಪ್ರತಿಯಾಗಿ ಸಂಬಂಧಪಟ್ಟ ಪ್ರಾಧಿಕಾರಗಳನ್ನು ಅಂಥ ಪ್ರಾಧಿಕಾರಗಳ ಪದನಾಮವನ್ನು ನಿರ್ಧಿಷ್ಟಪಡಿಸದೆ ಕಾಣಲು ತಿಳಿಸಿರುವುದಾಗಿ, ಅದೂ ಅಲ್ಲದೇ, ಅವನು ಒಂದು ವೇಳೆ ಮಾಹಿತಿಯು ಸಾರ್ವಜನಿಕ

ಪ್ರಾಧಿಕಾರದಿಂದ ಲಭ್ಯವಾದಲ್ಲಿ ವಾದಿಯು ಅಧಿನಿಯಮದ 6ನೇ ಪ್ರಕರಣದ ಅಡಿಯಲ್ಲಿ ಅಂಥ ಸಾರ್ವಜನಿಕ ಪ್ರಾಧಿಕಾರಕ್ಕೆ ಅರ್ಜಿಯನ್ನು ವರ್ಗಾಯಿಸತಕ್ಕದ್ದೆಂದು ಹೇಳಿದನು.

4. 25.01.2007ರಂದು ನಡೆದ ಮೊದಲನೇ ಸುನಾವಣೆಯಲ್ಲಿ ಪ್ರತಿವಾದಿಯು ಅದು ಒಂದು ಬಾರಿ ಅಲ್ಪ ಅನುದಾನವನ್ನು ಪಡೆದಿದ್ದರೂ ಸಹ, ಸರ್ಕಾರದಿಂದ ಗಣನೀಯ ಹಣಕಾಸು ನೆರವನ್ನು ಪಡೆದಿಲ್ಲವೆಂದು ಹೇಳಿದನು. ಆದ್ದರಿಂದ, ಅದು ಅಧಿನಿಯಮದ 2(ಎಚ್) ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವಲ್ಲ ಮತ್ತು ಕೋರಿದ ಮಾಹಿತಿಯನ್ನು ಒದಗಿಸುವ ಅಗತ್ಯವಿಲ್ಲ. ಅವನು, ತನ್ನ ವಾದಕ್ಕೆ ಬೆಂಬಲವಾಗಿ 2004–05 ಮತ್ತು 2005–06ನೇ ಸಾಲಿಗಾಗಿ ಸಂಘದ ವಾರ್ಷಿಕ ವರದಿಯನ್ನು ಸಹ ದಾಖಲು ಮಾಡಿದನು.

5. ತದನಂತರ, ಪ್ರತಿವಾದಿಯು, ತನ್ನ ಆಕ್ಷೇಪಣೆಗಳ ಹೇಳಿಕೆಯನ್ನು ದಿನಾಂಕ 23.01.2007ರಂದು ದಾಖಲಿಸಿದನು. ಫಿರ್ಯಾದಿದಾರನು ತನ್ನ ಪ್ರತ್ಯುತ್ತರವನ್ನು ದಿನಾಂಕ 8.3.2007ರಂದು ದಾಖಲಿಸಿದನು. ಪ್ರತಿವಾದಿಯು, ತನ್ನ ಲಿಖಿತ ಪ್ರತಿಕ್ರಿಯೆಯನ್ನು ದಿನಾಂಕ 8.6.2007ರಂದು ಪ್ರತ್ಯುತ್ತರದಾರನಿಗೆ ನೀಡಿದನು. ಪ್ರತಿವಾದಿ ಮತ್ತು ಫಿರ್ಯಾದಿದಾರರು ದಿನಾಂಕ 5.7.07. ಮತ್ತು 5.9.07ರಂದು ಮತ್ತಷ್ಟು ಲಿಖಿತ ಹೇಳಿಕೆಗಳನ್ನು ದಾಖಲ್ಮಾಡಿದರು. 14.9.2007ರಂದು ಮೌಖಿಕವಾದ ವಿವಾದಗಳನ್ನು ಆಲಿಸಲಾಯಿತು ಮತ್ತು ಆದೇಶಗಳನ್ನು 10.12.2007ರಂದು ಉಚ್ಚರಿಸಲು ಕಾಯ್ದಿರಿಸಲಾಯಿತು.

**6. ಈ ವ್ಯವಹರಣೆಯಲ್ಲಿ ತೀರ್ಮಾನಿಸಬೇಕಾದ ಒಂದೇ ಒಂದು ವಿವಾದಾಂಶವೆಂದರೆ, ಪ್ರತಿವಾದಿ ಬಸವ ಸಮಿತಿ ಬೆಂಗಳೂರು, ಇದು ಮಾಹಿತಿ ಹಕ್ಕು ಅಧಿನಿಯಮ, 2005ರ 2(ಹೆಚ್) ಪ್ರಕರಣದ ಅಡಿಯಲ್ಲಿ ಒಂದು ಸಾರ್ವಜನಿಕ ಪ್ರಾಧಿಕಾರವಾಗಿದೆಯೇ ಎಂಬುದು. ಸದರಿ ಪ್ರಕರಣದ ಅನುಸಾರ "ಸಾರ್ವಜನಿಕ ಪ್ರಾಧಿಕಾರ" ಎಂದರೆ,**

(ಎ) ಸಂವಿಧಾನದ ಮೂಲಕ ಅಥವಾ ಅದರ ಅಡಿಯಲ್ಲಿ;

(ಬಿ) ಸಂಸತ್ತಿನಿಂದ ಮಾಡಲಾದ ಯಾವುದೇ ಇತರ ಕಾನೂನಿನ ಮೂಲಕ;

(ಸಿ) ರಾಜ್ಯ ವಿಧಾನ ಮಂಡಲದಿಂದ ಮಾಡಲಾದ ಯಾವುದೇ ಇತರ ಕಾನೂನಿನ ಮೂಲಕ

(ಡಿ) ಸಮುಚಿತ ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ಅಥವಾ ಮಾಡಲಾದ ಆದೇಶದ ಮೂಲಕ

–ಸ್ಥಾಪಿತವಾದ ಅಥವಾ ರಚಿತವಾದ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಅಥವಾ ಸ್ವಯಂ ಆಡಳಿತ ಸಂಸ್ಥೆ ಮತ್ತು ಇದು –

**(i) ಸಮುಚಿತ ಸರ್ಕಾರದ ಒಡೆತನಕ್ಕೆ, ನಿಯಂತ್ರಣಕ್ಕೆ ಒಳಪಟ್ಟ ಅಥವಾ ಅಂಥ ಸರ್ಕಾರ ಒದಗಿಸಿದ ಗಣನೀಯ ಪ್ರಮಾಣದ ಹಣಕಾಸು ಪಡೆದ ನಿಕಾಯ;**

**(ii) ಸಮುಚಿತ ಸರ್ಕಾರ ಒದಗಿಸಿದ ನಿಧಿಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಗಣನೀಯ ಪ್ರಮಾಣದ ಹಣಕಾಸು ನೆರವು ಪಡೆದ ಸರ್ಕಾರೇತರ ಸಂಸ್ಥೆಯನ್ನು – ಒಳಗೊಳ್ಳುತ್ತದೆ.**

7. ಫಿರ್ಯಾದಿದಾರನು, ಪ್ರತಿವಾದಿ ಎರಡು ಕಾರಣಗಳಿಗಾಗಿ ಸಾರ್ವಜನಿಕ ಪ್ರಾಧಿಕಾರವಾಗಿರುತ್ತದೆ ಎಂದು ವಾದಿಸಿದನು. ಮೊದಲನೆಯದಾಗಿ, ಇದು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಣಿಯಾದ ಒಂದು ಸಂಘವಾಗಿದೆ ಮತ್ತು ಅದರಿಂದಾಗಿ, ರಾಜ್ಯ ವಿಧಾನ ಮಂಡಲದಿಂದ ಮಾಡಿದ ಯಾವುದೇ ಇತರೆ ಕಾನೂನಿನಿಂದ ಸ್ಥಾಪನೆಗೊಂಡ ಒಂದು ಸಂಸ್ಥೆ ಎಂಬಂತೆ ಮಾಹಿತಿ ಹಕ್ಕು ಅಧಿನಿಯಮದ 2(ಹೆಚ್) ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಬರುತ್ತದೆ. ಎರಡನೆಯದಾಗಿ, ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡರಿಂದಲೂ ಅನುದಾನ ಸ್ವೀಕರಿಸುತ್ತದೆ, ಹಾಗಿರುವಲ್ಲಿ, ಅದು, ಸರ್ಕಾರದಿಂದ ಒದಗಿಸಲಾದ ನಿಧಿಗಳಿಂದ ಸಹ ಗಣನೀಯ ಹಣಕಾಸು ಪಡೆಯುತ್ತಿರುವ ಒಂದು ನಿಕಾಯವೂ ಆಗಿದೆ.

8. ಆಯೋಗವು, ಉಭಯ ಪಕ್ಷಕಾರರಿಂದ ಈ ಎರಡು ಒಳ ವಿವಾದಾಂಶಗಳನ್ನು ಆಲಿಸಿತು. ಪ್ರತಿವಾದಿ ಸಮಿತಿ ಒಂದು ಸಂಘವಾಗಿದ್ದು ರಾಜ್ಯ ವಿಧಾನ ಮಂಡಲದಿಂದ ಮಾಡಿದ ಕಾನೂನಿನ ಮೂಲಕ

ಸ್ಥಾಪನೆಯಾಗಿದ್ದು, ಸಂಘಗಳ ಕಾನೂನಿನ ಮೂಲಕ ಸ್ಥಾಪನೆಯಾಗಿಲ್ಲವೆಂಬ ಕಾರಣದ ಮೇಲೆ ಅದನ್ನು ಸಾರಾಸಗಟ ತಿರಸ್ಕರಿಸಲಾಗಿದೆ. ಅವುಗಳು, ಕೇವಲ ಕಾನೂನಿನ ಅಡಿಯಲ್ಲಿ ಮಾತ್ರ ನೋಂದಣಿಗೊಂಡಿದ್ದು ಈ ಉದ್ದೇಶಕ್ಕಾಗಿಯೇ ಮಾಡಲಾದ ಕಾನೂನಿನ ಮೂಲಕ ಅನುವರ್ತಿಸಬೇಕಾಗಿತ್ತು ಎಂದು ವಾದಿಸಿದನು. ಇಲ್ಲಿ ಯಾವುದೇ ಸಂದಿಗ್ಧತೆಗೆ ಅಥವಾ ಸ್ಪಷ್ಟತೆಗೆ ಅವಕಾಶ ಇರುವುದಿಲ್ಲವೆಂದು ಮತ್ತು ಮುಂದುವರೆದು, ಈ ಒಳ ವಿವಾದಾಂಶವನ್ನು ಅನಾವಶ್ಯಕವಾಗಿ ವಿಸ್ತರಿಸುವ ಅಗತ್ಯವಿಲ್ಲವೆಂದು ಆಯೋಗವು ಅಭಿಪ್ರಾಯಪಟ್ಟಿದೆ.

9. ಎರಡನೇ ಒಳ ವಿವಾದಾಂಶವು, ಸಂಗತಿಗಳ ವಿವಾದಾಂಶವಾಗಿದೆ. ಪ್ರತಿವಾದಿ ಸಂಘವು ಸರ್ಕಾರದಿಂದ ಗಣನೀಯವಾಗಿ ಹಣಕಾಸು ಪಡೆಯುತ್ತಿದೆಯೇ ಎಂಬುದನ್ನು ಫಿರ್ಯಾದಿದಾರನು ಹೇಳಬೇಕಾಗಿದೆ. "ಗಣನೀಯವಾಗಿ ಹಣಕಾಸು" ಎಂಬ ಪದವನ್ನು ಮಾಹಿತಿ ಹಕ್ಕು ಅಧಿನಿಯಮ, 2005ರ ಅಡಿಯಲ್ಲಿ ಪರಿಭಾಷಿಸಲಾಗಿಲ್ಲ. ಆದ್ದರಿಂದ, ಈ ಆಯೋಗವು, ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರ (ಸೇವಾ ಕರ್ತವ್ಯಗಳು, ಅಧಿಕಾರಗಳು ಮತ್ತು ಷರತ್ತುಗಳು) ಅಧಿನಿಯಮ, 1971 ರಲ್ಲಿ ಒಳಗೊಂಡ ಪರಿಭಾಷೆಯ ಪದಗಳನ್ನೇ ಅಂಗೀಕರಿಸಿದೆ. ಅಧಿನಿಯಮದ 14(1)ನೇ ಪ್ರಕರಣ ಮತ್ತು 1'4(2)ನೇ ಪ್ರಕರಣದ ವಿವರಣೆಗಳನ್ನು ಈ ಮುಂದಿನಂತೆ ಓದಲಾಗುತ್ತದೆ:

**"ವಿವರಣೆ: ಆರ್ಥಿಕ ವರ್ಷದಲ್ಲಿ, ಭಾರತದ ಸಂಚಿತ ನಿಧಿಯಿಂದ ಅಥವಾ ವಿಧಾನ ಸಭೆಯನ್ನು ಹೊಂದಿರುವ ಯಾವುದೇ ರಾಜ್ಯದ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶದ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ನೀಡಿದ ಅನುದಾನ ಅಥವಾ ಸಾಲವು ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯದ್ದಾಗಿಲ್ಲದಿರುವಲ್ಲಿ ಮತ್ತು ಅಂಥ ಅನುದಾನ ಅಥವಾ ಸಾಲವು ಆ ಸಂಸ್ಥೆ ಅಥವಾ ಪ್ರಾಧಿಕಾರದ ಒಟ್ಟು ವೆಚ್ಚದ ಶೇಕಡಾ ಎಪ್ಪತ್ತೈದರಷ್ಟಕ್ಕಿಂತ ಕಡಿಮೆ ಇಲ್ಲದಿರುವಲ್ಲಿ, ಅಂಥ ಸಂಸ್ಥೆ ಅಥವಾ ಪ್ರಾಧಿಕಾರವನ್ನು ಈ ಉಪ ಪ್ರಕರಣದ ಉದ್ದೇಶಗಳಿಗಾಗಿ ಸಂದರ್ಭಾನುಸಾರ ಅಂಥ ಅನುದಾನ ಅಥವಾ ಸಾಲಗಳ ಮೂಲಕ ಗಣನೀಯವಾಗಿ ಹಣಕಾಸು ಪಡೆದ ಸಂಸ್ಥೆಗಳೆಂದು ಭಾವಿಸತಕ್ಕದ್ದು, (2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು, ಸಂದರ್ಭಾನುಸಾರ ರಾಷ್ಟ್ರಪತಿಯವರ ಅಥವಾ ವಿಧಾನ ಸಭೆಯನ್ನು ಹೊಂದಿರುವ ರಾಜ್ಯದ ರಾಜ್ಯಪಾಲರ ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರರ ಪೂರ್ವಾನುಮೋದನೆಯನ್ನು ಪಡೆದು, ಆರ್ಥಿಕ ವರ್ಷದಲ್ಲಿ ಒಂದು ಕೋಟಿ ರೂಪಾಯಿಗಳಿಗಿಂತ ಕಡಿಮೆ ಇಲ್ಲದ, ಸಂದರ್ಭಾನುಸಾರ ಭಾರತದ ಸಂಚಿತ ನಿಧಿಯಿಂದ ಅಥವಾ ವಿಧಾನ ಸಭೆಯನ್ನು ಹೊಂದಿದ ಯಾವುದೇ ರಾಜ್ಯ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶದಿಂದ ಅಂಥ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ಅನುದಾನ ಅಥವಾ ಸಾಲವನ್ನು ಪಡೆದ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಲೆಕ್ಕ ಪರಿಶೋಧನೆ ಮಾಡಬಹುದು.**

10. ಮೇಲಿನ ಉಪಬಂಧಗಳ ತರ್ಕ ಶಾಸ್ತ್ರದನುಸಾರ ಒಂದು ಸಂಸ್ಥೆಯು, ಮೊದಲು ಬರುವ ಹಿಂದಿನ ಮೂರು ವರ್ಷಗಳ ಯಾವುದೇ ಸಮಯದಲ್ಲಿ ಸರ್ಕಾರದಿಂದ,– (i) ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇಲ್ಲದಂತೆ ಹಣ ಪಡೆದಿದ್ದಲ್ಲಿ ಮತ್ತು ಆ ಸಂಸ್ಥೆ ಅಥವಾ ಪ್ರಾಧಿಕಾರದ ಒಟ್ಟು ವೆಚ್ಚದ ಶೇಕಡಾ ಎಪ್ಪತ್ತೈದು ಭಾಗವನ್ನು ಪಡೆದಿರುವಲ್ಲಿ ಅಥವಾ (ii) ಒಂದು ಕೋಟಿ ರೂಪಾಯಿಗಿಂತ ಕಡಿಮೆ ಇಲ್ಲದಂತೆ ಹಣ ಪಡೆದಿರುವಲ್ಲಿ, ಆಗ, ಆ ಸಂಸ್ಥೆಯು ಮಾಹಿತಿ ಹಕ್ಕು ಅಧಿನಿಯಮದ 3(ಹೆಚ್) ಪ್ರಕರಣದ ಉದ್ದೇಶಕ್ಕಾಗಿ ಸರ್ಕಾರದಿಂದ ಗಣನೀಯವಾಗಿ ಹಣಕಾಸನ್ನು ಪಡೆದಿದೆ ಎಂದು ಭಾವಿಸಬಹುದಾಗಿದೆ ಎಂಬಂಥ ಮಾನದಂಡವನ್ನು ಆಯೋಗವು ಅನುಸರಿಸುತ್ತಿದೆ ಎಂದು ತಿಳಿಯಬಹುದು. ಈ ಮಾನದಂಡವನ್ನು 8.6.2007ರಂದು ನಡೆದ ವಿಚಾರಣೆಯ ಸಂದರ್ಭದಲ್ಲಿ ಪಕ್ಷಕಾರರೊಂದಿಗೆ ಚರ್ಚಿಸಲಾಯಿತು ಮತ್ತು ತಮ್ಮ ಅಭಿಪ್ರಾಯಗಳನ್ನು 30 ದಿನಗಳೊಳಗೆ ಆಯೋಗದ ಮುಂದೆ ಇಡುವಂತೆ ಕೇಳಲಾಯಿತು. ಯಾವೊಬ್ಬ ಪಕ್ಷಕಾರರು ಈ ಮಾನದಂಡಕ್ಕೆ ಆಕ್ಷೇಪಣೆ ಸಲ್ಲಿಸದಿರುವುದರಿಂದ ಮತ್ತು ಇದರಿಂದಾಗಿ, ಈ ಪ್ರಕರಣಗಳಲ್ಲೂ ಸಹ ಆಯೋಗವು ಇದೇ ಮಾನದಂಡವನ್ನು ಅನುಸರಿಸಿತು.

11. ಪ್ರತಿವಾದಿ ಸಮಿತಿ, ತನ್ನ ಹಿಂದಿನ ಮೂರು ವರ್ಷಗಳ ಲೆಕ್ಕಗಳನ್ನು ಸಲ್ಲಿಸುವಂತೆ ಅದನ್ನು ಕೇಳಲಾಯಿತು ಮತ್ತು ಅದು 2004–05, 2005–06 ಮತ್ತು 2006–07ನೇ ವರ್ಷಗಳಿಗಾಗಿನ ಲೆಕ್ಕಗಳನ್ನು ನೀಡಿತು. ಈ ಲೆಕ್ಕಗಳಿಂದ ಕಂಡು ಬಂದದ್ದೆಂದರೆ, ಸಮಿತಿಗಾಗಿ ಪಡೆದ ಲೆಕ್ಕಗಳನ್ನು ಪ್ರತ್ಯೇಕವಾಗಿಟ್ಟಿರುವುದು ಮತ್ತು ಅದರಿಂದ ನಡೆಸಲಾಗುತ್ತಿರುವ ಐದು ಸಂಸ್ಥೆಗಳು ವಿಭಾಗಗಳನ್ನು ಎಂದರೆ ಬಸವ ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನಗಳ ಸಂಸ್ಥೆ, ಬಿ.ಆರ್.ಸಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಬಸವ ಕಾರ್ಯನಿರತ ಮಹಿಳೆಯರ ವಸತಿ ನಿಲಯ, ಬಸವ ಪತ್ರಿಕೆ ವಿಭಾಗ ಮತ್ತು ಬಸವ ಪ್ರಕಟಣಾ ವಿಭಾಗಗಳ ಲೆಕ್ಕಗಳನ್ನು ಪ್ರತ್ಯೇಕವಾಗಿಟ್ಟಿರುವುದು ಕಂಡು ಬರುತ್ತದೆ. ತರುವಾಯ, ಈ ಐದು ಸಂಸ್ಥೆಗಳ/ವಿಭಾಗಗಳ ಲೆಕ್ಕಗಳಲ್ಲಿನ ಹೆಚ್ಚುವರಿ/ಕೊರತೆಯನ್ನು ಬಸವ ಸಮಿತಿಯ ಆದಾಯ ಮತ್ತು ವೆಚ್ಚವೆಂಬಂತೆ ಲೆಕ್ಕಗಳಲ್ಲಿ ಬರೆಯಲಾಗಿದೆ.

12. 2006–07ರಲ್ಲಿ, ಬಸವ ಪತ್ರಿಕೆಯು, 60,000 ರೂಪಾಯಿಗಳ ಅನುದಾನವನ್ನು ಮತ್ತು ಬಸವ ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ಸಂಸ್ಥೆಯು 2,93,479 ರೂಪಾಯಿಗಳ ಅನುದಾನವನ್ನು (ದಯವಿಟ್ಟು 2006–07ನೇ ಸಾಲಿನ ವಾರ್ಷಿಕ ವರದಿಯ 42 ಎಂ ನ 106ನೇ ಪುಟ ನೋಡಿ) 2005–06ನೇ ಸಾಲಿನ ಪತ್ರಿಕೆಯು, 69,000 ರೂಪಾಯಿಗಳ ಅನುದಾನವನ್ನು ಮತ್ತು ಬಸವ ನ್ಯಾಚುರೋಪತಿ ಮತ್ತು ಯೋಗವಿಜ್ಞಾನ ಸಂಸ್ಥೆಯು 3,00,000/– ರೂಪಾಯಿಗಳ ಅನುದಾನವನ್ನು (ದಯವಿಟ್ಟು 2005–06ನೇ ಸಾಲಿನ ವಾರ್ಷಿಕ ವರದಿಯ 41 ಓ ನ 116ನೇ ಪುಟ ನೋಡಿ)ಸ್ವೀಕರಿಸಿದವು. 2004–05ನೇ ಸಾಲಿಗಾಗಿ ಬಸವ ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ಸಂಸ್ಥೆಗಾಗಿ 1,50,000 ರೂಪಾಯಿಗಳ ಅನುದಾನ ತೋರಿಸಲಾಗಿದೆ.

13. ಆದ್ದರಿಂದ ಅನುದಾನಗಳು, ಸರ್ಕಾರದಿಂದ ಗಣನೀಯವಾಗಿ ಹಣಕಾಸು ಪಡೆದ ಪರಿಭಾಷೆಯೊಳಗೆ ಸಮಿತಿಯನ್ನು ತರಲು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರ (ಸೇವಾ ಕರ್ತವ್ಯಗಳು, ಅಧಿಕಾರಗಳು ಮತ್ತು ಷರತ್ತುಗಳು) ಅಧಿನಿಯಮ, 1971ರಲ್ಲಿ ಹೇಳಲಾದ ಮಾನದಂಡಕ್ಕಿಂತ ಬಹಳಷ್ಟು ಕಡಿಮೆ ಪ್ರಮಾಣದ ಒಳಗೆ ಹಣಕಾಸು ಪಡೆದಿರುವುದು ಕಂಡು ಬರುತ್ತದೆ.

14. ಫಿರ್ಯಾದಿದಾರನು, ಸಮಿತಿಯು ಸರ್ಕಾರದಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿದ್ದರಿಂದ ಮಾತ್ರವೇ ಉಳಿದುಕೊಂಡಿದೆ ಎಂದು ವಾದಿಸಿದನು. ಸರ್ಕಾರವು 2006–07ನೇ ಸಾಲಿನಲ್ಲಿ ರಸ್ತೆ ನಿರ್ಮಾಣಕ್ಕಾಗಿ 40 ಲಕ್ಷ ರೂಪಾಯಿಗಳ ನೆರವನ್ನು ಮಂಜೂರು ಮಾಡಿತು ಮತ್ತು ' ಬಸವ ನಾಣ್ಯ' ದ ಬಿಡುಗಡೆಗಾಗಿ ನಡೆದ ಸಮಾರಂಭಕ್ಕೆ ಹಲವಾರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿತು. ಈ ಹಿಂದಿನ ಸರ್ಕಾರವು, ಬೆಂಗಳೂರಿನ ಪ್ರತಿಷ್ಠಿತ ಸ್ಥಳದಲ್ಲಿ 4,222 ಚದರ ಅಡಿಗಳ ನಿವೇಶನವನ್ನು ಮಂಜೂರು ಮಾಡಿತ್ತು ಮತ್ತು ಕೆಂಗೇರಿ ಗ್ರಾಮದ ಹತ್ತಿರ 116 ಎಕರೆ 33 ಗುಂಟೆಗಳ ಅಮೂಲ್ಯ ಜಮೀನನ್ನು ಮಂಜೂರು ಮಾಡಿದ್ದು ಅದನ್ನು ಈಗ ವಾಣಿಜ್ಯ ವ್ಯವಹಾರಗಳಿಗಾಗಿ ಪದಾಧಿಕಾರಿಗಳು ಬಳಸಿಕೊಳ್ಳುತ್ತಿದ್ದ ವಾರ್ಷಿಕ 80 ಲಕ್ಷ ರೂಪಾಯಿಗಳನ್ನು ಗಳಿಸುತ್ತಿದಿದ್ದು ಉದ್ದೇಶ ಪೂರ್ವಕವಾಗಿ ಅನುದಾನ ಆದೇಶಗಳ ಉಲ್ಲಂಘನೆ ಮಾಡಲಾಗಿದೆ ಎಂದು ಹೇಳಿದನು. ಈ 80 ಲಕ್ಷ ರೂಪಾಯಿಗಳ ಮೊಬಲಗು ಸಮಿತಿಗೆ ಸರ್ಕಾರದಿಂದ ಪರೋಕ್ಷವಾಗಿ ಹಣಕಾಸು ನೆರವನ್ನು ನೀಡಲಾಗಿದೆ ಎಂದು ಹೇಳಿದನು.

15. ಸಮಿತಿಯು, 2006–07ನೇ ಸಾಲಿಗಾಗಿನ ತನ್ನ ಲೆಕ್ಕದಲ್ಲಿ 80 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಆದಾಯ ಬಾಡಿಗೆ ರೂಪದಲ್ಲಿ ಬರುತ್ತಿರುವುದಾಗಿ ತೋರಿಸಿರುವುದು ನಿಜವಾದರೂ, ಸಮಿತಿಯು, ಭೂಮಿಯನ್ನು ಅಭಿವೃದ್ಧಿಪಡಿಸಿದೆ ಮತ್ತು ನಿರ್ಮಾಣವನ್ನು ಮಾಡಿದೆ. ಫಿರ್ಯಾದಿದಾರನು, ಸರ್ಕಾರದಿಂದ ಮಂಜೂರಾದ ಭೂಮಿಗೆ ಬಾಡಿಗೆಯು ನೇರವಾಗಿ ಸಂಬಂಧಪಟ್ಟಿರುವುದಿಲ್ಲ. ಒಂದು ಸಲ ಭೂ ಮಂಜೂರಾತಿಯು ಅಥವಾ ಹಣ ನೀಡಿಕೆಯು ಎಲ್ಲಾ ಸಮಯಗಳಿಗಾಗಿ ಗಣನೀಯವಾಗಿ ಹಣಕಾಸು ನೀಡಿಕೆಗೆ ರಚನೆಯಾಗಿರುವುದಿಲ್ಲ. ಆದ್ದರಿಂದ, ಆಯೋಗವು, ಮುಖ್ಯ ವಿವಾದಾಂಶಗಳಿಗೆ ನಿಷೇಧಾರ್ಥಕ ಉತ್ತರ ನೀಡಿತು ಮತ್ತು ಪ್ರತಿಪಾದಿ ಸಮಿತಿಯು ಮಾಹಿತಿ ಹಕ್ಕು ಅಧಿನಿಯಮ, 2005ರ ಅಡಿಯಲ್ಲಿ

ಸಾರ್ವಜನಿಕ ಪ್ರಾಧಿಕಾರ ಪರಿಭಾಷೆ ಅಡಿಯಲ್ಲಿ ಒಳಗೊಳ್ಳುವುದಿಲ್ಲವೆಂದು ತೀರ್ಮಾನಿಸಿತು. ಆದ್ದರಿಂದ, ಸದರಿ ಅಧಿನಿಯಮದ ಅಡಿಯಲ್ಲಿ ಫಿರ್ಯಾದಿದಾರನಿಂದ **ಕೋರಲಾದ** ಮಾಹಿತಿಯನ್ನು ಒದಗಿಸಲು ಒಪ್ಪಲಿಲ್ಲ.

**ಅದಕ್ಕನುಸಾರವಾಗಿ, ದೂರನ್ನು, ತಿರಸ್ಕರಿಸಲಾಗಿರುವುದೆಂಬಂತೆ ವಿಲೆ ಮಾಡಲಾಯಿತು**

16. ಡಿಸೆಂಬರ್ 2007ರ 10ನೇ ದಿನದಂದು ಮುಕ್ತ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು.

17. 4(1) (ಎ) ಪ್ರಕರಣದ ಅಡಿಯಲ್ಲಿ ಭಾವಿಸಲಾದಂತೆ ದಾಖಲೆಗಳ ಗ್ರಂಥಸೂಚಿ ಮಾಡುವುದು ಮತ್ತು ಸೂಚಿಪಟ್ಟಿ ತಯಾರಿಸುವುದು ಮತ್ತು 4(1) (ಬಿ) ಪ್ರಕರಣದ ಅಡಿಯಲ್ಲಿ ತನ್ನಷ್ಟಕ್ಕೆ ತಾನೇ ಘೋಷಣೆಯನ್ನು ಪ್ರಕಟಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಗುರುತಿಸಲು ಅರ್ಜಿದಾರನಿಗೆ ಕರ್ನಾಟಕ ಸಚಿವಾಲಯ ವಾಹಿನಿಯ ಎಲ್‌ಎಂಎಸ್ ಮತ್ತು ಎಫ್‌ಎಂಎಸ್ ಗಳಿಂದ ದಾಖಲೆಗಳ ಪಟ್ಟಿಗಳು ದೊರೆಯುವಂತೆ ಮಾಡುವುದು:

**ಕೆಐಸಿ 1053 ಕಾಂ 2007,**

## ಕರ್ನಾಟಕ ಮಾಹಿತಿ ಆಯೋಗ

(ಶ್ರೀ ಜೆ.ಎನ್. ಜಯಶ್ರೀ ವಿರುದ್ಧ ಪಿಐಓ ಮತ್ತು ಅಪರ ಕಾರ್ಯದರ್ಶಿ,ಮುಖ್ಯಮಂತ್ರಿಗಳ ಸಚಿವಾಲಯ, ವಿಧಾನ ಸೌಧ, ಬೆಂಗಳೂರು)

## ಆದೇಶ

**17.09.2007**

1. ಫಿರ್ಯಾದಿಯು ತನಗೆ ನೆರವಾಗಲು ಶ್ರೀ ಎಂ.ಎನ್. ವಿಜಯಕುಮಾರ್ ಅವರೊಂದಿಗೆ ಹಾಜರಾದರು. ಶ್ರೀ ಶ್ರೀನಿವಾಸಮೂರ್ತಿ, ಶಾಖಾಧಿಕಾರಿ, ಡಿಪಿಎಆರ್ (ಸೇವೆಗಳು– ಎ) ಇವರು ಪ್ರತಿವಾದಿಯನ್ನು ಪ್ರತಿನಿಧಿಸಿದರು. ಅವರು ಪರಿಶೀಲನೆಗಾಗಿ ಎರಡು ಕಡತಗಳನ್ನು ಹಾಜರುಪಡಿಸಿದರು ಮತ್ತು ಫಿರ್ಯಾದಿಯು ಅವುಗಳನ್ನು ಪರಿಶೀಲಿಸಿದರು. ಫಿರ್ಯಾದಿಯು ಆ ಎರಡೂ ಕಡತಗಳ ನಕಲು ಪ್ರತಿಗಳನ್ನು ಕೋರಿದರು.
2. ಕಡತಗಳ ಪೈಕಿ ಒಂದು ಕಡತದಲ್ಲಿ, "ಈ ಕಡತಕ್ಕೆ ಸಂಬಂಧಿಸಿದಂತೆ ಮತ್ತೊಂದು ಕಡತವಿದೆ, ದಯವಿಟ್ಟು ಮಂಡಿಸಿ" ಎಂದು ಹೇಳಿರುವ ಪ್ರತಿವಾದಿ ಶ್ರೀ ಎ.ಪಿ. ಅತ್ರೆಯವರ ಒಂದು ಟಿಪ್ಪಣಿಯಿದೆ ಎಂದು ಕೂಡ ಫಿರ್ಯಾದಿಯು ಹೇಳಿದರು.
3. ಶ್ರೀ ಎಂ.ಎನ್. ವಿಜಯಕುಮಾರ್ ವರ್ಗಾವಣೆ ಬಗ್ಗೆ ಈ ಎರಡು ಕಡತಗಳ ಹೊರತಾದ ಇನ್ನೂ ಹೆಚ್ಚಿನ ಕಡತಗಳಿದ್ದರೆ, ಅವನ್ನು ಡಿಪಿಎಆರ್‌ನವರು ಪರಿಶೀಲನೆಗಾಗಿ ಹಾಜರುಪಡಿಸಿರುವುದಿಲ್ಲ, ಅವನ್ನು ಪತ್ತೆ ಹಚ್ಚಿ ಪರಿಶೀಲನೆಗೆ ಅವಕಾಶ ಮಾಡಿಕೊಡಬೇಕೆಂದು ಫಿರ್ಯಾದಿಯು ತಿಳಿಸಿದರು.
4. ಶ್ರೀ ಎಂ.ಎನ್. ವಿಜಯಕುಮಾರ್ ವರ್ಗಾವಣೆಗೆ ಸಂಬಂಧಿಸಿದ ಯಾವುದೇ ಇತರ ಇತ್ತೀಚಿನ ಕಡತಗಳು ಎಂದರೆ, 2006ರ ಸೆಪ್ಟೆಂಬರ್ ನಂತರದ ಕಡತಗಳಿವೆಯೇ ಎಂದು ಪರಿಶೀಲಿಸುವಂತೆ, ಅವುಗಳನ್ನು ಹುಡುಕುವಂತೆ ಮತ್ತು ಅಂಥ ಕಡತಗಳಿದ್ದಿದ್ದೇ ಆದರೆ ಅದನ್ನು ಆಯೋಗಕ್ಕೆ ತಿಳಿಸಿ ಫಿರ್ಯಾದಿಗೊಂದು ಅದರ ಪ್ರತಿಯನ್ನು ಕಳುಹಿಸುವಂತೆ ಪ್ರತಿವಾದಿಗೆ ನಿರ್ದೇಶನ ನೀಡಲಾಯಿತು.
5. ಫಿರ್ಯಾದಿಗೆ, 15 ದಿವಸಗಳೊಳಗಾಗಿ, ಈ ಎರಡು ಕಡತಗಳ ನಕಲು ಪ್ರತಿಯನ್ನು ಉಚಿತವಾಗಿ, ತಲುಪೊಪ್ಪಿಗೆ ಸಹಿತ ನೋಂದಾಯಿತ ಅಂಚೆ ಮುಖಾಂತರ, ಆಯೋಗಕ್ಕೆ ವಿಷಯ ತಿಳಿಸಿ, ಪ್ರತಿವಾದಿಯು ನೀಡತಕ್ಕದ್ದೆಂದು ಆಯೋಗವು ನಿರ್ದೇಶಿಸಿತು.
6. ಈಗಾಗಲೇ ಒದಗಿಸಲಾದ ದಾಖಲೆಗಳ ಜೊತೆಗೆ, ತನ್ನ ಕೋರಿಕೆಯಲ್ಲಿ 19 ಬಾಬ್ತುಗಳ ಬಗ್ಗೆ ಮಾಹಿತಿಯನ್ನು ಕೋರಿದ್ದೇನೆಂದು ಮತ್ತು ಅವುಗಳ ಬಗ್ಗೆ ಉತ್ತರ ನೀಡುವಂತೆ ಪ್ರತಿವಾದಿಯನ್ನು ಕೇಳಬೇಕೆಂದು ಫಿರ್ಯಾದಿಯು ಪ್ರತಿಪಾದಿಸಿದರು.
7. ಅಧಿನಿಯಮದ ಮೇರೆಗೆ ವಿವರಿಸಲಾದ ರೀತಿಯಲ್ಲಿ ಮಾಹಿತಿ ಹಕ್ಕನ್ನು ಚಲಾಯಿಸಲು ಅನುಮತಿಸಬಹುದಾಗಿದೆ ಎಂದು ಆಯೋಗ ಅಭಿಪ್ರಾಯಪಟ್ಟಿತು. ಸಾರ್ವಜನಿಕ ಪ್ರಾಧಿಕಾರವು

ನಿರ್ವಹಿಸಿದ ಎಲ್ಲಾ ದಾಖಲೆಗಳ ಪಟ್ಟಿಯನ್ನು ನಾಗರಿಕರಿಗೆ ಲಭ್ಯವಾಗುವಂತೆ ಮಾಡಬೇಕಾಗುತ್ತದೆ. ನಾಗರಿಕನು ಯಾವುದೇ ಕಡತಗಳನ್ನು/ ದಾಖಲೆಗಳನ್ನು ಪರಿಶೀಲಿಸುವ ಹಕ್ಕನ್ನು ಮತ್ತು ಯಾವುದೇ ದಸ್ತಾವೇಜುಗಳ ನಕಲು ಪ್ರತಿಗಳನ್ನು ಕೋರುವ ಹಕ್ಕನ್ನು ಹೊಂದಿದ್ದಾನೆ. ಆತೆಯು ಸಲ್ಲಿಸಿದ ಕೋರಿಕೆಯ ಮೇರೆಗೆ ಯಾವುದಾದರೂ ಕ್ರಮ ಕೈಗೊಂಡಿದ್ದರೆ ಆ ಬಗ್ಗೆ ಸಹಾ ಅವನನ್ನು ಕೇಳಬಹುದು. ಆದರೆ, ಎಲ್ಲಾ ಸಂದರ್ಭಗಳಲ್ಲಿ ಎಲ್ಲಾ ಬೃಹತ್ ಪ್ರಮಾಣದ ದಾಖಲೆಗಳನ್ನು ಹುಡುಕಲು ಮತ್ತು ಫಿರ್ಯಾದಿಯು ಕೋರಿರುವಂಥ ಮಾಹಿತಿಯನ್ನು ಒದಗಿಸಲು ಆಡಳಿತಕ್ಕೆ ಸಾಧ್ಯವಾಗದಿರಬಹುದು. ಅಧಿನಿಯಮದ 7 (9)ನೇ ಪ್ರಕರಣವು ಈ ವಿಚಾರವನ್ನು ಸ್ಪಷ್ಟಪಡಿಸಿದೆ.

8. ಆದ್ದರಿಂದ ಆಯೋಗವು, 2005 ರಿಂದೀಚಿನ ಅಂದರೆ, ಗಣಕೀಕೃತ ಕಡತ ನಿರ್ವಹಣಾ ವ್ಯವಸ್ಥೆ (ಎಫ್‌ಎಂಎಸ್) ಅಸ್ತಿತ್ವಕ್ಕೆ ಬಂದಾಗಿನಿಂದ ಎಲ್ಲಾ ಕಡತಗಳ ಪಟ್ಟಿಯನ್ನು (ಅಧಿನಿಯಮದ ಉಪಬಂಧಗಳ ಮೇರೆಗೆ ಬಹಿರಂಗಪಡಿಸುವುದರಿಂದ ವಿನಾಯಿತಿಗೊಳಿಸಿರುವ ವಿಷಯಗಳನ್ನು ಬಿಟ್ಟು) ಫಿರ್ಯಾದುದಾರನಿಗೆ ನೀಡತಕ್ಕದ್ದೆಂದು ಮತ್ತು ಡಿಪಿಎಆರ್‌ನ ವೆಬ್‌ಸೈಟ್‌ನಲ್ಲಿ ಕೂಡ ಹಾಕಬೇಕೆಂದು ನಿರ್ದೇಶನ ನೀಡಿತು.
9. ಫಿರ್ಯಾದುದಾರನು, ಶ್ರೀ ಎಂ.ಎನ್. ವಿಜಯಕುಮಾರ್ ಅವರ ವೇತನ ಪಾವತಿಗಾಗಿ ತೆಗೆದುಕೊಂಡ ಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೂಡ ಕೋರಿದ್ದಾರೆ. ಪ್ರತಿವಾದಿಯು 20 ದಿನಗಳೊಳಗಾಗಿ, ಆಯೋಗಕ್ಕೆ ವಿಷಯವನ್ನು ತಿಳಿಸಿ, ಫಿರ್ಯಾದುದಾರನಿಗೆ ಆ ಮಾಹಿತಿಯನ್ನು ಒದಗಿಸಲು ನಿರ್ದೇಶನ ನೀಡಿತು.
10. ಅನುಪಾಲನೆಯನ್ನು ದಾಖಲಿಸುವುದಕ್ಕಾಗಿ, ದೂರನ್ನು 1.10.2007 ರಂದು ಮಧ್ಯಾಹ್ನ 3.30ಕ್ಕೆ ಮುಂದೂಡಲಾಯಿತು.
11. ಈ ಬಗ್ಗೆ ಉಕ್ತಲೇಖನ ನೀಡಿ, ಕರಡನ್ನು ತಿದ್ದಿ, ಸಹಿಮಾಡಿ 2007ರ ಸೆಪ್ಟೆಂಬರ್ 17ನೇ ದಿನದಂದು ಇದನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**(ಎ) ಸಚಿವಾಲಯ ವಾಹಿನಿಯ ಕಡತ ನಿರ್ವಹಣಾ ವ್ಯವಸ್ಥೆ (ಎಫ್‌ಎಂಎಸ್) ಯನ್ನು ಬಳಸಿಕೊಂಡು ದಾಖಲೆಗಳ ವಿಷಯಪಟ್ಟಿ ಮತ್ತು ಸೂಚಿಪಟ್ಟಿಯನ್ನು ಸಿದ್ಧಪಡಿಸುವುದು:**

**ಕೆಐಸಿ 123 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಎನ್ ಅನ್ಬರಸನ್ – ವಿರುದ್ಧ – ಉಪ ಕಾರ್ಯದರ್ಶಿ (ಆಡಳಿತ), ಆರ್‌ಡಿಪಿಆರ್ ಇಲಾಖೆ, ಬೆಂಗಳೂರು)

**ಆದೇಶ**

**21.03.2007**

1. ಫಿರ್ಯಾದುದಾರನು ಹಾಜರಾಗಿದ್ದಾರೆ. ಪ್ರತಿವಾದಿ ಶ್ರೀ ಕುಮಾರಸ್ವಾಮಿ, ಸಾರ್ವಜನಿಕ ಮಾಹಿತಿ ಅಧಿಕಾರಿ (ಪಿಐಓ) ಹಾಗೂ ಸರ್ಕಾರದ ಉಪಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರು, ಶ್ರೀ ಮುಬಾರಕ್ ಅಹಮದ್, ಸೂಪರಿಂಟೆಂಡೆಂಟ್ ಇವರೊಂದಿಗೆ ಹಾಜರಾಗಿದ್ದಾರೆ.
2. ಪ್ರತಿವಾದಿಯು, 2006ರ ಆಗಸ್ಟ್ 7ನೇ ದಿನಾಂಕದ ಫಿರ್ಯಾದುದಾರನ ಮಾಹಿತಿ ಕೋರಿಕೆಯ ಅನುಸಾರ 4.9.2006 ರಂದು ಫಿರ್ಯಾದುದಾರನಿಗೆ ಮಾಹಿತಿಯನ್ನು ಒದಗಿಸಲಾಗಿದೆ ಎಂದು ಪ್ರತಿಪಾದಿಸಿದರು.
3. ಫಿರ್ಯಾದಿಯು ಮಾಹಿತಿ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ನೀಡಿದ್ದಾರೆ. ಆದರೂ ಅವರು ಸಂಪೂರ್ಣ ಮಾಹಿತಿಯನ್ನು ಪಡೆದಿಲ್ಲವೆಂದು ತಿಳಿಸಿದ್ದಾರೆ.
4. ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಪ್ರಥಮ ಅಪೀಲು ಪ್ರಾಧಿಕಾರಿಗಳ ಹೆಸರುಗಳು ಮತ್ತು ಪದನಾಮಗಳನ್ನು ಒಳಗೊಂಡಂತೆ 4(1) (ಬಿ) ಪ್ರಕರಣದ

ಮೇರೆಗೆ ಸ್ವಯಂ ಪ್ರೇರಣೆಯಿಂದ ಪ್ರಕಟಗೊಳಿಸಿರುವ ಕೈಪಿಡಿಯನ್ನು ಪ್ರತಿವಾದಿಯು ಹಾಜರುಪಡಿಸಿದ್ದು, ಅದನ್ನು ಸ್ಥಳದಲ್ಲಿಯೇ ಫಿರ್ಯಾದುದಾರರಿಗೆ ಹಸ್ತಾಂತರಿಸಿದರು.

5. ಅಧಿನಿಯಮದ 4(1) (ಎ) ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದಂತೆ ದಾಖಲೆಗಳನ್ನು ವಿಷಯಪಟ್ಟಿ ಮತ್ತು ಸೂಚಿಪಟ್ಟಿಯಲ್ಲಿ ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ, ಪ್ರತಿವಾದಿಯು, ಸಾರ್ವಜನಿಕ ಪ್ರಾಧಿಕಾರವು ಹೊಂದಿರುವ ದಾಖಲೆಗಳ ಪಟ್ಟಿಯು ಕರ್ನಾಟಕ ಸರ್ಕಾರೀ ಸಚಿವಾಲಯದ ಕಡತ ನಿರ್ವಹಣಾ ವ್ಯವಸ್ಥೆ (ಎಫ್‌ಎಂಎಸ್) ಅಡಿಯಲ್ಲಿ ಲಭ್ಯವಿದೆಯೆಂದು ತಿಳಿಸಿ, ನಂತರ, ಇದು ಬೃಹತ್ ಪ್ರಮಾಣದ ಮಾಹಿತಿಯಾಗಿದ್ದು ಸುಮಾರು 400 ಪುಟಗಳನ್ನು ಒಳಗೊಂಡಿದೆಯೆಂದು ತಿಳಿಸಿದರು.
6. ಫಿರ್ಯಾದಿಯು, ಕಡತ ನಿರ್ವಹಣಾ ವ್ಯವಸ್ಥೆಯ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವು ಹೊಂದಿರುವ ದಾಖಲೆಗಳ ಬಗೆಗಿನ ಈ ಮಾಹಿತಿಯನ್ನು ಸಾಫ್ಟ್ ಕಾಪಿಯಾಗಿ ತನಗೆ ಒದಗಿಸಬಹುದೆಂದು ಒಪ್ಪಿಕೊಂಡರು. ಪತ್ರಾಗಾರಕ್ಕೆ ಕಳುಹಿಸಲಾಗಿರುವ ಮುಕ್ತಾಯಗೊಳಿಸಿದ ದಾಖಲೆಗಳ ಪಟ್ಟಿಯೂ ಸೇರಿದಂತೆ ಈ ಮಾಹಿತಿಯನ್ನು, ತಲುಪೋಪ್ಪಿಗೆ ಸಹಿತ ನೋಂದಾಯಿತ ಅಂಚೆ ಮುಖಾಂತರ, ಉಚಿತವಾಗಿ, 30 ದಿನಗಳೊಳಗೆ, ಸಾಫ್ಟ್ ಕಾಪಿಯಲ್ಲಿ, ಆಯೋಗಕ್ಕೆ ವಿಷಯವನ್ನು ಮುಟ್ಟಿಸಿ, ಫಿರ್ಯಾದಿದಾರನಿಗೆ ಒದಗಿಸುವುದಾಗಿ ಪ್ರತಿವಾದಿಯು ಭರವಸೆ ನೀಡಿದರು.
7. ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದಕ್ಕಾಗಿ ಆಯೋಗಕ್ಕೆ ಒದಗಿಸಿದ ಮಾಹಿತಿಗೆ ಸಂಬಂಧಪಟ್ಟಂತೆ, ಈ ಮಾಹಿತಿಯು, ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸಬೇಕಾದ ಆಯೋಗದ ವಾರ್ಷಿಕ ವರದಿಯ ಭಾಗವಾಗುತ್ತದೆಯೆಂದು ಫಿರ್ಯಾದಿದಾರನಿಗೆ ಸ್ಪಷ್ಟಪಡಿಸಲಾಗಿದೆ. ಆದ್ದರಿಂದ, ಸಾರ್ವಜನಿಕ ಪ್ರಾಧಿಕಾರವು ಈ ಹಂತದಲ್ಲಿ ಮಾಹಿತಿಯನ್ನು ಬಹಿರಂಗಪಡಿಸಲು ಸಾಧ್ಯವಾಗುವುದಿಲ್ಲ.
8. ಮಾಹಿತಿ ಒದಗಿಸುವ ಕಾರ್ಯ ಪಾಲನೆಯಾಗಿರುವುದರಿಂದ ಹಾಗೂ ಆ ಬಗ್ಗೆ ಖಾತರಿ ನೀಡಿರುವುದರಿಂದ, ದೂರು ಪರಿಹಾರವಾಗಿದ್ದು ಮೇಲಿನ ನಿರ್ದೇಶನಗಳಿಗನುಸಾರವಾಗಿ ದೂರನ್ನು ವಿಲೆ ಮಾಡಲಾಗಿದೆ.
9. ಈ ಬಗ್ಗೆ ಉಕ್ತಲೇಖನ ನೀಡಿ, ಕರಡು ತಿದ್ದಿ, ಸಹಿ ಮಾಡಿ, 2007ರ ಮಾರ್ಚ್ 21ನೇ ದಿನದಂದು, ಇದನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**(ಬಿ) ನಗರ ಜಿಲ್ಲೆಯಲ್ಲಿ ಸೊಸೈಟಿಗಳು ಮತ್ತು ಫರ್ಮ್‌ಗಳ ದಾಖಲೆಗಳನ್ನು ವಿಷಯಪಟ್ಟಿ ಮತ್ತು ಸೂಚಿಪಟ್ಟಿಯನ್ನು ಸಿದ್ಧಪಡಿಸುವುದು**

**ಕೆಐಸಿ 1064 ಸಿಓಎಂ 2006**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಜಿ. ವಿನ್ಸೆಂಟ್ – ವಿರುದ್ಧ – ಜಿಲ್ಲಾ ರಿಜಿಸ್ಟ್ರಾರ್, ಬೆಂಗಳೂರು ನಗರ ಜಿಲ್ಲೆ)

**ಆದೇಶ**

**<u>28.11.2007</u>**

1. ಫಿರ್ಯಾದಿ ಹಾಜರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನ ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಕಚೇರಿಯಲ್ಲಿ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿವಾದಿ ಶ್ರೀ. ಜಿ. ಸುರೇಂದ್ರ, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಜಿಲ್ಲಾ ರಿಜಿಸ್ಟ್ರಾರ್ ಹಾಜರಾಗಿದ್ದಾರೆ.

2. ಆಯೋಗದ ನಿರ್ದೇಶನಗಳ ಅನುಸಾರವಾಗಿ, ಫರ್ಮ್‌ಗಳು ಮತ್ತು ಸೊಸೈಟಿಗಳಿಗೆ ಸಂಬಂಧಿಸಿದ ದಾಖಲೆಗಳ ವಿಷಯಪಟ್ಟಿ ಮತ್ತು ಸೂಚಿಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯವನ್ನು ಪೂರ್ಣಗೊಳಿಸಲಾಗಿದೆಯೆಂದು ಪ್ರತಿವಾದಿ ತಿಳಿಸಿದರು. ಅಲ್ಲದೆ, ವಿಷಯಪಟ್ಟಿ ಮತ್ತು ಸೂಚಿಪಟ್ಟಿಯನ್ನು ಸಿದ್ಧಪಡಿಸಿರುವ ಪ್ರಕಾರ ಬೆಂಗಳೂರು ನಗರ ಜಿಲ್ಲೆಯ ಸೊಸೈಟಿಗೆ ಸಂಬಂಧಿಸಿದ ಸುಮಾರು 35,000 ದಾಖಲೆಗಳಿವೆ ಮತ್ತು ಫರ್ಮ್‌ಗಳಿಗೆ ಸಂಬಂಧಿಸಿದ 65,000 ದಾಖಲೆಗಳಿವೆ ಎಂದು ಅವರು ತಿಳಿಸಿದರು.

3. ಇಲಾಖೆಯ www.kri.igr.org ವೆಬ್‌ಸೈಟ್‌ನಲ್ಲಿ ದತ್ತಾಂಶವನ್ನು ಅಳವಡಿಸುವ ಬಗ್ಗೆ ಕೂಡ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

4. ಅದೂ ಅಲ್ಲದೆ, ವಿಷಯಪಟ್ಟಿ ಮಾಡಿದ ಮತ್ತು ಸೂಚಿಪಟ್ಟಿ ನೀಡಿದ ದಾಖಲೆಗಳ ಪಟ್ಟಿಯನ್ನು ಸಿಡಿ ರೂಪದಲ್ಲಿನ ಸಾಫ್ಟ್ ಕಾಪಿಯಲ್ಲಿ ಫಿರ್ಯಾದುದಾರನಿಗೆ ಒದಗಿಸಲಾಗಿದೆಯೆಂದು ಅವರು ತಿಳಿಸಿದರು. ಲೆಕ್ಕಪತ್ರಗಳ ವಿವರಪತ್ರದ ಸಹಿತವಾಗಿ ವಾರ್ಷಿಕ ವಿವರ ಪಟ್ಟಿಕೆಗಳನ್ನು ಸಲ್ಲಿಸದಿರುವ ಸೊಸೈಟಿಗಳ ಪಟ್ಟಿಯನ್ನು ಕೂಡ ವರ್ಗೀಕರಿಸಲಾಗಿದೆ ಮತ್ತು ಸಿಡಿಯಲ್ಲಿ ಹಾಗೆಯೇ ಹಾರ್ಡ್‌ಕಾಪಿಯಲ್ಲಿ ಪಟ್ಟಿಗಳನ್ನು ಸಿದ್ಧಪಡಿಸಲಾಗಿದೆಯೆಂದು ಸಹ ಅವರು ತಿಳಿಸಿದರು. ಪ್ರತಿವಾದಿಯು ದಿನಾಂಕ 27.11.07ರ ಪಾಲನೆಯನ್ನು ದಾಖಲಿಸಿದ್ದಾರೆ. ಫಿರ್ಯಾದುದಾರನು ಮಾಹಿತಿ ಸ್ವೀಕರಿಸಿದ್ದಕ್ಕೆ ಸ್ವೀಕೃತಿ ನೀಡಿದ್ದಾರೆ ಮತ್ತು ಒದಗಿಸಿದ ಮಾಹಿತಿಯು ತೃಪ್ತಿಕರವಾಗಿದೆ ಮತ್ತು ಪ್ರಕರಣವನ್ನು ವಿಲೆ ಮಾಡುವುದಕ್ಕೆ ತಮಗೆ ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿಸಿದ್ದಾರೆ.

**5. ಆಯೋಗವು ಕಾರ್ಯಪಾಲನೆಯಾಗಿರುವುದನ್ನು ಗಮನಿಸಿದೆ. ದಾಖಲೆಗಳನ್ನು ವಿಷಯಪಟ್ಟಿ ಮಾಡುವಲ್ಲಿ ಮತ್ತು ಸೂಚಿಪಟ್ಟಿ ತಯಾರಿಸುವಲ್ಲಿ ಹಾಗೆಯೇ ವಾರ್ಷಿಕ ವಿವರಪಟ್ಟಿಕೆಗಳನ್ನು ಸಲ್ಲಿಸದಿರುವ ಸೊಸೈಟಿಗಳ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಐಜಿಆರ್ ರವರು ಮಾಡಿರುವ ಪ್ರಯತ್ನವನ್ನು, ಅದರಲ್ಲೂ ವಿಶೇಷವಾಗಿ ಪ್ರತಿವಾದಿಯಾದ ಶ್ರೀ ಬಿ. ಸುರೇಂದ್ರ, ಜಿಲ್ಲಾ ರಿಜಿಸ್ಟ್ರಾರ್ ಮತ್ತು ಕಾನೂನು ಅಧಿಕಾರಿ, ಐಜಿಆರ್ ಇಲಾಖೆ ಇವರ ಪ್ರಯತ್ನವನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಪ್ರಯತ್ನವನ್ನು ಆಯೋಗವು ಶ್ಲಾಘಿಸಿದೆ. ಶ್ರೀ ಸುರೇಂದ್ರ ಮತ್ತು ಇತರ ಸಂಬಂಧಪಟ್ಟ ಅಧಿಕಾರಿಗಳ ವೈಯಕ್ತಿಕ ದಾಖಲೆಗಳಲ್ಲಿ ಆಯೋಗದ ಈ ಶ್ಲಾಘನೆಯನ್ನು ದಾಖಲಿಸಿಡುವಂತೆಯೂ ಐಜಿಆರ್‌ರವರಿಗೆ ಆಯೋಗ ಸಲಹೆ ನೀಡಿದೆ.**

6. ಮಾಹಿತಿ ಒದಗಿಸುವ ಕಾರ್ಯ ಪಾಲನೆಯಾಗಿರುವುದರಿಂದ ದೂರು ಪರಿಹಾರವಾಗಿದೆಯೆಂದು ಮೇಲಿನ ನಿರ್ದೇಶನಕ್ಕನುಸಾರವಾಗಿ ದೂರನ್ನು ವಿಲೆ ಮಾಡಲಾಗಿದೆ.

7. ಈ ಬಗ್ಗೆ ಉಕ್ತಲೇಖನ ನೀಡಿ, ಕರಡು ತಿದ್ದಿ, ಸಹಿ ಮಾಡಿ ಇದನ್ನು 2007ರ ನವೆಂಬರ್ 28ನೇ ದಿನದಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**(ಸಿ) ಫೀಡ್ ಬ್ಯಾಕ್ ವ್ಯವಸ್ಥೆಯ ಕುರಿತ ವೆಬ್‌ಸೈಟ್‌ನ ಮಾರ್ಪಾಟು**

**ಕೆಐಸಿ 1098 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಜಿ. ವಿನ್ಸೆಂಟ್ –ವಿರುದ್ಧ – ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಡೆಸ್ಕ್ ಆಫೀಸರ್, ಡಿಪಿಎಆರ್ (ಎಆರ್) ಬೆಂಗಳೂರು)

**ಆದೇಶ**

**10.07.2007**

ಫಿರ್ಯಾದುದಾರನು ಹಾಜರಾಗಿದ್ದಾರೆ. ಶ್ರೀಮತಿ ಸಾವಿತ್ರಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಅಧೀನ ಕಾರ್ಯದರ್ಶಿ, ಡಿಪಿಎಆರ್ (ಜನಸ್ಪಂದನ), ವಿ.ವಿ. ಟವರ್ಸ್, ಬೆಂಗಳೂರು ಇವರು ಶ್ರೀಮತಿ ಕೆ. ಭಾನುಮತಿ, ಶಾಖಾಧಿಕಾರಿ ಇವರೊಂದಿಗೆ ಹಾಜರಾದರು.

1. ಫಿರ್ಯಾದುದಾರನು ದಿನಾಂಕ 28.12.06ರ ತನ್ನ ಅರ್ಜಿಯಲ್ಲಿ, ಅಧಿನಿಯಮದ 4(1) (ಎ) ಪ್ರಕರಣದ ಮೇರೆಗೆ ನಿರ್ಧಿಷ್ಟಪಡಿಸಿದಂತೆ ದಾಖಲೆಗಳನ್ನು ವಿಷಯಪಟ್ಟಿ ಮಾಡುವ ಹಾಗೂ ಸೂಚಿಪಟ್ಟಿ

ತಯಾರಿಸುವುದಕ್ಕೆ ಸಂಬಂಧಿಸಿದಂತೆ, ಅಧಿನಿಯಮದ 4 (1) (ಬಿ) ಪ್ರಕರಣದ ಮೇರೆಗೆ ಸ್ವಯಂಪ್ರೇರಣೆಯಿಂದ ಸಿದ್ಧಪಡಿಸಿದ ಮತ್ತು ಪ್ರಕಟಿಸಿದ ಘೋಷಣೆಗೆ ಸಂಬಂಧಿಸಿದಂತೆ, ವಿವಿಧ ಸಾರ್ವಜನಿಕ ಪ್ರಾಧಿಕಾರಗಳು ನೇಮಕಮಾಡಿದ ಪಿಐಓಗಳ ಮತ್ತು ಎಪಿಐಓಗಳ ವಿವರಗಳಿಗೆ ಸಂಬಂಧಿಸಿದಂತೆ ಮತ್ತು ಸಾರ್ವಜನಿಕ ಕುಂದುಕೊರತೆಗಳ ಕೋಶದ ಮುಖಾಂತರ ಇತರ ಇಲಾಖೆಗಳ ವಿರುದ್ಧ ಸ್ವೀಕರಿಸಿದ ದೂರುಗಳ ಬಗ್ಗೆ ಇಲಾಖೆಯು ಕೈಗೊಂಡ ಕ್ರಮದ ಬಗ್ಗೆ, ಮಾಹಿತಿ ಒದಗಿಸುವುದಕ್ಕೆ ಸಂಬಂಧಿಸಿದ ಮೂರು ಅಂಶಗಳ ಬಗ್ಗೆ ಮಾಹಿತಿಯನ್ನು ಕೋರಿರುತ್ತಾರೆ.

2. ಇದಕ್ಕೆ ಪ್ರತಿಯಾಗಿ, ಪ್ರತಿವಾದಿಯು, ಪಿಐಓಗಳು ಮತ್ತು ಎಪಿಐಓಗಳ ನೇಮಕಾತಿ ಕುರಿತ ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ 2ನೇ ಅಂಶದ ಮಾಹಿತಿಯನ್ನು, ವಾದಿಗೆ ವಿಷಯವನ್ನು ತಿಳಿಸಿ, ಮಾಹಿತಿಯನ್ನು ಒದಗಿಸುವ ಸಲುವಾಗಿ, ದಿನಾಂಕ 10.06.07 ರಂದು ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿ, ಡಿಪಿಎಆರ್ (ಎಆರ್) ಇವರಿಗೆ ವರ್ಗಾಯಿಸಿರುತ್ತಾರೆ. ಮುಂದೆ, 1 ಮತ್ತು 3ನೇ ಅಂಶಗಳ ಕುರಿತಾಗಿ 28 ಪುಟಗಳ ಮಾಹಿತಿಯನ್ನು ಒದಗಿಸುವ ವೆಚ್ಚದ ಸಂಬಂಧವಾಗಿ 28/– ರೂಪಾಯಿಗಳನ್ನು ಸಂದಾಯ ಮಾಡುವಂತೆ ಕೋರಿ ದಿನಾಂಕ 11.01.07 ರಂದು ಆಕೆ ವಿಷಯವನ್ನು ತಿಳಿಸಿರುತ್ತಾರೆ. ತದನುಸಾರವಾಗಿ, ದಿನಾಂಕ 01.03.07 ರಂದು ಅಗತ್ಯಪಡಿಸಿದ ಹೆಚ್ಚುವರಿ ಫೀಜನ್ನು ಫಿರ್ಯಾದಿಯು ಸಂದಾಯ ಮಾಡಿರುತ್ತಾರೆ ಮತ್ತು ದಿನಾಂಕ 15.03.07 ರಂದು ಅವರಿಗೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಲಾಗಿರುತ್ತದೆ. ಆದರೂ, ತನಗೆ ಒದಗಿಸಿದ ಮಾಹಿತಿಯಿಂದ ತೃಪ್ತರಾಗದೆ ಫಿರ್ಯಾದಿಯು ದಿನಾಂಕ 04.04.07 ರಂದು ಆಯೋಗಕ್ಕೆ ದೂರನ್ನು ದಾಖಲಿಸಿರುತ್ತಾರೆ. ಸಮನುಗಳನ್ನು ಹೊರಡಿಸಿದ ಮೇಲೆ, ಪ್ರತಿವಾದಿಯು ಫಿರ್ಯಾದುದಾರನಿಗೆ ಒದಗಿಸಿದ ಮಾಹಿತಿಯ ಪ್ರತಿಗಳ ಸಹಿತವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

3. ಫಿರ್ಯಾದುದಾರನಿಗೆ ಒದಗಿಸಿದ ಮಾಹಿತಿಯನ್ನು ಆಯೋಗವು ಪರಿಶೀಲಿಸಿದೆ. ಪರಿಶೀಲಿಸುವಾಗ, ಅಧಿನಿಯಮದ 4(1) (ಎ) ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದಂತೆ ದಾಖಲೆಗಳನ್ನು ವಿಷಯಪಟ್ಟಿ ಮಾಡಿರುವ ಮತ್ತು ಸೂಚಿಪಟ್ಟಿ ಸಿದ್ಧಪಡಿಸಿರುವ ಬಗ್ಗೆ ಮಾಹಿತಿಯನ್ನು ಪ್ರತಿವಾದಿಯು ಒದಗಿಸಿಲ್ಲವೆಂಬುದನ್ನು ಅದು ಗಮನಿಸಿದೆ. ದಾಖಲೆಗಳನ್ನು ವಿಷಯಪಟ್ಟಿ ಮಾಡುವ ಮತ್ತು ಸೂಚಿಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಮತ್ತು ಅದನ್ನು 15 ದಿನಗಳೊಳಗೆ ಮುಕ್ತಾಯಗೊಳಿಸಲಾಗುತ್ತದೆ ಹಾಗೂ ಅದರ ಪ್ರತಿಯನ್ನು ತಲುಪೊಪ್ಪಿಗೆ ಸಹಿತ ನೋಂದಾಯಿತ ಅಂಚೆ ಮುಖಾಂತರ, ಉಚಿತವಾಗಿ, ವಾದಿಗೆ ಒದಗಿಸಲಾಗುತ್ತದೆ ಎಂದು ಪ್ರತಿವಾದಿ ತಿಳಿಸಿದ್ದಾರೆ.

4. ದಾಖಲೆಗಳನ್ನು ವಿಷಯಪಟ್ಟಿ ಮಾಡಿರುವ ಮತ್ತು ಸೂಚಿಪಟ್ಟಿ ಸಿದ್ಧಪಡಿಸಿರುವ ಬಗ್ಗೆ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಎಂದರೆ, www.dpar.kar.nic.in ನಲ್ಲಿ ಹಾಕುವಂತೆ ಸಹ ಆಯೋಗವು ಪ್ರತಿವಾದಿಗೆ ನಿರ್ದೇಶನ ನೀಡಿರುತ್ತದೆ. ಮುಂದುವರೆದು ಡಿಪಿಎಆರ್ (ಜನಸ್ಪಂದನ) ಕಾರ್ಯಕ್ಷೇತ್ರದಲ್ಲಿರುವ ಸಲಹೆಗಳು/ ದೂರುಗಳ ಕುರಿತ ಫೀಡ್‌ಬ್ಯಾಕ್ ಆಯ್ಕೆಯು ಈಗಲೂ ಅವರ ಬಳಿಯೇ ಇದೆ ಮತ್ತು ಮಾಹಿತಿ ಹಕ್ಕು ಅಧಿನಿಯಮದ ಜಾರಿಗೆ ಡಿಪಿಎಆರ್ (ಎಆರ್) ನೋಡಲ್ ಏಜೆನ್ಸಿಯಾಗಿರುವುದರಿಂದ ಡಿಪಿಎಆರ್ (ಎಆರ್)ಗೆ ನಿರ್ದೇಶಿಸಬೇಕಾದ ಅಗತ್ಯವಿದೆಯೆಂದು ಫಿರ್ಯಾದುದಾರನು ತಿಳಿಸಿರುತ್ತಾನೆ.

5. ಆದ್ದರಿಂದ, ಫೀಡ್‌ಬ್ಯಾಕ್ ಆಯ್ಕೆಯನ್ನು ಡಿಪಿಎಆರ್ (ಎಆರ್)ಗೆ ಬದಲಾಯಿಸುವ ಬಗ್ಗೆ ಎನ್‌ಐಸಿಯೊಂದಿಗೆ ಸಮಾಲೋಚಿಸಲು ಮತ್ತು ಈ ಸಂಬಂಧ ಸೂಕ್ತ ಮಾರ್ಪಾಟನ್ನು ಮಾಡಲಾಗಿದೆಯೆಂಬುದನ್ನು ನೋಡಿಕೊಳ್ಳುವಂತೆ ಆಯೋಗವು ಪ್ರಧಾನ ಕಾರ್ಯದರ್ಶಿ, ಡಿಪಿಎಆರ್ (ಜನಸ್ಪಂದನ) ಇವರಿಗೆ ನಿರ್ದೇಶನ ನೀಡಿದೆ. ಅಲ್ಲದೆ, ಪ್ರಸಕ್ತ ಫೀಡ್‌ಬ್ಯಾಕ್ ವ್ಯವಸ್ಥೆಯನ್ನು ಪುನರವಲೋಕಿಸುವಂತೆ ಮತ್ತು ಮೇಲೆ ಸಲಹೆ ನೀಡಿದಂತೆ ಫೀಡ್‌ಬ್ಯಾಕ್‌ಅನ್ನು ಡಿಪಿಎಆರ್ (ಎಆರ್)ಗೆ ಬದಲಾಯಿಸುವುದಕ್ಕಾಗಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಡುವಂತೆ ಆಯೋಗವು, ಈ ಆದೇಶದ

ಮೂಲಕ ನಿರ್ದೇಶಕರು, ಎನ್‌ಐಸಿ ಇವರಿಗೆ ನಿರ್ದೇಶನ ನೀಡಿದೆ. ಪ್ರತಿವಾದಿಯು ಆಯೋಗದ ಮೇಲ್ಕಂಡ ನಿರ್ದೇಶನಗಳನ್ನು ಪಾಲಿಸುವ ಬಗ್ಗೆ ಖಾತರಿ ನೀಡಿರುತ್ತಾರೆ.

6. ಮೇಲ್ಕಂಡ ನಿರ್ದೇಶನಗಳ ಮತ್ತು ಖಾತರಿ ನೀಡಿರುವಿಕೆಯ ದೃಷ್ಟಿಯಿಂದ ದೂರು ಪರಿಹಾರವಾಗಿದೆಯೆಂದು ವಿಲೆ ಮಾಡಲಾಗಿದೆ.
7. ಈ ಬಗ್ಗೆ ಉಕ್ತಲೇಖನ ನೀಡಿ, ಕರಡನ್ನು ತಿದ್ದಿ, ಸಹಿಮಾಡಿ ಇದನ್ನು ಬಹಿರಂಗ ನ್ಯಾಯಾಲಯದಲ್ಲಿ 2007ರ ಜುಲೈ 10ನೇ ದಿನದಂದು ಘೋಷಿಸಲಾಗಿದೆ.

**(ಡಿ) ದಾಖಲೆಗಳು ಕಾಣೆಯಾಗಿರುವುದು/ ಕಳೆದುಹೋಗಿರುವುದು – ದಾಖಲೆಗಳನ್ನು ವಿಷಯಪಟ್ಟಿ ಮಾಡುವುದು ಮತ್ತು ಸೂಚಿಪಟ್ಟಿ ತಯಾರಿಸುವುದು:**

**ಕೆಐಸಿ 172 ಎಪಿಎಲ್ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಕೆ. ಹರೀಂದ್ರನಾಥ್– ವಿರುದ್ಧ– ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಆಯುಕ್ತರು, ಬಿಡಿಎ, ಬೆಂಗಳೂರು)

**ಆದೇಶ**

**20.06.2007**

1. ಫಿರ್ಯಾದುದಾರನು ತನ್ನ ವಕೀಲರಾದ ಶ್ರೀ ಮುರಳೀಧರ ಅವರೊಂದಿಗೆ ಹಾಜರಾದರು. ಶ್ರೀ ಮುರಳೀಧರ್ ವಕಾಲತ್ ಅನ್ನು ಸಲ್ಲಿಸಿದರು. ಶ್ರೀ ಹೆಚ್.ಎಸ್. ರಾಮಚಂದ್ರ, ಕಚೇರಿ ಅಧೀಕ್ಷಕ (ಆಫೀಸ್ ಸೂಪರಿಂಟೆಂಡೆಂಟ್), ಶಾಖೆ, ಬಿಡಿಎ, ಬೆಂಗಳೂರು ಇವರು ಶ್ರೀ ಆರ್. ರಂಗಣ್ಣ, ವಿಷಯ ನಿರ್ವಾಹಕ ಇವರೊಂದಿಗೆ ಪ್ರತಿವಾದಿಯ ಪ್ರತಿನಿಧಿಯಾಗಿ ಹಾಜರಾದರು.
2. ಇಂದಿರಾನಗರದ ಭಿನ್ನಮಂಗಲದ 2ನೇ ಹಂತದಲ್ಲಿರುವ 180 ಮತ್ತು 181ನೇ ನಿವೇಶನ ಸಂಖ್ಯೆಗಳ ಸಂಬಂಧದಲ್ಲಿ 1976ನೇ ವರ್ಷದಲ್ಲಿ ಶ್ರೀಮತಿ ಕೆ.ಎಂ. ಪ್ರೇಮಾವತಿ ಅವರಿಗೆ ಹಕ್ಕುಗಳನ್ನು ವರ್ಗಾಯಿಸುವುದಕ್ಕಾಗಿ ದಿ// ಶ್ರೀ ಜನಾರ್ಧನ ರೆಡ್ಡಿ ಅವರು ಸಲ್ಲಿಸಿದ್ದ ದಸ್ತಾವೇಜುಗಳ ಪ್ರತಿಗಳನ್ನು, ಆಯುಕ್ತರು, ಸಹಾಯಕ ಆಯುಕ್ತರ ಆದೇಶಗಳು ಮತ್ತು ಕಡತ ಟಿಪ್ಪಣಿಗಳ ಸಮೇತ ನೀಡುವಂತೆ ಅಪೀಲುದಾರರು, ದಿನಾಂಕ 30.11.2006 ರಂದು ಮಾಹಿತಿಗಾಗಿ ಕೋರಿಕೆ ಸಲ್ಲಿಸಿದ್ದರು.
3. ಅದಕ್ಕೆ ಪ್ರತಿಯಾಗಿ, ಪ್ರತಿವಾದಿಯು ಮಾಹಿತಿ ಕೋರಿಕೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ದಾಖಲೆಯು ಲಭ್ಯವಿಲ್ಲವೆಂದು ತಿಳಿಸಿ, ಹಿಂಬರಹ ನೀಡಿದರು ಆ ತರುವಾಯ, ಅಪೀಲುದಾರನು ದಿನಾಂಕ 30.11.2006 ರಂದು ಬಿಡಿಎ ಆಯುಕ್ತರ ಮುಂದೆ ಪ್ರಥಮ ಅಪೀಲು ಸಲ್ಲಿಸಿದರು.
4. ಆಯುಕ್ತರು ಮತ್ತು ಪ್ರಥಮ ಅಪೀಲು ಪ್ರಾಧಿಕಾರಿಯು, ದಿನಾಂಕ 13.02.2007ರ ತನ್ನ ಆದೇಶದಲ್ಲಿ, ಬಿನ್ನಮಂಗಲ 2ನೇ ಹಂತದಲ್ಲಿರುವ 180 ಮತ್ತು 181ನೇ ಸಂಖ್ಯೆಯ ನಿವೇಶನಗಳನ್ನು ಶ್ರೀಮತಿ ಕೆ.ಎಂ. ಪ್ರೇಮಾವತಿಯವರಿಗೆ ವರ್ಗಾಯಿಸುವುದಕ್ಕೆ ದಿ// ಶ್ರೀ ಜನಾರ್ಧನ ರೆಡ್ಡಿಯವರು ಸಲ್ಲಿಸಿದ್ದ ಪತ್ರಗಳಿಗೆ ಸಂಬಂಧಿಸಿದ ಸಂಬಂಧಪಟ್ಟ ದಾಖಲೆಯು, ಬಿಡಿಎ ಕಚೇರಿಯಲ್ಲಿ ಮರುಹಸ್ತಾಂತರಣದ ಮೂಲ ದಾಖಲೆಯು ಲಭ್ಯವಿಲ್ಲದಿರುವಂತೆಯೇ ಇದೂ ಲಭ್ಯವಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದ್ದರಿಂದ, ಆಯುಕ್ತರು ತಮ್ಮ ಆದೇಶದಲ್ಲಿ ಆ ಬಗ್ಗೆ ಸಂಕಲಿತವಾದ ದಾಖಲೆಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಒದಗಿಸುವಂತೆ ಮತ್ತು ಮೂಲ ಕಡತವನ್ನು ಪತ್ತೆಹಚ್ಚುವ ಪ್ರಯತ್ನಗಳನ್ನು ಮಾಡುವಂತೆ ಸಹಾಯಕ ಆಯುಕ್ತರಿಗೆ ನಿರ್ದೇಶನ ನೀಡಿದರು. ಮೇಲ್ಕಂಡ ಕಾಣೆಯಾಗಿರುವ ದಾಖಲೆಯನ್ನು ಪತ್ತೆ ಹಚ್ಚುವಲ್ಲಿ ನೆರವಾಗುವಂತೆ ಬಿಡಿಎ ಪೊಲೀಸ್ ಸೂಪರಿಂಟೆಂಡೆಂಟರಿಗೂ ಸಹ ನಿರ್ದೇಶನ ನೀಡಿದರು.
5. ಪ್ರಥಮ ಅಪೀಲು ಪ್ರಾಧಿಕಾರಿಯು ಆದೇಶಗಳನ್ನು ಮಾಡಿದ್ದರೂ, ಇಲ್ಲಿಯವರೆಗೆ ಯಾವುದೇ ಮಾಹಿತಿಯನ್ನು ಒದಗಿಸಿಲ್ಲವೆಂದು ಅಪೀಲುದಾರರು ಪ್ರತಿಪಾದಿಸಿದರು. ಆದ್ದರಿಂದ ದಿನಾಂಕ 29.03.2007 ರಂದು ಆಯೋಗದ ಮುಂದೆ ಈ ಎರಡನೇ ಅಪೀಲನ್ನು ಅಪೀಲುದಾರರು ಸಲ್ಲಿಸಿದ್ದಾರೆ.

6. ಆಯೋಗದಿಂದ ಸಮನುಗಳನ್ನು ಸ್ವೀಕರಿಸಿದ ಮೇಲೆ, ದಿನಾಂಕ, 8.6.2007 ರಂದು ಅಪೀಲುದಾರರಿಗೆ, ಅವರು ಕೋರಿದ್ದ 3 ಮತ್ತು 4ನೇ ಸಂಖ್ಯೆಯ ಅಂಶಗಳ ಬಗ್ಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಮಾಹಿತಿಯನ್ನು ಒದಗಿಸಲಾಗಿದೆಯೆಂದು ಪ್ರತಿವಾದಿಯು ತಿಳಿಸಿದ್ದಾರೆ. ಆದರೆ, ಪ್ರತಿವಾದಿಯು ಕಳುಹಿಸಿದ್ದಾರೆನ್ನಲಾಗುವ ಸದರಿ ಮಾಹಿತಿಯನ್ನು ತಾನು ಇದುವರೆವಿಗೂ ಸ್ವೀಕರಿಸಿಲ್ಲವೆಂದು ಅಪೀಲುದಾರರು ತಿಳಿಸಿರುತ್ತಾರೆ.

7. ಪ್ರತಿವಾದಿಯು, ಈಗಾಗಲೇ ಒದಗಿಸಿದ್ದ ಮಾಹಿತಿಯ ಪ್ರಮಾಣೀಕೃತ ಪ್ರತಿಗಳನ್ನು ತಂದಿದ್ದು, ಅದನ್ನು ಅಪೀಲುದಾರರಿಗೆ ಸ್ಥಳದಲ್ಲಿಯೇ ಹಸ್ತಾಂತರ ಮಾಡಿದರು. ಒದಗಿಸಿದ ಮಾಹಿತಿಯನ್ನು ಪರಿಶೀಲಿಸಿದ ಮೇಲೆ, ಅಪೀಲುದಾರರು, ಇಲ್ಲಿಯವರೆಗೆ 3 ಮತ್ತು 4ನೇ ಸಂಖ್ಯೆಯ ಅಂಶಗಳ ಬಗ್ಗೆ ಮಾತ್ರ ಪ್ರತಿವಾದಿಯು ಮಾಹಿತಿಯನ್ನು ಒದಗಿಸಿದ್ದಾರೆಂದು ತಿಳಿಸಿದರು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮೇಲಿನ ಮನವಿ ಮುಂತಾದವುಗಳ ಅಂಗೀಕಾರಕ್ಕಾಗಿ ದಿವಂಗತ ಶ್ರೀ ಜನಾರ್ಧನ ರೆಡ್ಡಿ ಮತ್ತು ಅಧ್ಯಕ್ಷರ ಆದೇಶದ ಪತ್ರದ ಪ್ರತಿಯನ್ನು ಸಹ ಒದಗಿಸುವುದಕ್ಕೆ ಸಂಬಂಧಪಟ್ಟಿರುವ ಬಾಬು ಸಂಖ್ಯೆಗಳು 1 ಮತ್ತು 2 ರಲ್ಲಿ ಕೋರಿದ ಮಾಹಿತಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ದಾಖಲೆಯನ್ನು ಹುಡುಕಲು ಮತ್ತು ಪತ್ತೆಹಚ್ಚಲು ಕ್ರಮವನ್ನು ಕೈಗೊಂಡಿಲ್ಲ. ಅಲ್ಲದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮೂಲ ದಾಖಲೆ ಲಭ್ಯವಿಲ್ಲದಿದ್ದರೂ ಶ್ರೀಮತಿ ಕೆ. ಎಂ. ಪ್ರೇಮಾವತಿಯವರ ಹೆಸರಿನಲ್ಲಿ ಮೇಲ್ಕಂಡ ನಿವೇಶನಗಳನ್ನು ವರ್ಗಾಯಿಸಲು ಕ್ರಮ ಕೈಗೊಂಡಿದೆಯೆಂದು ಆತನು ಹೇಳಿದ್ದಾನೆ.

8. ಆಯೋಗವು ಉಭಯ ಪಕ್ಷಕಾರರು ಮಾಡಿಕೊಂಡಿರುವ ನಿವೇದನೆಗಳನ್ನು ಗಮನಕ್ಕೆ ತೆಗೆದುಕೊಂಡಿದೆ. ಆಯೋಗವು, ಕಾಣೆಯಾಗಿರುವ ದಾಖಲೆಯನ್ನು ಹುಡುಕಲು ಮತ್ತು ಪತ್ತೆ ಹಚ್ಚಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಆದೇಶಿಸಿರುವುದನ್ನು ಸಹ ಗಮನಕ್ಕೆ ತೆಗೆದುಕೊಂಡಿದೆ. ಆದರೆ ಪ್ರತಿವಾದಿಯು, ದಾಖಲೆಗಳ ನಾಪತ್ತೆಗೆ ಮತ್ತು ನಷ್ಟಕ್ಕೆ ಜವಾಬ್ದಾರರಾಗಿರುವ ಸಂಬಂಧಪಟ್ಟ ಅಧಿಕಾರಿಗಳಿಗೆ ಈವರೆಗೆ ನೋಟೀಸುಗಳನ್ನು ನೀಡಿಲ್ಲವೆಂದು ಹೇಳಿದ್ದಾನೆ.

9. ಆದ್ದರಿಂದ, ಈ ಹಿಂದೆ ಆಯೋಗವು ನಿರ್ದೇಶಿಸಿದಂತೆ ದಾಖಲೆಗಳ ಪಟ್ಟಿಯನ್ನು ತಯಾರಿಸುವ ಮತ್ತು ವಿಷಯ ಸೂಚಿಯನ್ನು ತಯಾರಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಮತ್ತು ದಾಖಲೆಯನ್ನು ಕಳೆದು ಹಾಕಿರುವದಕ್ಕಾಗಿ ಸಂಬಂಧಪಟ್ಟ ಆಧಿಕಾರಿಯನ್ನು ಹೊಣೆಗಾರನನ್ನಾಗಿ ಮಾಡಿ ಆದೇಶಿಸಲಾಗಿದ್ದಂಥ ವಿಚಾರಣೆಯನ್ನು ಮುಂಚಿತವಾಗಿಯೇ ಪೂರ್ಣಗೊಳಿಸಲಾಗಿರುವುದನ್ನು ಖಚಿತಪಡಿಸಲು ಸಹ ಆಯೋಗವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ನಿರ್ದೇಶಿಸಿದೆ. ಸಂಬಂಧಪಟ್ಟ ಅಧಿಕಾರಿಗಳು ಮೂಲ ದಾಖಲೆಗಳಿಲ್ಲದೆ ಶ್ರೀಮತಿ ಪ್ರೇಮಾವತಿಯವರ ಹೆಸರಿಗೆ ನಿವೇಶನಗಳ ಹಕ್ಕನ್ನು ವರ್ಗಾಯಿಸಲು ಕ್ರಮವನ್ನು ಕೈಗೊಂಡಿದ್ದಾರೆಂದು ಅಪೀಲುದಾರನು ಮಾಡಿರುವ ನಿವೇದನೆಯನ್ನು ಸಹ ವಿಚಾರಣೆಯಲ್ಲಿ ಪರಿಶೀಲಿಸತಕ್ಕದ್ದು.

10. ಅಲ್ಲದೆ, ಸಂಬಂಧಪಟ್ಟ ದಾಖಲೆಗಳನ್ನು ಪತ್ತೆಹಚ್ಚಿದ ಕೂಡಲೇ ಅಪೀಲುದಾರನು ಕೋರಿರುವ ಅಗತ್ಯ ಮಾಹಿತಿಯನ್ನು ಆಯುಕ್ತರಿಗೆ ತಿಳಿಸುವುದರೊಂದಿಗೆ, ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ (ಆರ್‌ಪಿಎಡಿ) ಮೂಲಕ ಯಾವುದೇ ವೆಚ್ಚವಿಲ್ಲದೆ ಉಚಿತವಾಗಿ ಕೂಡಲೇ ಆತನಿಗೆ ನೀಡತಕ್ಕದ್ದೆಂದು ಸಹ ನಿರ್ದೇಶಿಸಿದೆ.

11. ಅನುಪಾಲನೆಯ ದೃಷ್ಟಿಯಲ್ಲಿ ಮೇಲಿನ ನಿರ್ದೇಶನಗಳ ನಿಬಂಧನೆಗಳನುಸಾರವಾಗಿ ಅಂಗೀಕರಿಸಲಾಗಿರುವಂಥ ಅಪೀಲನ್ನು ವಿಲೆ ಮಾಡಲಾಗಿದೆ.

12. ಇದೇ ಜೂನ್, 2007ರ 20ನೇ ದಿನದಂದು ಬಹಿರಂಗ ನ್ಯಾಯಾಲಯದಲ್ಲಿ ಹೇಳಿ ಬರೆಸಲಾಗಿದೆ. ಕರಡನ್ನು ಸರಿಪಡಿಸಲಾಗಿದೆ. ಸಹಿ ಮಾಡಿದ್ದು ಉಚ್ಚರಿಸಲಾಗಿದೆ.

**ಆಡಳಿತಾತ್ಮಕ ತೀರ್ಮಾನಗಳಿಗಾಗಿ ಕಾರಣಗಳನ್ನು ನೀಡುವ ಸಂಬಂಧದಲ್ಲಿ ಸಮಾವೇಶನ**

**ಕೆಐಂಸಿ 1333 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ರವೀಂದ್ರನಾಥ ಗುರು–ವಿರುದ್ಧ–ಪಿಐಓ ಮತ್ತು ನಿರ್ದೇಶಕರು, ಪದವಿಪೂರ್ವ ಮಂಡಳಿ, ಬೆಂಗಳೂರು)

**ಆದೇಶ**

**<u>16–7–2007</u>.**

1. ಫಿರ್ಯಾದುದಾರನು ಹಾಜರಾಗಿದ್ದನು. ಪ್ರತಿವಾದಿಯು ಗೈರು ಹಾಜರಾಗಿದ್ದನು.
2. ಫಿರ್ಯಾದಿಯು, ದಿನಾಂಕ: 9–3–2007ರ ತನ್ನ ಮಾಹಿತಿಗಾಗಿ ಸಲ್ಲಿಸಿರುವ ತನ್ನ ಮನವಿಯಲ್ಲಿ ದಕ್ಷಿಣ ವಲಯ ಬೆಂಗಳೂರು ನಗರ, ಇಲ್ಲಿ 2006–2007 ಮತ್ತು 2007–08 ನೇ ಸಾಲಿನಲ್ಲಿ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕಾಗಿ ಪ್ರಸ್ತಾವಗಳ ಅನುಮೋದನೆಗೆ ಸಂಬಂಧಪಟ್ಟಂತೆ ಪ್ರಸ್ತಾವಗಳ ದಿನಾಂಕ, ಅನುಮೋದನೆಯ ದಿನಾಂಕ, ತಿರಸ್ಕೃತಗೊಂಡ ಪ್ರಸ್ತಾವದ ಪಟ್ಟಿ, ಕಾರಣಗಳೊಂದಿಗೆ ಇತ್ಯರ್ಥದಲ್ಲಿರುವ ಪ್ರಸ್ತಾವಗಳ ಪಟ್ಟಿ ಮುಂತಾದವುಗಳ ವಿವರಗಳು ಸೇರಿದಂತೆ ಮೂರು ಬಾಬುಗಳ ಬಗ್ಗೆ ಮಾಹಿತಿಯನ್ನು ಕೋರಿದ್ದಾನೆ.

3. ಪ್ರತಿವಾದಿಯು ಗೊತ್ತುಪಡಿಸಲಾದ 30 ದಿನಗಳ ಅವಧಿಯೊಳಗೆ ಫಿರ್ಯಾದುದಾರನಿಗೆ ಅಗತ್ಯ ಮಾಹಿತಿಯನ್ನು ಒದಗಿಸದಿದ್ದುದರಿಂದ ಅವನು, 2–5–2007 ರಂದು ಆಯೋಗದ ಮುಂದೆ ಈ ದೂರನ್ನು ಸಲ್ಲಿಸಿದ್ದಾನೆ. ಸಮನ್ಸ್‌ಗಳನ್ನು ಸ್ವೀಕರಿಸಿದ ನಂತರ, ಪ್ರತಿವಾದಿಯು, ಆಯೋಗದ ಪ್ರತಿಯೊಂದಿಗೆ ನೋಂದಾಯಿತ ಅಂಚೆ ಮೂಲಕ 21–6–2007 ರಂದು ಫಿರ್ಯಾದುದಾರನಿಗೆ ಅಗತ್ಯ ಮಾಹಿತಿಯನ್ನು ಒದಗಿಸಿದ್ದಾನೆ.

4. ಫಿರ್ಯಾದುದಾರನು ಮಾಹಿತಿಯು ಸಂದಿತೆಂದು ತಿಳಿಸಿದ್ದಾನೆ. ಆದರೆ ಇಲಾಖೆಯಲ್ಲಿ ತಿರಸ್ಕೃತಗೊಂಡ ಪ್ರಸ್ತಾವಗಳು ಮತ್ತು ಇತ್ಯರ್ಥದಲ್ಲಿರುವ ಪ್ರಸ್ತಾವಗಳಿಗೆ ಸಂಬಂಧಪಟ್ಟಿರುವ ಮನವಿಯ 2 ಮತ್ತು 3ನೇ ಸಂಖ್ಯೆಗಳ ಬಾಬಿನಲ್ಲಿರುವ ಮುಖ್ಯವಾದ ಮಾಹಿತಿಯನ್ನು ಪ್ರತಿವಾದಿಯು ಒದಗಿಸದಿರುವುದರಿಂದ, ತನಗೆ ಒದಗಿಸಲಾದ ಮಾಹಿತಿಯು ಅಪೂರ್ಣವಾಗಿದೆಯೆಂದು ಹೇಳಿದ್ದಾನೆ.

5. ಅಲ್ಲದೆ ಫಿರ್ಯಾದುದಾರನು, ಹೊಸ ಕಾಲೇಜುಗಳು / ವ್ಯಾಸಂಗ ಕ್ರಮಗಳನ್ನು (ಕೋರ್ಸ್‌ಗಳು) ಮಂಜೂರು ಮಾಡುವುದಕ್ಕಾಗಿ ಶಿಕ್ಷಣ ಇಲಾಖೆಯು ಕಾಲದ ಚೌಕಟ್ಟನ್ನು ರೂಪಿಸಿಲ್ಲದಿದ್ದು ಅಥವಾ ಬದ್ಧವಾಗಿರದಿದ್ದು. ಇದರ ಪರಿಣಾಮವಾಗಿ ಬೆಂಗಳೂರು ನಗರದಲ್ಲಿ ಜೂನ್–ಜುಲೈ ತಿಂಗಳುಗಳಲ್ಲಿ ಅಂದರೆ ಶೈಕ್ಷಣಿಕ ವರ್ಷ ಪ್ರಾರಂಭವಾದ ನಂತರ ಮಾತ್ರ ಹೊಸದಾಗಿ ಮಂಜೂರು ಮಾಡಲಾದ ಪದವಿಪೂರ್ವ ಕಾಲೇಜುಗಳ ಬಹಳಷ್ಟು ವಿದ್ಯಾರ್ಥಿ ಸಮುದಾಯಕ್ಕೆ ಅನಗತ್ಯ ತೊಂದರೆ ಉಂಟಾಗಿರುವುದಾಗಿ ಹೇಳಿದ್ದಾನೆ. ಆದ್ದರಿಂದ ಹೊಸ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವುದಕ್ಕಾಗಿ/ ಪ್ರಾರಂಭಿಸುವುದಕ್ಕಾಗಿ ಕಾಲದ ಚೌಕಟ್ಟು / ಕ್ಯಾಲೆಂಡರನ್ನು ರೂಪಿಸಲು ಶಿಕ್ಷಣ ಇಲಾಖೆ ಸಂಬಂಧದಲ್ಲಿ ಸರ್ಕಾರಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡುವಂತೆ ವಿನಂತಿಸಿದ್ದಾನೆ.

6. ಆಯೋಗವು ಫಿರ್ಯಾದುದಾರನ ನಿವೇದನೆಯನ್ನು ಗಮನಕ್ಕೆ ತೆಗೆದುಕೊಂಡಿದೆ. ಆಯೋಗವು ಪ್ರತಿವಾದಿಯು ಅಪೂರ್ಣ ಮಾಹಿತಿಯನ್ನು ಒದಗಿಸಿರುವುದಲ್ಲದೆ, ಗೈರು ಹಾಜರಾಗಿರುವುದನ್ನು ಸಹ ಗಮನಕ್ಕೆ ತೆಗೆದುಕೊಂಡಿದೆ. ಆದ್ದರಿಂದ ಆಯೋಗವು ಈ ಆದೇಶದ ಮೂಲಕ ಪ್ರತಿವಾದಿಗೆ ಅಂದರೆ ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಮಂಡಲಿ ಇವರು ಫಿರ್ಯಾದುದಾರನಿಗೆ ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ ಮೂಲಕ ವೆಚ್ಚವಿಲ್ಲದೆ ಉಚಿತವಾಗಿ 10 ದಿನಗಳೊಳಗೆ

ಮನವಿಯ 2 ಮತ್ತು 3ನೇ ಸಂಖ್ಯೆಗಳ ಬಾಬಿನಲ್ಲಿರುವ ಮುಖ್ಯವಾದ ಮತ್ತು ಸಂಪೂರ್ಣ ಮಾಹಿತಿಯನ್ನು ಒದಗಿಸಲು ನಿರ್ದೇಶಿಸಿದೆ.

7. ಆಯೋಗವು, ಅಧಿನಿಯಮದ 4(i) (ಬಿ) (iii) ನೇ ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳು ತನ್ನ ನಿರ್ಣಯ ರಚನಾ ಪ್ರಕ್ರಿಯೆಯಲ್ಲಿ ಅವುಗಳು ಅನುಸರಿಸಬೇಕಾದ ಕಾರ್ಯವಿಧಾನವನ್ನು ಪ್ರಕಟಿಸುವಂತೆ ಅಗತ್ಯಪಡಿಸಿರುವುದನ್ನು ಗಮನಕ್ಕೆ ತೆಗೆದುಕೊಂಡಿದೆ. ತದನುಸಾರವಾಗಿ, ಆಯೋಗವು, ಹೊಸ ಪದವಿಪೂರ್ವ ಕಾಲೇಜುಗಳನ್ನು ತೆರೆಯಲು ಮಂಜೂರು ಕಾಲಮಿತಿಗೆ ಸಂಬಂಧಪಟ್ಟಂತೆ ಫಿರ್ಯಾದುದಾರನು ಮಾಡಿಕೊಂಡಿರುವ ಮೇಲಿನ ನಿವೇದನೆಗಳನ್ನು ದಸ್ತಾವೇಜುಗಳನ್ನು ಪರಿಶೀಲಿಸಲು, ಪ್ರಕ್ರಿಯೆಯನ್ನು ಪ್ರಕಟಿಸಲು ಮತ್ತು 30 ದಿನಗಳೊಳಗೆ ಆಯೋಗಕ್ಕೆ ವರದಿಯನ್ನು ಸಲ್ಲಿಸಲು ಆಯುಕ್ತರು, ಪದವಿಪೂರ್ವ ಮಂಡಳಿ ಇವರಿಗೆ ಆದೇಶಿಸಿದೆ.

8. ಅಲ್ಲದೆ, ಈ ಆದೇಶದ ಪ್ರತಿ ಮೂಲಕ, ಆಯೋಗವು, ಪ್ರತಿವಾದಿಗೆ, ಅಂದರೆ ಶ್ರೀ ಪಿ. ನಂಜುಂಡಮೂರ್ತಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಮಂಡಲಿ ಇವರಿಗೆ, ಅಪೂರ್ಣ ಮಾಹಿತಿಯನ್ನು ಸಲ್ಲಿಸಿರುವುದಕ್ಕೆ ಮತ್ತು ಅಗತ್ಯ ಮಾಹಿತಿಯನ್ನು ಒದಗಿಸುವಲ್ಲಿ ವಿಳಂಬ ಮಾಡಿರುವುದಕ್ಕೂ ಸಹ ಮಾಹಿತಿ ಹಕ್ಕು ಅಧಿನಿಯಮದ 20ನೇ ಪ್ರಕರಣದ ಅಡಿಯಲ್ಲಿ ಆತನಿಗೆ ಏಕೆ ದಂಡವನ್ನು ವಿಧಿಸಬಾರದು ಎಂಬುದಕ್ಕೆ 30 ದಿನಗಳೊಳಗೆ ಕಾರಣ ತೋರಿಸುವಂತೆ ನಿರ್ದೇಶಿಸಿದೆ.

9. ಆತನು ಮುಂದಿನ ವಿಚಾರಣೆಯ ಕಾಲದಲ್ಲಿ ಮತ್ತಷ್ಟು ಮೌಖಿಕ ಮತ್ತು / ಅಥವಾ ಲಿಖಿತ ನಿವೇದನೆಗಳನ್ನು ಸಲ್ಲಿಸಬಹುದು.

10. ಆತನು, ಮುಂದಿನ ವಿಚಾರಣೆಯ ಕಾಲದಲ್ಲಿ ಖುದ್ದಾಗಿ ಹಾಜರಾಗುವಂತೆಯೂ ಸಹ ನಿರ್ದೇಶಿಸಲಾಗಿದೆ.

11. ದೂರಿನ ವಿಚಾರಣೆಯನ್ನು 16ನೇ ನವೆಂಬರ್ 2007 ರಂದು ಮಧ್ಯಾಹ್ನ 3–30ಕ್ಕೆ ಮುಂದೂಡಲಾಗಿದೆ.
12. ಇದೇ 2007ರ ಜುಲೈ, 16ನೇ ದಿವಸದಂದು ಬಹಿರಂಗ ನ್ಯಾಯಾಲಯದಲ್ಲಿ ಹೇಳಿ ಬರೆಸಲಾಗಿದೆ, ಕರಡನ್ನು ಸರಿಪಡಿಸಲಾಗಿದೆ, ಸಹಿ ಮಾಡಿದ್ದು ಉಚ್ಚರಿಸಲಾಗಿದೆ.

**6ನೇ ಪ್ರಕರಣದ ಮೇರೆಗೆ ಸರಿಯಾದ ಮತ್ತು ಮುಖ್ಯವಾದ ಮಾಹಿತಿಯನ್ನು ಒದಗಿಸುವ ಕುರಿತ ಆದೇಶಗಳು :**

ನೀಡಲಾದ ಮಾಹಿತಿಯ ವಿಶ್ವಾಸಾರ್ಹತೆ

**ಕೆಐಸಿ 1282 ಸಿಓಎಂ 2006**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಎನ್. ಅಂಬರಸನ್–ವಿರುದ್ಧ–ಸಾರ್ವಜನಿಕ ಮಾಹಿತಿ ಅಧಿಕಾರಿ, ಇ–ಆಡಳಿತ ಇಲಾಖೆ, ಸಿಆಸುಇ (ಆಸು)

**ಆದೇಶ**

**4–6–2007**

1. ಫಿರ್ಯಾದುದಾರನು ಹಾಜರಾಗಿದ್ದನು. ಪ್ರತಿವಾದಿಯಾದ ಶ್ರೀ ಗಂಗಾಧರ ದತನಾಳ್ ಪ್ರಭಾರಿ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಪೀಠಾಧಿಕಾರಿ, ಇ–ಆಡಳಿತ ಇಲಾಖೆ ಇವರು ಶ್ರೀ ಹೆಚ್.ಎಸ್. ಶಂಕರ್, ಹಿರಿಯ ಕಾರ್ಯಕ್ರಮಾಧಿಕಾರಿ ಇವರೊಂದಿಗೆ ಹಾಜರಾಗಿದ್ದರು.
2. ಆಯೋಗದ ನಿರ್ದೇಶನದ ಅನುಸರಣೆಯಲ್ಲಿ, ಫಿರ್ಯಾದುದಾರನು, ಪ್ರತಿವಾದಿಯ ಪ್ರತಿಯೊಂದಿಗೆ 10–4–2007 ರಂದು ವಾದಗಳ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾನೆ. ಇದಕ್ಕೆ ಪ್ರತಿಕ್ರಿಯೆಯಾಗಿ

ಪ್ರತಿವಾದಿಯು 21–4–2007ರಂದು ಪ್ರತ್ಯುತ್ತರವನ್ನು ಸಲ್ಲಿಸಿದ್ದಾನೆ. ಆದರೆ, ಪ್ರತಿವಾದಿಯು ಫಿರ್ಯಾದುದಾರನಿಗೆ ಸ್ಥಳದಲ್ಲೇ ಪ್ರತಿಯನ್ನು ಒಪ್ಪಿಸಿದ್ದಾನೆ. ಆತನ ವಾದಗಳ ಹೇಳಿಕೆಯಲ್ಲಿ ಫಿರ್ಯಾದುದಾರನು, ದಿನಾಂಕ 1–11–2000ದ ಸರ್ಕಾರಿ ಆದೇಶದಲ್ಲಿ ರೂಪಿಸಲಾದ ಅಗತ್ಯತೆಯನ್ನು ಪೂರೈಸುವಂತಹ NUDI (ನುಡಿ) ತಂತ್ರಾಂಶ (ಸಾಫ್ಟವೇರ್)ವನ್ನು ಪ್ರಮಾಣೀಕರಿಸುವ ಅಗತ್ಯವಿಲ್ಲವೆಂಬ ಪ್ರತಿವಾದಿಯ ವಾದವು ದಾರಿ ತಪ್ಪಿಸುವುದರಿಂದ, ಸರಿಯಾಗಿರುವುದಿಲ್ಲ ಎಂಬುದಾಗಿ ಹೇಳಿದ್ದಾನೆ. ಅಲ್ಲದೆ, ಆತನ ಮಾಹಿತಿಗಾಗಿನ ಮನವಿಯಲ್ಲಿ ಆತನು ಪ್ರಮಾಣೀಕರಣವನ್ನು ಮಾತ್ರವಲ್ಲ ಆದರೆ ನುಡಿ ತಂತ್ರಾಂಶವು ದಿನಾಂಕ: 1–11–2000 ದ ಸರ್ಕಾರಿ ಆದೇಶದಲ್ಲಿ ನಮೂದಿಸಲಾದ ಅಗತ್ಯತೆಯನ್ನು ಪೂರೈಸುತ್ತದೆಂಬುದನ್ನು ತೋರಿಸಲು ಪ್ರತಿವಾದಿಯು ಅವಲಂಬಿಸಿರುವ ಇತರ ದಸ್ತಾವೇಜುಗಳನ್ನು ಸಹ ಕೋರುವುದಾಗಿರುತ್ತದೆ ಎಂಬುದಾಗಿ ಹೇಳಿದ್ದಾನೆ. ಇದೂ ಅಲ್ಲದೆ, ಫಿರ್ಯಾದುದಾರನು, 12–3–2007 ರಂದು ಪ್ರತಿವಾದಿಯು ಸಲ್ಲಿಸಿದ ನಿವೇದನೆಗಳಲ್ಲಿ ಪ್ರತಿವಾದಿಯು ತಂತ್ರಾಂಶವು ಸರ್ಕಾರದ ಒಡೆತನದ್ದಾಗಿದ್ದು ಸಂಪೂರ್ಣ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರುವುದಾಗಿ ಹೇಳಿದ್ದಾನೆಂದು ತಿಳಿಸಿರುತ್ತಾನೆ. ಪ್ರತಿವಾದಿಯ ಈ ಹೇಳಿಕೆಯು ಕನ್ನಡ ತಂತ್ರಾಂಶದ ಅಭಿವೃದ್ಧಿಯ ಹಕ್ಕುಗಳು ಸಂಪೂರ್ಣವಾಗಿ ಸರ್ಕಾರದಲ್ಲಿ ನಿಹಿತವಾಗಿಲ್ಲದಿರುವುದರಿಂದ ದೋಷಯುಕ್ತವಾಗಿರುತ್ತದೆ. ಆದ್ದರಿಂದ ಒದಗಿಸಲಾದ ಮಾಹಿತಿಯು ತಪ್ಪಾಗಿದೆ.

3. ತದನಂತರ, ಫಿರ್ಯಾದುದಾರನು, ದಿನಾಂಕ 12–3–2007 ರ ತನ್ನ ಲಿಖಿತ ನಿವೇದನೆಯಲ್ಲಿ, ಆತನು ನುಡಿ ತಂತ್ರಾಂಶದ ಅಭಿವೃದ್ಧಿಯಲ್ಲಿ ಸರ್ಕಾರವು ನಿಗದಿಪಡಿಸಿದ ಗುಣಮಟ್ಟವನ್ನು ಮತ್ತು ಇ–ಆಡಳಿತ ಇಲಾಖೆಯಲ್ಲಿ ಬಳಸಲಾಗುತ್ತಿರುವ ಕಳಪೆ ಗುಣಮಟ್ಟವನ್ನು ತೋರಿಸುವ ತೌಲನಿಕ ತಖ್ತೆಯನ್ನು ಸಲ್ಲಿಸಿದ್ದಾನೆಂದು ಹೇಳಿದ್ದಾನೆ. ಪ್ರತಿವಾದಿಯು ಈ ಹೇಳಿಕೆಗೆ ಯಾವುವೇ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲವೆಂದು ಆತನು ಹೇಳಿದ್ದಾನೆ.

4. ಬಾಬು ಸಂಖ್ಯೆ 19ರಲ್ಲಿರುವ ಮಾಹಿತಿಗೆ ಸಂಬಂಧಿಸಿದಂತೆ, ಪ್ರತಿವಾದಿಯು, ಇ–ಆಡಳಿತ ಇಲಾಖೆಯು, ನೋಡಲ್ ಇಲಾಖೆಯಾಗಿ ಸರ್ಕಾರಿ ಇಲಾಖೆಗಳಲ್ಲಿ ಬಳಸಲಾದ ವಿವಿಧ ರೀತಿಯ ತಂತ್ರಾಂಶವನ್ನು (ಸಾಫ್ಟ್‌ವೇರ್) ಸಂಗ್ರಹಿಸಿದೆ ಮತ್ತು ಒಟ್ಟುಗೂಡಿಸಿದೆಯೆಂದು ಹೇಳಿದ್ದಾನೆ. ಆದರೆ, ಇ–ಆಡಳಿತ ಇಲಾಖೆಯು ಈ ತಂತ್ರಾಂಶಗಳ ಮೇಲ್ವಿಚಾರಣೆ, ಉಸ್ತುವಾರಿ ಅಥವಾ ಪರಿಶೋಧನೆಯನ್ನು ಕೈಗೊಂಡಿಲ್ಲವೆಂದು ಆತನು ಹೇಳಿದ್ದಾನೆ. ಆದ್ದರಿಂದ, ಆತನು, ಸರ್ಕಾರವು ನಿಗದಿಪಡಿಸಿದ ಗುಣಮಟ್ಟದ ಪ್ರಕಾರ ಕನ್ನಡ ತಂತ್ರಾಂಶವನ್ನು ಬಳಸಲು ಕೈಗೊಂಡಿರುವ ಪ್ರಯತ್ನಗಳ ಬಗ್ಗೆ ಮಾಹಿತಿಯು ಇ–ಆಡಳಿತ ಇಲಾಖೆ ದಾಖಲೆಗಳಲ್ಲಿ ಲಭ್ಯವಿಲ್ಲವೆಂದು ಹೇಳಿದ್ದಾನೆ. ಫಿರ್ಯಾದುದಾರನು, ಪ್ರತಿವಾದಿಯಿಂದ ತಂತ್ರಾಂಶಗಳ ಮೇಲ್ವಿಚಾರಣೆ, ಅಭಿವೃದ್ಧಿ ಮತ್ತು ಪರಿಶೋಧನೆಯನ್ನು ಕೈಗೊಂಡಿಲ್ಲವೆಂಬ ಪ್ರತಿವಾದಿಯ ಮೇಲಿನ ಹೇಳಿಕೆಯು ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿಟಿ) ಇಲಾಖೆಗಳಿಗೆ ಸೇರಿದ್ದು. ತರುವಾಯದಲ್ಲಿ ಇ–ಆಡಳಿತ ಇಲಾಖೆಗೆ ವರ್ಗಾಯಿಸಲಾಗಿದ್ದ ತಂತ್ರಾಂಶಗಳಿಗೆ ಅನ್ವಯವಾಗುತ್ತದೆಯೇ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿದ್ದಾನೆ. ಪ್ರತಿವಾದಿಯು, ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಈ ಸಂಬಂಧವಾಗಿ 15 ದಿನಗಳೊಳಗೆ ಆಯೋಗಕ್ಕೆ ನಿವೇದನೆಯನ್ನು ಸಲ್ಲಿಸುವುದಾಗಿ ಹೇಳಿದ್ದಾನೆ.

5. ಇದೂ ಅಲ್ಲದೆ, ಆತನು ಸರ್ಕಾರದಿಂದ ರಚಿಸಲಾದ ಸರ್ಕಾರಿ ಇಲಾಖೆಗಳ ಎಲ್ಲಾ ತಾಂತ್ರಿಕ ಸಲಹಾ ಸಮಿತಿಗಳಲ್ಲಿ, ಇ–ಆಡಳಿತ ಪ್ರತಿನಿಧಿಯು, ಒಬ್ಬ ಸದಸ್ಯರಾಗಿದ್ದು, ಅವರು ಅದರಲ್ಲಿ ಅಪರಿವರ್ತನೀಯವಾಗಿ ಭಾಗವಹಿಸುತ್ತಾರೆ ಮತ್ತು ತಂತ್ರಾಂಶ (ಹಾರ್ಡ್‌ವೇರ್) ಮತ್ತು ಯಂತ್ರಾಂಶ (ಸಾಫ್ಟ್‌ವೇರ್)ಗಳ ಸಂಗ್ರಹಣೆ ಪ್ರಕ್ರಿಯೆಯಲ್ಲಿ ಸಲಹೆಯನ್ನು ನೀಡುತ್ತಾರೆಂದು ಹೇಳಿದ್ದಾನೆ.

6. ಇದೂ ಅಲ್ಲದೆ, ಫಿರ್ಯಾದುದಾರನು, ಪ್ರತಿವಾದಿಯು ಸಲ್ಲಿಸಿದ ಪ್ರತ್ಯುತ್ತರವನ್ನು ವಿವರವಾಗಿ ಪರಿಶೀಲಿಸಲು ಮತ್ತು ತನ್ನ ಟೀಕೆ ಟಿಪ್ಪಣಿಗಳನ್ನು ಸಲ್ಲಿಸಬೇಕಾಗಿರುವುದರಿಂದ ಆತನು ಕಾಲಾವಕಾಶವನ್ನು ಕೇಳಿದ್ದಾನೆ. ಆಯೋಗವು, ಆಯೋಗದ ಅನುಸರಣೆ ಅಡಿಯಲ್ಲಿ, ಪರಸ್ಪರ ಪ್ರತಿಯೊಬ್ಬನಿಗೂ ಪ್ರತಿಯನ್ನು

ಕೊಡುವುದರೊಂದಿಗೆ 30 ದಿನಗಳೊಳಗೆ ತಮ್ಮ ಲಿಖಿತ ಟೀಕೆಟಿಪ್ಪಣಿಗಳನ್ನು ಸಲ್ಲಿಸುವಂತೆ ಉಭಯ ಪಕ್ಷಕಾರರಿಗೆ ನಿರ್ದೇಶಿಸಿದೆ.

7. ಫಿರ್ಯಾದಿನ ವಿಚಾರಣೆಯನ್ನು 5–9–2007 ರ ಮಧ್ಯಾಹ್ನ 3–30ಕ್ಕೆ ಮುಂದೂಡಲಾಗಿದೆ.
8. ಇದೇ ಜೂನ್ 2007ರ 4ನೇ ದಿನದಂದು ಬಹಿರಂಗ ನ್ಯಾಯಾಲಯದಲ್ಲಿ ಹೇಳಿ ಬರೆಸಲಾಗಿದೆ. ಕರಡನ್ನು ಸರಿಪಡಿಸಲಾಗಿದೆ. ಸಹಿ ಮಾಡಿದ್ದು ಉಚ್ಚರಿಸಲಾಗಿದೆ.

**(ಎ) ವಸೂಲಿ ಮಾಡಲಾದ ಹೆಚ್ಚುವರಿ ಶುಲ್ಕದ ಮರುಪಾವತಿ:**

**ಕೆಐಸಿ 163 ಎಪಿಎಲ್ 2007**

**ಕರ್ನಾಟಕ ಮಾಹಿತಿ ಆಯೋಗ**

**(ಶ್ರೀ ಎಂ. ಶಿವಪ್ರಸಾದ್–ವಿರುದ್ಧ–ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಮೈಸೂರು ಮತ್ತು ಇನ್ನೊಬ್ಬರು)**

**ಆದೇಶ**

**31–5–2007.**

1. ಅಪೀಲುದಾರನು ವಕೀಲರಾದ ಶ್ರೀ ಆರ್. ಸೋಮಸುಂದರ ಇವರೊಂದಿಗೆ ಹಾಜರಾಗಿದ್ದರು. ಶ್ರೀ ಆರ್. ಸೋಮಸುಂದರ ಇವರು ವಕಾಲತ್ತನ್ನು ಸಲ್ಲಿಸಿದ್ದರು. ಶ್ರೀ ಜಿ. ವೆಂಕಟಾಚಲಯ್ಯ, ಸಹಾಯಕ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಕಚೇರಿ, ಮೈಸೂರು ಇವರು ಪ್ರತಿವಾದಿಯನ್ನು ಪ್ರತಿನಿಧಿಸಿದ್ದರು:
2. ದಿನಾಂಕ: 5–1–2007 ರ ಮಾಹಿತಿಗಾಗಿ ತನ್ನ ಮನವಿಯಲ್ಲಿ, ಅಪೀಲುದಾರನು, ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಪ್ರವರ್ಗ, ಅಕ್ಷಯ ಯೋಜನೆ, ಅಂತ್ಯೋದಯ ಯೋಜನೆ, ಅನ್ನಪೂರ್ಣ ಯೋಜನೆ ಮುಂತಾದವುಗಳ ಅಡಿಯಲ್ಲಿ ಅರ್ಹರಾದ ಫಲಾನುಭವಿಗಳ ಪಟ್ಟಿಯನ್ನೊಳಗೊಂಡಂತೆ ಪಡಿತರ ಚೀಟಿಯ ವಿತರಣೆಯ ವಿವರಗಳನ್ನು ಸಿಡಿ ರೂಪದಲ್ಲಿ ಕೋರಿದ್ದಾನೆ.
3. ಇದಕ್ಕೆ ಉತ್ತರವಾಗಿ ಪ್ರತಿವಾದಿಯು, ಮೆಸರ್ಸ್ ಕಾಮಟ್ ಟೆಕ್ನಾಲಜೀಸ್ ಮೈಸೂರು. ಇವರು ವಹಿಸಿಕೊಂಡಿರುವ ನಗರ ಪ್ರದೇಶಗಳನ್ನು ಒಳಗೊಂಡಂತೆ ಮೈಸೂರು ಜಿಲ್ಲೆಯಲ್ಲಿ ಪಡಿತರ ಚೀಟಿಯನ್ನು ನೀಡುವುದಕ್ಕಾಗಿ ಸಂಗ್ರಹಿಸಲಾದ ಮಾಹಿತಿಯ ಗಣಕೀಕರಣದ ಕಾರ್ಯವನ್ನು ಮೆಸರ್ಸ್ ಕಾಮೆಟ್ ಟೆಕ್ನಾಲಜಿಸ್, ಮೈಸೂರು ಇವರಿಗೆ ವಹಿಸಲಾಗಿರುವುದಾಗಿ ಹೇಳಿರುವ ಮೂಲಕ ಅಪೀಲುದಾರನಿಗೆ ದಿನಾಂಕ 20–1–2007 ರಂದು ಹಿಂಬರಹವನ್ನು ನೀಡಿರುತ್ತಾನೆ. ಆದ್ದರಿಂದ ಆತನು ಈ ಸಂಬಂಧದಲ್ಲಿ ಆಯುಕ್ತರು, ಆಹಾರ ಮತ್ತು ನಾಗರಿಕ ಸರಬರಾಜು ಬೆಂಗಳೂರು ಇವರನ್ನು ಸಂಪರ್ಕಿಸಲು ಅಪೀಲುದಾರನಿಗೆ ನಿರ್ದೇಶಿಸಿದ್ದಾನೆ.
4. ಸಾರ್ವಜನಿಕ ಮಾಹಿತಿ ಅಧಿಕಾರಿಯ ಈ ತೀರ್ಮಾನದಿಂದ ಬಾಧಿತನಾದ ಅಪೀಲುದಾರನು, 25–1–2007 ರಂದು ಜಿಲ್ಲಾಧಿಕಾರಿಗೆ ಮೊದಲ ಅಪೀಲನ್ನು ಸಲ್ಲಿಸಿದ್ದಾನೆ. ಜಿಲ್ಲಾಧಿಕಾರಿಯು ದಿನಾಂಕ 7–2–2007 ರಂದು ಅಪೀಲುದಾರನಿಗೆ ನೀಡಿದ ತಮ್ಮ ಹಿಂಬರಹದಲ್ಲಿ, ಜಿಲ್ಲೆಯಲ್ಲಿ ಕೈಗೊಳ್ಳಲಾದ ಫಲಾನುಭವಿಗಳ ಗಣತಿಯು ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ಕೋರಲಾದ ಮಾಹಿತಿಯನ್ನು ನೀಡಲು ಸಾಧ್ಯವಾಗಲಿಲ್ಲವೆಂದು ಹೇಳಿದ್ದಾರೆ. ಮೊದಲನೆ ಅಪೀಲು ಪ್ರಾಧಿಕಾರಿಯ ತೀರ್ಮಾನದಿಂದ ಬಾಧಿತನಾದ ಅಪೀಲುದಾರನು, 9–3–2007 ರಂದು ಆಯುಕ್ತರಿಗೆ ಈ ಎರಡನೇ ಅಪೀಲನ್ನು ಸಲ್ಲಿಸಿದ್ದಾನೆ.
5. ಪ್ರತಿವಾದಿಯು, ಆಯೋಗದಿಂದ ಸಮನ್ಸ್‌ಗಳನ್ನು ಹೊರಡಿಸಿದ ನಂತರ ಇಡೀ ವಿಷಯವನ್ನು ಮರುಪರಿಶೀಲಿಸಲಾಗಿದ್ದು ಆಯುಕ್ತರು ಆಹಾರ ಮತ್ತು ನಾಗರಿಕ ಸರಬರಾಜು, ಬೆಂಗಳೂರು ಮತ್ತು ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ ಇವರೊಂದಿಗೆ ಸಮಾಲೋಚಿಸಿ, ಕೋರಲಾದ ಮಾಹಿತಿಯನ್ನು ಸಿ.ಡಿ.

ರೂಪದಲ್ಲಿ ನೀಡಲು ನಿರ್ಧರಿಸಲಾತೆಂದು ಹೇಳಿದ್ದಾರೆ. ಮಾಹಿತಿಯ ಗಣಕೀಕರಣ ಕಾರ್ಯವನ್ನು ವಹಿಸಿಕೊಡಲಾಗಿದ್ದು ಸಮಾಲೋಚಕರಿಂದ ಸಂಬಂಧಪಟ್ಟ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ತದ ನಂತರ ಎರಡು ಸಂದರ್ಭಗಳಲ್ಲಿ ಅಂದರೆ 23–5–2007 ಮತ್ತು 29–5–2007 ರಂದು ಅಪೀಲುದಾರನಿಗೆ ಮಾಹಿತಿಯನ್ನು ನೀಡಲಾಯಿತು.

6. ತದನಂತರ ಪ್ರತಿವಾದಿಯು, ಒದಗಿಸಲಾದ ಮಾಹಿತಿಯಲ್ಲಿ, ಬೇಕೆಂದು ಕೇಳಲಾದ ಮಾಹಿತಿಯ ಶೇ.70 ರಷ್ಟು ಭಾಗವು ಇರುತ್ತದೆ ಎಂದು ಹೇಳಿದ್ದಾರೆ. ಕೇಳಲಾದ ಮಾಹಿತಿಯನ್ನು ಈಗಾಗಲೇ ಸಿ.ಡಿ. ರೂಪದಲ್ಲಿ ಇನ್ನುಳಿದ ಮಾಹಿತಿಯನ್ನು, ಗಣಕ ಯಂತ್ರದ ಬರಹದಲ್ಲಿ ಮಾಡಿರುವುದರಿಂದ ಏಳು ದಿನಗಳೊಳಗೆ ಅಪೀಲುದಾರನಿಗೆ ಒದಗಿಸಲಾಗುವುದಾಗಿ ಸಹ ಆತ ಹೇಳಿದ್ದಾನೆ.

7. ಅಪೀಲುದಾರನು, ಎರಡು ಸಿ.ಡಿ.ಗಳ ರೂಪದಲ್ಲಿನ ಮಾಹಿತಿಯನ್ನು ಸ್ವೀಕರಿಸಿದ ಬಗ್ಗೆ ತಿಳಿಸಿದ್ದಾನೆ. ಆದರೆ ಆತನು, ಒದಗಿಸಲಾದ ಮಾಹಿತಿಯು ಅಪೂರ್ಣವಾಗಿದೆ ಮತ್ತು ಮಾಹಿತಿಯನ್ನು ಒದಗಿಸುವಲ್ಲಿ ಅತಿಯಾದ ವಿಳಂಬವಾಗಿದೆಯೆಂದು ಹೇಳಿದ್ದಾನೆ. ಪ್ರತಿವಾದಿಯು ಮಾಹಿತಿ ಪೂರೈಕೆಯ ವೆಚ್ಚದ ಸಂಬಂಧವಾಗಿ ಹೆಚ್ಚುವರಿ ಶುಲ್ಕವಾಗಿ 600–00 ರೂ.ಗಳ ಮೊತ್ತವನ್ನು ವಸೂಲು ಮಾಡಿದ್ದಾನೆಂದು ಸಹ ಆತನು ಹೇಳಿದ್ದಾನೆ. ಆದರೆ ಈವರೆಗೆ, ಆತನು ಮಾಹಿತಿಯನ್ನು ಎರಡು ಸಿ.ಡಿ.ಗಳಲ್ಲಿ ಅದೂ ಗೊತ್ತುಪಡಿಸಲಾದ 30ದಿನಗಳ ಅವಧಿಯ ಮುಕ್ತಾಯದ ನಂತರವಷ್ಟೆ ಒದಗಿಸಿದ್ದಾನೆ.

8. ಇದೂ ಅಲ್ಲದೆ, ಅಪೀಲುದಾರನು, ಪ್ರತಿವಾದಿಯ ಒಪ್ಪಿಗೆ ಪ್ರಕಾರ ಕೋರಲಾದ ಇಡೀ ಮಾಹಿತಿಯನ್ನು ಮೂರು ಸಿ.ಡಿ.ಗಳಲ್ಲಿ ಅಳವಡಿಸಬಹುದಾಗಿತ್ತು ಮತ್ತು ಕರ್ನಾಟಕ ಮಾಹಿತಿ ಹಕ್ಕು ನಿಯಮಗಳ ಪ್ರಕಾರ, ಪ್ರತಿವಾದಿಯು, ಸಂದಾಯ ಮಾಡಬೇಕಾದ ಶುಲ್ಕವನ್ನು ಮೊದಲೇ ಲೆಕ್ಕ ಹಾಕಿ ಕರಾರುವಾಕ್ಕಾದ ಮೊತ್ತವನ್ನು ಸಲ್ಲಿಸುವಂತೆ ಅಪೀಲುದಾರನಿಗೆ ತಿಳಿಸಬಹುದಾಗಿತ್ತು ಎಂಬುದಾಗಿಯೂ ಸಹ ಹೇಳಿದ್ದಾನೆ. ಪ್ರತಿವಾದಿಯು ಲೆಕ್ಕಾಚಾರವನ್ನು ನೀಡದೆ ದುಬಾರಿ ಶುಲ್ಕವನ್ನು ವಸೂಲು ಮಾಡಿದ್ದಾನೆ ಮತ್ತು ಮೂವತ್ತು ದಿನಗಳು ಕಳೆದ ತರುವಾಯ ಮಾಹಿತಿಯನ್ನು ನೀಡಿದ್ದಾನೆ. ಈ ಕಾರಣದಿಂದ ಆತನು ಮಾಹಿತಿಯನ್ನು ಉಚಿತವಾಗಿ ಪಡೆಯಲು ಹಕ್ಕುಳ್ಳವನಾಗಿರುತ್ತಾನೆ. ಆದ್ದರಿಂದ ಆತನಿಂದ ಸಂದಾಯ ಮಾಡಲಾದ 600–00 ರೂ.ಗಳ ಹೆಚ್ಚುವರಿ ಶುಲ್ಕವನ್ನು ಮರು ಪಾವತಿಸಲು ಆಯುಕ್ತರು ಆದೇಶಿಸಬೇಕೆಂದು ಹೇಳಿದ್ದಾನೆ.

9. ಮಾಹಿತಿಯನ್ನು ಒದಗಿಸುವಲ್ಲಿ ವಿಳಂಬವಾಗಿರುವ ದೃಷ್ಟಿಯಿಂದ, ಆಯೋಗವು, ಪ್ರತಿವಾದಿಯಿಂದ ವಿಧಿಸಲಾದ 600–00 ರೂ. ಗಳ ಇಡೀ ಶುಲ್ಕವನ್ನು, ಆಯೋಗಕ್ಕೆ ತಿಳಿಸುವುದರೊಂದಿಗೆ ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ (ಆರ್‌ಪಿಎಡಿ) ಮೂಲಕ ಒಂದು ತಿಂಗಳೊಳಗೆ ಕ್ರಾಸ್ ಮಾಡಲಾದ ಡಿ.ಡಿ. ಅಥವಾ ಸಂದಾಯದ ಆದೇಶದ (ಪೇಆರ್ಡರ್) ಮೂಲಕ ಅವನಿಗೆ ಮರು ಪಾವತಿ ಮಾಡತಕ್ಕದ್ದೆಂದು ನಿರ್ದೇಶಿಸಿದೆ.

10. ಅಲ್ಲದೆ, ಅಪೀಲುದಾರನು, ಜಿಲ್ಲಾಧಿಕಾರಿಗೆ ಮತ್ತು ಆಯುಕ್ತರಿಗೆ ಅಪೀಲು ಸಲ್ಲಿಸಿರುವ ಕಾರಣಕ್ಕಾಗಿ ಆತನಿಗೆ ಉಂಟಾದ ನಷ್ಟಕ್ಕಾಗಿ ಮತ್ತು ಆತನು ಭರಿಸಿದ ತಪ್ಪಿಸಬಹುದಾಗಿದ್ದ ವೆಚ್ಚದ ಸಂಬಂಧವಾಗಿಯೂ ಸಹ ನಷ್ಟಪರಿಹಾರ ಸಂದಾಯವನ್ನು ಕೋರಿರುವ ಒಂದು ಅರ್ಜಿಯನ್ನು ಸಲ್ಲಿಸಿದ್ದಾನೆ. ಆಯೋಗವು ಅಪೀಲುದಾರನಿಂದ ಮಾಡಲಾದ ನಿವೇದನೆಗಳನ್ನು ಗಮನಕ್ಕೆ ತೆಗೆದುಕೊಂಡಿದೆ. ಅಪೀಲುದಾರನು ಸಲ್ಲಿಸಿದ ಶಪಥ ಪತ್ರದ ಪ್ರತಿಯನ್ನು ಸ್ಥಳದಲ್ಲೇ ಪ್ರತಿವಾದಿಗೆ ಹಸ್ತಾಂತರಿಸಲಾಗಿದೆ. ಪ್ರತಿವಾದಿಯ ಆಕ್ಷೇಪಣೆಗಳೇನಾದರೂ ಇದ್ದರೆ, ಅವುಗಳನ್ನು ಅಪೀಲುದಾರನಿಗೆ ಪ್ರತಿಯನ್ನು ನೀಡುವುದರೊಂದಿಗೆ ಮೂವತ್ತು ದಿನಗಳೊಳಗೆ ಸಲ್ಲಿಸಲು ನಿರ್ದೇಶಿಸಲಾಗಿದೆ.

11. ಆಯೋಗವು, ಕೋರಲಾದ ಮಾಹಿತಿಯು, ಅಪಾರ ಪ್ರಮಾಣದ್ದಾಗಿದ್ದು ಮತ್ತು ಜಿಲ್ಲಾಧಿಕಾರಿಯು, ಗಣತಿಯ ಕಾರ್ಯವಿಧಾನವು ವರದಿ ಪ್ರಕಾರ ಪೂರ್ಣಗೊಂಡಿಲ್ಲದ ಕಾರಣದಿಂದ ಮಾಹಿತಿಯನ್ನು ಒದಗಿಸಿಲ್ಲ ಎಂಬುದನ್ನು ಗಮನಕ್ಕೆ ತೆಗೆದುಕೊಂಡಿದೆ. ಆದರೂ ಆಯೋಗವು, ಪ್ರತಿವಾದಿಯಾದ ಶ್ರೀ ಎಸ್.ಸಿ. ಮಹದೇವಪ್ಪ, ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಮೈಸೂರು ಇವರಿಗೆ, ಪ್ರತಿ ದಿವಸದ ವಿಳಂಬಕ್ಕಾಗಿ ವಿವರ ನೀಡಲು 30 ದಿನಗಳೊಳಗೆ ಮಾಹಿತಿಯನ್ನು

ಒದಗಿಸುವಲ್ಲಿ ವಿಳಂಬವಾಗಿರುವುದಕ್ಕಾಗಿ ಮತ್ತು ಮಾಹಿತಿಯನ್ನು ಒದಗಿಸುವುದಕ್ಕಾಗಿ ದುಬಾರಿ ಶುಲ್ಕವನ್ನು ವಿಧಿಸಿರುವುದಕ್ಕಾಗಿ ಸಹ ಅಧಿನಿಯಮದ 20(1) ನೇ ಪ್ರಕರಣದ ಅಡಿಯಲ್ಲಿ ಆತನ ವಿರುದ್ಧ ಏಕೆ ಕ್ರಮವನ್ನು ಕೈಗೊಳ್ಳಬಾರದೆಂಬುದಕ್ಕೆ ಕಾರಣ ತೋರಿಸಲು ನಿರ್ದೇಶಿಸಿದೆ.

12. ಆತನು ಮುಂದಿನ ವಿಚಾರಣೆಯ ದಿನಾಂಕದಂದು ಮೌಖಿಕ ಮತ್ತು / ಅಥವಾ ಲಿಖಿತ ನಿವೇದನೆಗಳನ್ನು ಸಲ್ಲಿಸಬಹುದು.

13. ಅಪೀಲಿನ ವಿಚಾರಣೆಯನ್ನು 2007ರ ಸೆಪ್ಟೆಂಬರ್ 4ರ ಮಧ್ಯಾಹ್ನ 3–30ಕ್ಕೆ ಮುಂದೂಡಲಾಗಿದೆ.

14. ಇದೇ 2007ರ ಮೇ 31ನೇ ದಿವಸದಂದು ಬಹಿರಂಗ ನ್ಯಾಯಾಲಯದಲ್ಲಿ ಹೇಳಿ ಬರೆಸಲಾಗಿದೆ. ಕರಡು ಸರಿಪಡಿಸಲಾಗಿದೆ. ಸಹಿ ಮಾಡಿದ್ದು ಉಚ್ಚರಿಸಲಾಗಿದೆ.

**ಕೆಐಸಿ 163 ಎಪಿಎಲ್ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ. ಎಂ. ಶಿವಪ್ರಸಾದ್ – ವಿರುದ್ಧ– ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಮೈಸೂರು ಮತ್ತು ಇತರರು)

**ಆದೇಶ**

**4–9–2007**

1. ಫಿರ್ಯಾದುದಾರನು ಗೈರು ಹಾಜರಾಗಿದ್ದನು. ಪ್ರತಿವಾದಿ ಶ್ರೀ ಎಸ್. ಎ. ಮಹದೇವಪ್ಪ, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಮೈಸೂರು, ಇವರು ಹಾಜರಾಗಿದ್ದರು.

2. ಪ್ರತಿವಾದಿಯು, ಬಿಟ್ಟುಹೋಗಿರುವ ನಮೂದುಗಳಿಗೆ ಸಂಬಂಧಿಸಿದ ಮುಖ್ಯವಾದ ಕುಂದುಕೊರತೆಯನ್ನು ಹೊರತುಪಡಿಸಿ, ಮೈಸೂರು ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಕೂಪನ್‌ಗಳನ್ನು ನೀಡುವ ಗಣಕೀಕರಣದ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಲಾಗಿದೆ ಎಂದು ಹೇಳಿರುತ್ತಾರೆ. ಅಲ್ಲದೆ, ಮೇಲಿನ ಬಾಬುಗಳ ಸಂಬಂಧದಲ್ಲಿ ಸಂಪೂರ್ಣ ಮಾಹಿತಿಯನ್ನು, ಫಿರ್ಯಾದುದಾರರಿಗೆ ದಿನಾಂಕ 06.06.07 ಮತ್ತು 13.06.06 ರಂದು 3 ಸಿಡಿಗಳ ಸಾಫ್ಟ್ ಕಾಪಿಗಳ ರೂಪದಲ್ಲಿ ಮುದ್ದಾಂ ಆಗಿ ಒದಗಿಸಲಾಗಿದೆ ಎಂದು ಸಹಾ ಪ್ರತಿವಾದಿಯು ತಿಳಿಸಿರುತ್ತಾರೆ.

3. ಅದೂ ಅಲ್ಲದೆ, ವಾದಿಯು, ಇದುವರೆಗೂ ತಾತ್ಕಾಲಿಕ ಕೂಪನ್‌ಗಳನ್ನು ನೀಡುವ ಬಗ್ಗೆ ಗಣಕೀಕರಣಗೊಳಿಸಿರುವುದಕ್ಕೆ ಸಂಬಂಧಿಸಿದಂಥ ಮಾಹಿತಿಯನ್ನು 16 ಸಿಡಿಗಳಲ್ಲಿ ಫಿರ್ಯಾದುದಾರರಿಗೆ ಒದಗಿಸಲಾಗಿದೆಯೆಂದು ಹೇಳಿರುತ್ತಾರೆ. ಮುಂದುವರೆದು, ಅವರು ಫಿರ್ಯಾದುದಾರರಿಂದ ಸಂಗ್ರಹಿಸಿದ್ದ ಹೆಚ್ಚುವರಿ ಫೀಜು 600/– ರೂಪಾಯಿಗಳನ್ನು, ಆಯೋಗದ ನಿರ್ದೇಶನಕ್ಕನುಸಾರವಾಗಿ ದಿನಾಂಕ 12.06.07 ರಂದು ಡಿಡಿ ಮುಖಾಂತರ ಫಿರ್ಯಾದುದಾರರಿಗೆ ಹಿಂತಿರುಗಿಸಿರುವುದಾಗಿ ಸಹ ಹೇಳಿರುತ್ತಾರೆ. ಇಷ್ಟೇ ಅಲ್ಲದೆ, ಪ್ರತಿವಾದಿಯು, ಈವರೆಗೆ ಸಂಗ್ರಹಿಸಿದ ಮತ್ತು ಸಂಕಲಿಸಿದ ಮತ್ತು ಕಂಪ್ಯೂಟರ್‌ನಲ್ಲಿ ಅಳವಡಿಸಿದ ಮಾಹಿತಿಯನ್ನು ಸಂಪೂರ್ಣವಾಗಿ ಫಿರ್ಯಾದುದಾರರಿಗೆ ಒದಗಿಸಲಾಗಿದೆ ಎಂದೂ ತಿಳಿಸಿರುತ್ತಾರೆ.

4. ತಪ್ಪಿಸಬಹುದಾದ ವೆಚ್ಚಗಳಿಗಾಗಿ ಫಿರ್ಯಾದುದಾರನು ಖರ್ಚು ಮಾಡಿರುವ 5,000/– ರೂಪಾಯಿಗಳ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಸಂಬಂಧದಲ್ಲಿ, ಮಾಹಿತಿ ಕೋರಿದ್ದ ಸಮಯದಲ್ಲಿ ಸಾರ್ವಜನಿಕ ಪ್ರಾಧಿಕಾರಿಯು ಮಾಹಿತಿಯನ್ನು ಹೊಂದಿರದಿದ್ದ ಕಾರಣ, ಸದರಿ ಮಾಹಿತಿಯನ್ನು ಒದಗಿಸಲು ಸಾಧ್ಯವಾಗಲಿಲ್ಲವೆಂದು ಪ್ರತಿವಾದಿಯು ತಿಳಿಸಿರುತ್ತಾರೆ. ಅಲ್ಲದೆ, ದತ್ತಾಂಶವನ್ನು ನಮೂದಿಸುವ, ತಾತ್ಕಾಲಿಕ ಕೂಪನ್‌ಗಳನ್ನು ನೀಡುವ ಮತ್ತು ದತ್ತಾಂಶ ಸಂಗ್ರಹ ಸೃಜಿಸುವ ಪ್ರಕ್ರಿಯೆಗಳನ್ನು ಸಮಾಲೋಚಕರ ಮೂಲಕ ಮಾಡಿಸಲಾಗುತ್ತಿದ್ದು, ಸಂಬಂಧಪಟ್ಟ ಮಾಹಿತಿಯನ್ನು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಆಯುಕ್ತರ ಮುಖಾಂತರ ಸಮಾಲೋಚಕರಿಂದ

ಪಡೆಯಲು ವಿಳಂಬವಾಗಿದೆ ಎಂದು ಹೇಳಿರುತ್ತಾರೆ. ಆದ್ದರಿಂದ ಈ ವಿಳಂಬವೂ ಉದ್ದೇಶಪೂರ್ವಕವಾದದ್ದಲ್ಲ ಮತ್ತು ಫಿರ್ಯಾದುದಾರನಿಗೆ ತಪ್ಪಿಸಬಹುದಾದ ವೆಚ್ಚಕ್ಕೆ ಕಾರಣವೂ ಅಲ್ಲ ಎಂದು ಹೇಳಿರುತ್ತಾರೆ.

5. ಅಲ್ಲದೆ, ಪ್ರತಿವಾದಿಯು, ಮಾಹಿತಿಯನ್ನು ಒದಗಿಸಲು ವಿಳಂಬವಾದುದಕ್ಕಾಗಿ ತನ್ನ ವಿರುದ್ಧ ಕೈಗೊಳ್ಳಲು ಉದ್ದೇಶಿಸಿರುವ ದಂಡನೀಯ ಕ್ರಮದ ಬಗ್ಗೆ ಹಾಗೆಯೇ ತನ್ನ ಮೇಲೆ ಹೊರಿಸಿರುವ ಅನುಚಿತ ಆರೋಪದ ಬಗ್ಗೆ ತನ್ನ ವಿವರಣೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯು, ಕೋರಲಾದ ಮಾಹಿತಿಯನ್ನು ವಾಸ್ತವವಾಗಿ 16 ಸಿಡಿಗಳಲ್ಲಿ ಒದಗಿಸಲಾಗಿದೆಯೇ ಹೊರತು ಈ ಮುಂಚೆ ಆಯೋಗದ ಮುಂದೆ ಒಪ್ಪಲಾದಂತೆ 2 ಸಿಡಿಗಳಲ್ಲಿ ಅಲ್ಲವೆಂದು ಹೇಳಿರುತ್ತಾರೆ. ಅದೂ ಅಲ್ಲದೆ, ಕೋರಲಾದ ಮಾಹಿತಿಯು ತನ್ನಲ್ಲಿ ಕೂಡಲೇ ಲಭ್ಯವಿರಲಿಲ್ಲವೆಂದು ಮತ್ತು ಅದನ್ನು ಮೇಲೆ ಹೇಳಲಾದಂತೆ ಸಮಾಲೋಚಕರುಗಳಿಂದ ಪಡೆಯಬೇಕಾಗಿತ್ತೆಂದು ಅವರು ತಿಳಿಸಿರುತ್ತಾರೆ. ಆದ್ದರಿಂದ, ಪ್ರತಿವಾದಿಯು, ನಷ್ಟ ಪರಿಹಾರವನ್ನೂ ಕೊಡುವಂತೆ ಫಿರ್ಯಾದುದಾರನು ಮಾಡಿಕೊಂಡಿರುವ ಕ್ಲೈಮನ್ನು ತಿರಸ್ಕರಿಸಬೇಕೆಂದು ಮತ್ತು ತನ್ನ ವಿರುದ್ಧ ಪ್ರಸ್ತಾವಿಸಿರುವ ದಂಡನೀಯ ಕ್ರಮವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

6. ಪ್ರತಿವಾದಿಯು ಸಲ್ಲಿಸಿದ ನಿವೇದನೆಯನ್ನು ಆಯೋಗವು ಗಮನಿಸಿದೆ. ಆಯೋಗವು, ಪ್ರತಿವಾದಿಯು ಆಯೋಗಕ್ಕೆ ಸಲ್ಲಿಸಿದ ಲಿಖಿತ ಉತ್ತರದ ಒಂದು ಪ್ರತಿಯನ್ನು ಕಳುಹಿಸುವಂತೆ ನಿರ್ದೇಶಿಸಿತು. ಫಿರ್ಯಾದುದಾರನು, ಭಾರಿ ಪ್ರಮಾಣದ ಮಾಹಿತಿ ಕೋರಿರುವುದನ್ನು ಮತ್ತು ಪ್ರತಿವಾದಿಯ ಹತ್ತಿರ ಆ ಮಾಹಿತಿ ಕೂಡಲೇ ಲಭ್ಯವಿಲ್ಲದಿರುವುದನ್ನು ಸಹ ಆಯೋಗವು ಗಮನಿಸಿದೆ. ಆದರೆ, ಪ್ರತಿವಾದಿಯು, ಅಧಿನಿಯಮದ 6 (3)ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ, ಫಿರ್ಯಾದುದಾರನಿಗೆ ಸೂಚನೆ ನೀಡುವುದರೊಂದಿಗೆ, ಪಡಿತರ ಚೀಟಿಗಳ ಗಣಕೀಕರಣದ ಕಾರ್ಯ ಕೈಗೊಳ್ಳಲು ಪ್ರಾಧಿಕಾರಿಯಾಗಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಆಯುಕ್ತರಿಗೆ, ಫಿರ್ಯಾದುದಾರನು ಮಾಹಿತಿ ಕೋರಿದ್ದ ಮನವಿಯನ್ನು ವರ್ಗಾಯಿಸಲು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಪ್ರತಿವಾದಿಯು ಹಾಗೆ ಕ್ರಮ ತೆಗೆದುಕೊಳ್ಳಲು ತಪ್ಪಿರುತ್ತಾನೆ.

7. ಮೇಲಾಗಿ, ಪ್ರತಿವಾದಿಯು ಒದಗಿಸಬೇಕಾದ ಮಾಹಿತಿಗಾಗಿ ಸಂದಾಯವಾಗಬೇಕಾದ ಹೆಚ್ಚಿನ ಫೀಜನ್ನು ಸರಿಯಾಗಿ ಲೆಕ್ಕ ಹಾಕದಿರುವುದರಿಂದಾಗಿ, ಮಾಹಿತಿ ಹಕ್ಕು ಅಧಿನಿಯಮದ ಉಪಬಂಧಗಳನ್ನು ಅನ್ವಯಿಸುವಲ್ಲಿ ಆತನು ಸಾಕಷ್ಟು ನಿಪುಣನೂ ಆಗಿರುವುದಿಲ್ಲ. ಆದುದರಿಂದ, ಆರ್‌ಟಿಐ ಅಧಿನಿಯಮದ ಉಪಬಂಧಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುವಂತೆ ಆತನಿಗೆ ನಿರ್ದೇಶಿಸಲಾಯಿತು. ಆಯೋಗವು, ಫಿರ್ಯಾದುದಾರನ ಅರ್ಜಿಯನ್ನು ಮತ್ತು ನಷ್ಟ ಪರಿಹಾರದ ಸಂದಾಯಕ್ಕೆ ಫಿರ್ಯಾದಿ ಮಾಡಿದ್ದ ಕ್ಲೇಮಿನ ಬಗ್ಗೆ ಪ್ರತಿವಾದಿಯು ಎತ್ತಿದ ಆಕ್ಷೇಪಣೆಗಳನ್ನು ಪರಿಶೀಲಿಸಿತು. ಕೋರಲಾಗಿದ್ದ ಮಾಹಿತಿ ಭಾರೀ ಪ್ರಮಾಣದ್ದಾಗಿದ್ದುದರಿಂದ ಮತ್ತು ಅದು ಕೂಡಲೇ ಲಭ್ಯವಿಲ್ಲದಿದ್ದುದರಿಂದ ಪ್ರತಿವಾದಿಯು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಆಯುಕ್ತರ ಅನುಮತಿಯನ್ನು ಪಡೆದ ನಂತರ, 16 ಸಿಡಿಗಳಲ್ಲಿ ಭಾರೀ ಪ್ರಮಾಣದ ಮಾಹಿತಿಯನ್ನು ಕೊಟ್ಟಿರುತ್ತಾರೆ. ಆದುದರಿಂದ, ಆಯೋಗವು ನಷ್ಟ ಪರಿಹಾರಕ್ಕಾಗಿ ಫಿರ್ಯಾದುದಾರನು ಮಾಡಿರುವ ಕ್ಲೇಮನ್ನು ತಿರಸ್ಕರಿಸುತ್ತದೆ. ಅಲ್ಲದೆ, ಆಯೋಗವು, ಪ್ರತಿವಾದಿಯು ಇನ್ನು ಮುಂದೆ ಆರ್‌ಟಿಐ ಅಧಿನಿಯಮದ ಮೇರೆಗೆ ಮಾಹಿತಿಗಾಗಿ ಸ್ವೀಕರಿಸಿದ ಮನವಿಗಳ ಬಗ್ಗೆ ತುಂಬಾ ಜಾಗರೂಕತೆಯಿಂದ ಮತ್ತು ತ್ವರಿತವಾಗಿ ಕಾರ್ಯನಿರ್ವಹಿಸಬೇಕೆಂದು ಎಚ್ಚರಿಕೆ ನೀಡುವುದರೊಂದಿಗೆ, ಪ್ರಸ್ತಾವಿಸಿದ ದಂಡನೀಯ ಕ್ರಮದ ವಿರುದ್ಧ ಆತನು ಸಲ್ಲಿಸಿದ ವಿವರಣೆಯನ್ನು ಆಯೋಗವು ಅಂಗೀಕರಿಸುತ್ತದೆ.

8. ಮಾಹಿತಿ ಒದಗಿಸುವ ಕಾರ್ಯ ಪಾಲನೆಯಾಗಿರುವುದರಿಂದ, ದೂರು ಪರಿಹಾರವಾಗಿದ್ದು, ಮೇಲಿನ ನಿರ್ದೇಶನಗಳಿಗನುಸಾರವಾಗಿ ದೂರನ್ನು ವಿಲೇ ಮಾಡಲಾಗಿದೆ.

9. ಈ ಬಗ್ಗೆ ಉಕ್ತಲೇಖನ ನೀಡಿ, ಕರಡು ತಿದ್ದು, ಸಹಿ ಮಾಡಿ, 2007ರ ಸೆಪ್ಟೆಂಬರ್ 4 ರಂದು ಇದನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

(ಬಿ) ವಸೂಲು ಮಾಡಲಾದ ಹೆಚ್ಚಿನ ಫೀಜನ್ನು ಮರುಪಾವತಿಸುವುದು:

**ಕೆಐಸಿ 1065 ಸಿಒಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಎನ್. ಅನ್ಬರಸನ್ – ವಿರುದ್ಧ – ಸಿಎಒ ಮತ್ತು ಎಫ್ಎ, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು–09)

**ಆದೇಶ**

**01.08.2007**

1. ಫಿರ್ಯಾದುದಾರರು ಹಾಜರಾಗಿದ್ದರು. ಶ್ರೀ ಸುಭಾಶ್ ತೊಗಾವೆ, ಸಾ.ಮಾ.ಅ. ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿ, ವೈದ್ಯಕೀಯ ಶಿಕ್ಷಣದ ನಿರ್ದೇಶನಾಲಯ ಇವರು ಶ್ರೀ ಎನ್. ಮಂಜುನಾಥ್ ಪ್ರಥಮ ದರ್ಜೆ ಸಹಾಯಕ ಮತ್ತು ಶ್ರೀ ರಾಮಕೃಷ್ಣ, ಸಾಧನ ಸಾಮಗ್ರಿಗಳ ತಂತ್ರಜ್ಞ ಇವರೊಂದಿಗೆ ಹಾಜರಾಗಿರುತ್ತಾರೆ.
2. ಫಿರ್ಯಾದುದಾರರು, ತಮ್ಮ ದಿನಾಂಕ 22.02.2007ರ ಅರ್ಜಿಯಲ್ಲಿ, ಬಳಸಲಾಗುತ್ತಿರುವ ನುಡಿ ಕನ್ನಡ ತಂತ್ರಾಂಶವು ದಿನಾಂಕ 01.11.2000ದ ಸರ್ಕಾರಿ ಆದೇಶದಲ್ಲಿ ಗೊತ್ತುಪಡಿಸಿರುವ ಮಾನದಂಡಗಳಿಗನುಸಾರವಾಗಿದೆಯೆ, ಸಂಸ್ಥೆಯಲ್ಲಿ ಉಪಯೋಗಿಸಲಾಗುತ್ತಿರುವ ಗಣಕ ಯಂತ್ರಗಳ ಸಂಖ್ಯೆ, ಬಳಸಿಕೊಂಡಿರುವ ಕನ್ನಡ ತಂತ್ರಾಂಶ, ಜೀರೋ ಪೈರಸಿ ಹಾಗೂ ತಂತ್ರಾಂಶದ ಲೆಕ್ಕ ಪರಿಶೋಧನೆ ಬಗ್ಗೆ ಅನುಪಾಲನಾ ವರದಿಯ ವಿವರಗಳು – ಇವೇ ಮುಂತಾದವುಗಳನ್ನು ಆಧರಿಸಿರುವುದೆಂದು ನಂಬಲಾಗಿರುವ ದಸ್ತಾವೇಜುಗಳಿಗೆ ಸಂಬಂಧಿಸಿದ 19 ಬಾಬುಗಳ ಬಗ್ಗೆ ಮಾಹಿತಿಯನ್ನು ಕೋರಿರುತ್ತಾರೆ.
3. ಪ್ರತಿಯಾಗಿ, ಪ್ರತಿವಾದಿಯು, ಕೋರಲಾಗಿರುವ ಮಾಹಿತಿಯನ್ನು ಒದಗಿಸುವ ವೆಚ್ಚಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಫೀಜು 346 ರೂಪಾಯಿಗಳನ್ನು ಸಂದಾಯ ಮಾಡುವಂತೆ ಫಿರ್ಯಾದುದಾರರಿಗೆ ದಿನಾಂಕ 16.03.07ರ ಪತ್ರದಲ್ಲಿ ತಿಳಿಸಿರುತ್ತಾರೆ. ಹೆಚ್ಚುವರಿ ಫೀಜನ್ನು ಸಂದಾಯ ಮಾಡಿದ ಮೇಲೆ ಪ್ರತಿವಾದಿಯು ಫಿರ್ಯಾದುದಾರರಿಗೆ ಅಗತ್ಯ ಮಾಹಿತಿಯನ್ನು ಒದಗಿಸಿರುತ್ತಾರೆ.
4. ತನಗೆ ಒದಗಿಸಲಾದ ಮಾಹಿತಿಯಿಂದ ತೃಪ್ತನಾಗದ ಫಿರ್ಯಾದುದಾರನು, ಆಯೋಗದ ಮುಂದೆ ದಿನಾಂಕ 04.04.07 ರಂದು ಈ ದೂರನ್ನು ಸಲ್ಲಿಸಿರುತ್ತಾನೆ. ಆತನು ತನ್ನ ದೂರಿನ ಅರ್ಜಿಯಲ್ಲಿ, ಸಾರ್ವಜನಿಕ ಮಾಹಿತಿ ಅಧಿಕಾರಿಯು, 1 ರಿಂದ 13ರ ವರೆಗಿನ ಸಂಖ್ಯೆಗಳ ಬಾಬುಗಳ ಸಂಬಂಧದಲ್ಲಿ ದಾರಿತಪ್ಪಿಸುವ ಮಾಹಿತಿಯನ್ನು ಒದಗಿಸಿರುತ್ತಾರೆಂದು ಮತ್ತು ಅವರು 15 ಮತ್ತು 16ನೇ ಸಂಖ್ಯೆಯ ಬಾಬಿನ ಮೇಲೆ ಅನುಚಿತ ಹೆಚ್ಚುವರಿ ಫೀಜನ್ನು ಕೇಳಿರುತ್ತಾರೆಂದು ಫಿರ್ಯಾದುದಾರನು ತಿಳಿಸಿರುತ್ತಾನೆ. ಆದುದರಿಂದ, ಸಾರ್ವಜನಿಕ ಮಾಹಿತಿ ಅಧಿಕಾರಿಯು ದಾರಿ ತಪ್ಪಿಸುವ ಮತ್ತು ಸುಳ್ಳು ಮಾಹಿತಿಯನ್ನು ಒದಗಿಸಿರುವುದಕ್ಕಾಗಿ ಹಾಗೆಯೇ ಅನುಚಿತ ಹೆಚ್ಚುವರಿ ಫೀಜನ್ನು ವಿಧಿಸಿರುವುದಕ್ಕಾಗಿ ತನಗೆ ಮಾಹಿತಿಯನ್ನು ಉಚಿತವಾಗಿ ಒದಗಿಸಬೇಕೆಂದು ಮತ್ತು ಆ ಅಧಿಕಾರಿಯ ಮೇಲೆ ಸೂಕ್ತವೆಂದು ಭಾವಿಸಬಹುದಾದ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಫಿರ್ಯಾದುದಾರನು ತನ್ನ ಅರ್ಜಿಯಲ್ಲಿ ವಿನಂತಿಸಿಕೊಂಡಿದ್ದಾನೆ.
5. ಪ್ರತಿವಾದಿಯು ಸಮನನ್ನು ಸ್ವೀಕರಿಸಿದ ಮೇಲೆ, ದಿನಾಂಕ 30.05.07 ರಂದು ಫಿರ್ಯಾದುದಾರನಿಗೆ ಒದಗಿಸಿರುವ ಮಾಹಿತಿಯ ಪ್ರತಿಗಳ ಸಹಿತ ಲಿಖಿತ ಉತ್ತರವನ್ನು ಸಲ್ಲಿಸಿರುತ್ತಾನೆ.
6. ಪ್ರತಿವಾದಿಯು, ಬಾಬು ಸಂಖ್ಯೆ 1ಕ್ಕೆ ಸಂಬಂಧಿಸಿದಂತೆ, ನಿರ್ದೇಶನಾಲಯದಲ್ಲಿ ಬಳಸಲಾಗಿರುವ ನುಡಿ ಕನ್ನಡ ತಂತ್ರಾಂಶವನ್ನು ಕನ್ನಡ ಗಣಕ ಪರಿಷತ್ತಿನ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಲಾಗಿದೆ ಎಂದು ತನ್ನ ಉತ್ತರದಲ್ಲಿ ತಿಳಿಸಿದ್ದು, ಇದು ಸುಸಂಗತ ಮಾಹಿತಿಯಾಗಿರುವುದಿಲ್ಲವೆಂದು ಫಿರ್ಯಾದುದಾರನು ಹೇಳಿರುತ್ತಾನೆ. ಆದಾಗ್ಯೂ, ಆಯೋಗವು ಇಂತಹುದೇ ಪ್ರಕರಣಗಳಲ್ಲಿ, ಯಾವ ಇಲಾಖೆಯು 1 ಮತ್ತು 19ನೇ ಬಾಬುಸಂಖ್ಯೆಗಳಿಗೆ ಸಂಬಂಧಿಸಿದಂತೆ ಉತ್ತರಿಸಲು ಪರಿಣತಿಯನ್ನು ಮತ್ತು

ತಾಂತ್ರಿಕ ಜ್ಞಾನವನ್ನು ಹೊಂದಿರುವುದಿಲ್ಲವೋ, ಅವು, ವಿದ್ಯುನ್ಮಾನ ಆಡಳಿತ ಇಲಾಖೆಗೆ ಮಾಹಿತಿಯನ್ನು ಒದಗಿಸುವುದಕ್ಕಾಗಿ ಸ್ವಯಂಚಾಲಿತವಾಗಿ ವರ್ಗಾವಣೆಯಾಗುತ್ತವೆಂದು ಈಗಾಗಲೇ ಆದೇಶ ನೀಡಿರುವುದಾಗಿ ಆಯೋಗವು ಫಿರ್ಯಾದುದಾರನಿಗೆ ತಿಳಿಸಿತು. ಆದುದರಿಂದ ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿಗೆ, ಸಂಬಂಧಪಟ್ಟ ಬಾಬು ಸಂಖ್ಯೆ 1ನ್ನು, ಅಧಿನಿಯಮದ 6 (3)ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಫಿರ್ಯಾದುದಾರನಿಗೆ ಸೂಚನೆ ನೀಡುವುದರೊಂದಿಗೆ ಮಾಹಿತಿಯನ್ನು ಕೂಡಲೇ ಒದಗಿಸುವುದಕ್ಕಾಗಿ ವಿದ್ಯುನ್ಮಾನ ಆಡಳಿತ ಇಲಾಖೆಗೆ ವರ್ಗಾಯಿಸಲು ನಿರ್ದೇಶಿಸಲಾಯಿತು. ವಿದ್ಯುನ್ಮಾನ ಆಡಳಿತ ಇಲಾಖೆಯು ಈ ಮುಂಚಿನ ಯಾವುದೇ ಕೋರಿಕೆಗೆ ಉತ್ತರವಾಗಿ ಈ ಮಾಹಿತಿಯನ್ನು ಈಗಾಗಲೇ ಒದಗಿಸಿದ್ದ ಸಂದರ್ಭದಲ್ಲಿ, ಸದರಿ ಮಾಹಿತಿಯನ್ನು ಒದಗಿಸಲಾಗಿದೆ ಎಂದು ಭಾವಿಸತಕ್ಕದ್ದು.

7. 13ನೇ ಸಂಖ್ಯೆಯ ಬಾಬಿನ ಮಾಹಿತಿಗೆ ಸಂಬಂಧಿಸಿದಂತೆ, ಪ್ರತಿವಾದಿಯು, ದಾಖಲೆಗಳನ್ನು ಆಧರಿಸಿ ನಿರ್ದೇಶನಾಲಯದಲ್ಲಿ ಎಂ.ಎಸ್. ಆಫೀಸ್‌ನ್ನು ಉಪಯೋಗಿಸಲಾಗುತ್ತಿರುವ ಸಂಬಂಧದಲ್ಲಿ ಫಿರ್ಯಾದುದಾರನಿಗೆ ಸುಸಂಗತವಾದ ಮಾಹಿತಿಯನ್ನು ಒದಗಿಸಲಾಗುವುದೆಂದು ಹೇಳಿರುತ್ತಾನೆ. 15 ಮತ್ತು 16ನೇ ಬಾಬುಸಂಖ್ಯೆಗಳ ಮಾಹಿತಿಗೆ ಸಂಬಂಧಿಸಿದಂತೆ, ಫಿರ್ಯಾದುದಾರನು ಕೋರಿರುವ ಮಾಹಿತಿಯನ್ನು ಸಾಫ್ಟ್ ಕಾಪಿಯ ರೂಪದಲ್ಲಿ ಉಚಿತವಾಗಿ 30 ದಿನಗಳೊಳಗೆ, ತಲುಪೊಪ್ಪಿಗೆಯನ್ನು ನೋಂದಾಯಿತ ಅಂಚೆಯ ಮೂಲಕ ಒದಗಿಸಬೇಕೆಂದು ಪ್ರತಿವಾದಿಗೆ ನಿರ್ದೇಶಿಸಿತು.

8. ಫಿರ್ಯಾದುದಾರನು, ನಿರ್ದಿಷ್ಟವಾಗಿ ಸಾಫ್ಟ್ ಕಾಪಿಯಲ್ಲಿ ಮಾಹಿತಿಯನ್ನು ಕೋರಿದ್ದು ಅದಕ್ಕಾಗಿ ಕರ್ನಾಟಕ ಮಾಹಿತಿ ಹಕ್ಕು ನಿಯಮಗಳ ಅಡಿಯಲ್ಲಿ ಕೇವಲ 50 ರೂಪಾಯಿಗಳ ಫೀಜನ್ನು ಮಾತ್ರ ಸಂದಾಯ ಮಾಡಬೇಕಾಗಿದ್ದಾಗ್ಯೂ, ಪ್ರತಿವಾದಿಯು, 296 ರೂಪಾಯಿಗಳ ಹೆಚ್ಚುವರಿ ಫೀಜನ್ನು ಸಂದಾಯ ಮಾಡುವಂತೆ ಒತ್ತಾಯಿಸಿರುವುದನ್ನು ಆಯೋಗವು ಗಮನಿಸಿದೆ. ಆದ್ದರಿಂದ ಪ್ರತಿವಾದಿಯು, ಫಿರ್ಯಾದುದಾರನಿಗೆ ಈ ಹೆಚ್ಚಿನ ಮೊಬಲಗನ್ನು ಕ್ರಾಸ್ ಮಾಡಿದ ಡಿ.ಡಿ ಅಥವಾ ಪೇ ಆರ್ಡರ್ ಮೂಲಕ, ತಲುಪೊಪ್ಪಿಗೆ ನೋಂದಾಯಿತ ಅಂಚೆಯ ಮೂಲಕ ಮರುಪಾವತಿ ಮಾಡತಕ್ಕದ್ದು. ಈ ವಿಷಯವನ್ನು ಆಯೋಗಕ್ಕೂ ತಿಳಿಸುವುದು. ಆಯೋಗವು ಪ್ರತಿವಾದಿಗೆ, ಮಾಹಿತಿ ಹಕ್ಕು ಅಧಿನಿಯಮ ಮತ್ತು ಅದರಡಿಯಲ್ಲಿನ ನಿಯಮಗಳ ಉಪಬಂಧಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕೆಂದು ಸಹ ನಿರ್ದೇಶಿಸಿತು. ಅಷ್ಟೇ ಅಲ್ಲದೆ, ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸಿದ ಮನವಿಗಳ ಬಗ್ಗೆ ತುಂಬಾ ಎಚ್ಚರಿಕೆಯಿಂದ ಮತ್ತು ತ್ವರಿತವಾಗಿ ವ್ಯವಹರಿಸುವಂತೆಯೂ ಆತನಿಗೆ ನಿರ್ದೇಶಿಸಿತು.

9. ಪ್ರತಿವಾದಿಯು, ಆಯೋಗದ ನಿರ್ದೇಶನಗಳನ್ನು ಪಾಲಿಸುವುದಾಗಿ ಭರವಸೆ ನೀಡಿದರು.

10. ಮಾಹಿತಿ ಒದಗಿಸುವ ಕಾರ್ಯ ಪಾಲನೆಯಾಗಿರುವುದರಿಂದ ಹಾಗೂ ಆ ಬಗ್ಗೆ ಖಾತರಿ ನೀಡಿರುವುದರಿಂದ ದೂರು ಪರಿಹಾರವಾಗಿದ್ದು ಮೇಲಿನ ನಿರ್ದೇಶನಗಳಿಗನುಸಾರವಾಗಿ ದೂರನ್ನು ವಿಲೇ ಮಾಡಲಾಗಿದೆ.

11. ಈ ಬಗ್ಗೆ ಉಕ್ತಲೇಖನ ನೀಡಿ, ಕರಡು ತಿದ್ದಿ, ಸಹಿಮಾಡಿ, 2007ರ ಆಗಸ್ಟ್ 1 ರಂದು ಇದನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**(ಸಿ) ವೋಲ್ವೊ ಬಸ್ಸುಗಳ ಮೇಲಿನ ಜಾಹಿರಾತಿನ ಬಗ್ಗೆ ಸಾರ್ವಜನಿಕ ಪ್ರಾಧಿಕಾರಕ್ಕೆ ಫಿರ್ಯಾದುದಾರನ ಸಲಹೆಗಳು**

**ಕೆಐಸಿ 1627 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಫ್ರಾನ್ಸಿಸ್ ಜೆ. ಅಲ್ಫೊನ್ಸಾ – ವಿರುದ್ಧ – ಸಾರ್ವಜನಿಕ ಮಾಹಿತಿ ಅಧಿಕಾರಿ, ಸಾರಿಗೆ ಆಯುಕ್ತರ ಕಚೇರಿ, ಬೆಂಗಳೂರು)

**ಆದೇಶ**

**7.8.2007**

1. ಫಿರ್ಯಾದುದಾರ, ತನಗೆ ಸಹಾಯನೀಡಲು ಬಂದಿರುವ ಶ್ರೀ ಜಗದೀಶ ಮಹೇಂದರ್, ಇವರ ಜೊತೆಯಲ್ಲಿ ಹಾಜರಾಗಿರುತ್ತಾರೆ. ಶ್ರೀ ಆರ್. ಮುನಿವೀರಗೌಡ, ಜಂಟಿ ಆಯುಕ್ತರು, ಸಾರಿಗೆ ಇಲಾಖೆ ಮತ್ತು ಶ್ರೀ ಸೈಯದ್ ಷಫಿ ಅಹ್ಮದ್, ಕಾರ್ಯದರ್ಶಿ ಮತ್ತು ಆರ್.ಟಿ.ಓ. ಬೆಂಗಳೂರು ನಗರ ಜಿಲ್ಲೆ ಇವರು ಸಹ ಹಾಜರಾಗಿರುತ್ತಾರೆ.
2. ದಿನಾಂಕ 27.03.07 ರಂದು ಮಾಹಿತಿಗಾಗಿ ಸಲ್ಲಿಸಿದ ತನ್ನ ಮನವಿಯಲ್ಲಿ ಫಿರ್ಯಾದುದಾರನು, ವೋಲ್ವೋ ಬಸ್ಸುಗಳ ಮೇಲಿನ ಜಾಹೀರಾತು ಪ್ರದರ್ಶನಕ್ಕೆ ಯಾವ ಕಾನೂನಿನ ಅಡಿಯಲ್ಲಿ ಬಿಎಂಟಿಸಿಗೆ ಅನುಮತಿ ನೀಡಲಾಗಿದೆ ಎಂದು ಕೇಳಿರುತ್ತಾನೆ. ಪ್ರತಿವಾದಿಯು, ದಿನಾಂಕ 12.07.07 ರಂದು ಈ ಬಗ್ಗೆ ತಾವು ಉತ್ತರವನ್ನು ಕಳುಹಿಸಿರುವುದಾಗಿ ಮತ್ತು ಅದೇ ದಿನದಂದು ಆಯೋಗಕ್ಕೂ ಅನುಸರಣ ವರದಿಯನ್ನು ಕಳುಹಿಸಿರುವುದಾಗಿ ಹೇಳಿರುತ್ತಾರೆ.
3. ಪ್ರತಿವಾದಿಯು, ಬಿಎಂಟಿಸಿಗೆ ತನ್ನ ವೋಲ್ವೋ ಬಸ್ಸುಗಳ ಮೇಲೆ ಜಾಹೀರಾತನ್ನು ಪ್ರದರ್ಶಿಸಲು ಅನುಮತಿ ನೀಡಿರುವುದಿಲ್ಲವೆಂದು ಮತ್ತು ಬಿಎಂಟಿಸಿ ಹಾಗೇನಾದರೂ ಮಾಡುತ್ತಿದ್ದರೆ, ಅಂಥ ಜಾಹೀರಾತುಗಳನ್ನು ನಿಷೇಧಿಸಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮಾಡಿರುವ ಆದೇಶವನ್ನು ಅದು ಉಲ್ಲಂಘಿಸಿದಂತಾಗುವುದೆಂದು ಹೇಳಿರುತ್ತಾರೆ.
4. ವಾಹನ ಚಾಲಕರ ಗಮನವನ್ನು ಬೇರೆಡೆಗೆ ತಿರುಗಿಸಬಹುದಾದ, ಅದರಿಂದಾಗಿ ಅಪಘಾತಗಳು ಸಂಭವಿಸಬಹುದಾದ ಕೆಲವು ಜಾಹೀರಾತುಗಳು ಇರಬಹುದಾದರೂ ಒಂದು ಕಂಪನಿಯ ಲೋಗೋ ದಂತಹ ಸಾಧಾರಣ ಜಾಹೀರಾತುಗಳಿಗೆ ಅನುಮತಿ ನೀಡಬೇಕೆಂದು, ಇದರಿಂದಾಗಿ ಸಣ್ಣ ಉದ್ಯಮಿಗಳು ಸ್ವಲ್ಪ ಹೆಚ್ಚಿನ ಆದಾಯವನ್ನು ಗಳಿಸಿಕೊಳ್ಳುವುದಕ್ಕೆ ಸಹಾಯವಾಗುವುದೆಂದು ಫಿರ್ಯಾದುದಾರನು ಸಲಹೆ ನೀಡಿರುತ್ತಾನೆ. ಆದಾಗ್ಯೂ ಫಿರ್ಯಾದುದಾರನಿಗೆ, ಜಾಹೀರಾತುಗಳ ಒಳಾಂಶಗಳನ್ನು ಸೆನ್ಸಾರ್ ಮಾಡಲು ಮತ್ತು ಅನುಮೋದಿಸಲು ಆರ್‌ಟಿಓ ಅಧಿಕಾರವನ್ನು ಹೊಂದಿದೆಯೇ ಎಂಬುದರ ಬಗ್ಗೆ ತಿಳಿದಿರುವುದಿಲ್ಲ.
5. ಫಿರ್ಯಾದುದಾರನ ಮನವಿಯನ್ನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪರ್ಯಾಲೋಚನೆಗಾಗಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಕಳುಹಿಸಲು ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ.
6. ಅಗತ್ಯ ಮಾಹಿತಿಯನ್ನು ಈಗಾಗಲೇ ಒದಗಿಸಲಾಗಿರುವುದರಿಂದ, ದೂರು ಪರಿಹಾರವಾಗಿದ್ದು, ದೂರನ್ನು ವಿಲೇ ಮಾಡಲಾಗಿದೆ.
7. ಈ ಬಗ್ಗೆ ಉಕ್ತಲೇಖನ ನೀಡಿ, ಕರಡು ತಿದ್ದಿ, ಸಹಿ ಮಾಡಿ 2007ರ ಆಗಸ್ಟ್ 7ನೇ ದಿನದಂದು, ಇದನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**<u>ಮಂಜೂರಾದ ಕಟ್ಟಡ ನಕ್ಷೆಯನ್ನು ಉಲ್ಲಂಘಿಸಿ ತಪ್ಪಾದ ಉಲ್ಲಂಘನೆಯನ್ನು ದಾಖಲಿಸಿರುವುದು</u>**

**ಕೆಐಸಿ 01 ಎಪಿಎಲ್ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ರವೀಂದ್ರನಾಥ್ ಗುರು – ವಿರುದ್ಧ – ಸಾ.ಮಾ.ಅ ಮತ್ತು ಜಂಟಿ ಆಯುಕ್ತರು (ಆಡಳಿತ), ಬಿಎಂಪಿ (ದಕ್ಷಿಣ), ಬೆಂಗಳೂರು)

**ಆದೇಶ**

**<u>06.03.2007</u>**

1. ಅಪೀಲುದಾರರು ಹಾಜರಾಗಿದ್ದರು. ಶ್ರೀ ವಿ. ಯಶವಂತ್, ಜಂಟಿ ಆಯುಕ್ತರು, ದಕ್ಷಿಣ ವಲಯ, ಬಿಬಿಎಂಪಿ ಇವರು ಶ್ರೀ ಎ.ಎನ್. ವೆಂಕಟೇಶ್, ಕೇಂದ್ರ ಕಾರ್ಯಸ್ಥಾನ ಸಹಾಯಕ ಇವರೊಂದಿಗೆ ಹಾಜರಾಗಿದ್ದರು.
2. ಪ್ರತಿವಾದಿಯು, ತನ್ನ ಮಾಹಿತಿಗಾಗಿನ ಕೋರಿಕೆಯಲ್ಲಿ ನಮೂದಿಸಲಾಗಿರುವ ಸ್ವತ್ತಿನ ಸಂಬಂಧದಲ್ಲಿನ ಕಟ್ಟಡ ನಕ್ಷೆಯ ಉಲ್ಲಂಘನೆ ಬಗ್ಗೆ ಮತ್ತು ಆ ಕಟ್ಟಡ ನಕ್ಷೆಯಲ್ಲಿ ತಪ್ಪು ಅಳತೆಗಳನ್ನು ದಾಖಲಿಸಿರುವುದಕ್ಕೆ

ಸಂಬಂಧಿಸಿದಂತೆ ಮಾಹಿತಿಯನ್ನು ಕೋರಿರುವುದಾಗಿ ಹೇಳಿರುತ್ತಾನೆ. ವಾಸ್ತವವಾಗಿ ಈ ಮಾಹಿತಿ ಕೋರಿದ ಮನವಿಯನ್ನು, ಅಗತ್ಯ ಮಾಹಿತಿಯನ್ನು ಒದಗಿಸುವುದಕ್ಕಾಗಿ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗೆ ವರ್ಗಾಯಿಸಲಾಯಿತು. ಆದಾಗ್ಯೂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಗತ್ಯವಾದ ಮಾಹಿತಿಯನ್ನು ಮುಖ್ಯ ಇಂಜಿನಿಯರ್‌ಗೆ ಕಳುಹಿಸಿದರು. ಆನಂತರ ಮುಖ್ಯ ಇಂಜಿನಿಯರ್, ಅಪೀಲುದಾರನ ಅರ್ಜಿಯ ಬಗ್ಗೆ ತೆಗೆದುಕೊಂಡ ಕ್ರಮವನ್ನು ತಿಳಿಸಿ, ದಿನಾಂಕ: 04.12.2006 ರಂದು ಆತನಿಗೆ ಒಂದು ಹಿಂಬರಹವನ್ನು ನೀಡಿದರು.

3. ವಾಸ್ತವಿಕ ಕಟ್ಟಡ ನಿರ್ಮಾಣ ನಕ್ಷೆ ಉಲ್ಲಂಘನೆಗಳನ್ನು ಒಳಗೊಂಡಿರುವ ಸರಿಯಾದ ಮಾಹಿತಿಯನ್ನು ದಿನಾಂಕ 20.1.2007ರಂದು ಅಪೀಲುದಾರನಿಗೆ ಅಂಚೆ ಮೂಲಕ ಕಳುಹಿಸಿರುವುದಾಗಿ ಪ್ರತಿವಾದಿಯು ಹೇಳಿದ್ದಾನೆ. ಪ್ರತಿವಾದಿಯು ಫಿರ್ಯಾದುದಾರನಿಗೆ ಕಳುಹಿಸಿದ ಮಾಹಿತಿಯ ಪ್ರತಿಗಳೊಂದಿಗೆ ಅನುಸರಣ ವರದಿಯನ್ನು ಸಹ ಸಲ್ಲಿಸಿದ್ದಾನೆ. ಈತನ ವರದಿಯಲ್ಲಿ ಪ್ರತಿವಾದಿಯು ಕಟ್ಟಡ ನಿರ್ಮಾಣ ನಕ್ಷೆಯ ಉಲ್ಲಂಘನೆ ಮತ್ತು ಉಪವಿಧಿಗಳ ಬಗ್ಗೆ ಅಪೀಲುದಾರನೊಂದಿಗೆ ಚರ್ಚಿಸಲಾಗಿದ್ದು ತೆಗೆದುಕೊಂಡ ಕ್ರಮದ ಬಗ್ಗೆಯೂ ಸಹ ತಿಳಿಸಿರುವುದಾಗಿ ಹೇಳಿದ್ದಾನೆ. ಆದರೂ, ಸಂಬಂಧಪಟ್ಟ ಸಿವಿಲ್ ನ್ಯಾಯಾಲಯದಿಂದ ತಡೆಯಾಜ್ಞೆ ಇರುವುದರಿಂದ ಹೊಸ ತಾತ್ಕಾಲಿಕ ಆದೇಶ ಮತ್ತು ಸ್ಥಿರೀಕರಣ ಆದೇಶವನ್ನು ನೀಡಲಾಗಿರುವುದಿಲ್ಲ.

4. ಅಪೀಲುದಾರನು, ವಾಸ್ತವವಾಗಿ ಆತನು 27.1.2007ರಂದು ಮಾತ್ರವೇ ಮಾಹಿತಿಯನ್ನು ಸ್ವೀಕರಿಸಿರುವುದಾಗಿ ಹೇಳಿದ್ದಾನೆ. ಅಲ್ಲದೆ, ಮಾಹಿತಿ ಒದಗಿಸುವಲ್ಲಿ ಮತ್ತು ವಾಸ್ತವಿಕ ಕಟ್ಟಡ ನಿರ್ಮಾಣ ನಕ್ಷೆ ಮತ್ತು ಕಟ್ಟಡ ನಿರ್ಮಾಣ ಉಪವಿಧಿಗಳ ಉಲ್ಲಂಘನೆಗಳನ್ನು ಪರಿಶೀಲಿಸಿ ಟಿಪ್ಪಣಿ ಬರೆಯುವಲ್ಲಿ ಅತಿಯಾದ ವಿಳಂಬವಾಗಿದೆಯೆಂದು ಆತನ ಹೇಳಿದ್ದಾನೆ. ಇದೂ ಅಲ್ಲದೆ, ಬಿಎಂಪಿ ಚ್ಯುತಿಯಾಗಿರುವ ಬಗ್ಗೆ ಸರಿಯಾದ ವಿಷಯಗಳನ್ನು ಸಂಬಂಧಪಟ್ಟ ನ್ಯಾಯಾಲಯದ ಗಮನಕ್ಕೆ ತರಬೇಕಿತ್ತು ಮತ್ತು ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕಿತ್ತೆಂದು ಹೇಳಿದ್ದಾನೆ.

5. ಪ್ರತಿವಾದಿಯು, ಮೆಮೋದ ಮೂಲಕ 15 ದಿನಗಳೊಳಗೆ ಸಿವಿಲ್ ನ್ಯಾಯಾಲಯದ ಮುಂದೆ ಸಲ್ಲಿಸಿದ ಸರಿಪಡಿಸಲಾದ ತಾತ್ಕಾಲಿಕ ಆದೇಶ ಮತ್ತು ಸ್ಥಿರೀಕರಣ ಆದೇಶವನ್ನು ಪಡೆದುಕೊಳ್ಳಲು ಕ್ರಮ ಕೈಗೊಂಡಿರುತ್ತಾನೆ. ಅಲ್ಲದೆ, ಆತ ಸಿವಿಲ್ ನ್ಯಾಯಾಲಯದ ಮುಂದೆ ಸಲ್ಲಿಸಲಾದ ಮೆಮೋ ಇದರ ಪ್ರತಿಯನ್ನು ಅಪೀಲುದಾರನಿಗೆ ಕಳುಹಿಸಲು ಸಹ ಕ್ರಮ ಕೈಗೊಂಡಿರುತ್ತಾನೆ. ಆಯೋಗದ ಸೂಚನೆಯ ಮೇರೆಗೆ, ಪ್ರತಿವಾದಿಯು ಕಟ್ಟಡ ನಿರ್ಮಾಣ ನಕ್ಷೆ ಮತ್ತು ಉಪವಿಧಿಗಳ ಉಲ್ಲಂಘನೆಯಲ್ಲಿ ಚ್ಯುತಿಯಾಗಿರುವ ಬಗ್ಗೆ ತಪ್ಪು ವಿಷಯಗಳನ್ನು ದಾಖಲಿಸಿಕೊಂಡಿದ್ದಕ್ಕೆ ಜವಾಬ್ದಾರರಾದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಹ ಒಪ್ಪಿದ್ದಾರೆ.

6. ಜವಾಬ್ದಾರಿಗಳ ಅನುಸರಣೆಯ ದೃಷ್ಟಿಯಲ್ಲಿ ಮತ್ತು ಕೈಗೊಂಡ ಮೇಲಿನ ಕ್ರಮಗಳ ನಿಬಂಧನೆಗಳಿಗನುಸಾರವಾಗಿ ಅಂಗೀಕರಿಸಲಾಗಿರುವಂತೆ ಅಪೀಲನ್ನು ವಿಲೇ ಮಾಡಲಾಗಿದೆ.

7. ಬಹಿರಂಗ ನ್ಯಾಯಾಲಯದಲ್ಲಿ ಇದೇ 2007ರ ಮಾರ್ಚ್ 6ನೇ ದಿನದಂದು ಹೇಳಿಬರೆಸಲಾಗಿದೆ, ಕರಡನ್ನು ಸರಿಪಡಿಸಲಾಗಿದೆ, ಸಹಿ ಮಾಡಲಾಗಿದೆ ಹಾಗೂ ಉಚ್ಚರಿಸಲಾಗಿದೆ.

**(ii) ಮಾಹಿತಿ ಹಕ್ಕು ಅಧಿನಿಯಮದ ಪ್ರಕರಣ 8ರ ಅಡಿಯಲ್ಲಿ ಮಾಹಿತಿಯನ್ನು ಬಹಿರಂಗಗೊಳಿಸುವ ಕುರಿತು ತೀರ್ಮಾನ:**

**ಕೆಐಸಿ 83 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಮನು ಮಾರ್ಕ್ ಇಮಾನ್ – ವಿರುದ್ಧ ಸಾರ್ವಜನಿಕ ಮಾಹಿತಿ ಅಧಿಕಾರಿ, (ಪಿಐಒ) ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯ, ದಾವಣಗೆರೆ)

**ಆದೇಶ**

**27.3.2007**

1. ಶ್ರೀ ವಿಕ್ರಮ್ ಸಿಂಹ ಅವರು ದೂರನ್ನು ಸಲ್ಲಿಸಿದ್ದಾರೆ. ಪ್ರತಿವಾದಿಯಾದ ಶ್ರೀ ಟಿ.ಆರ್. ಹರೀಶಪ್ಪ, ಸಾರ್ವಜನಿಕ ಮಾಹಿತಿ ಅಧಿಕಾರಿ (ಪಿಐಒ) ಮತ್ತು ಪ್ರಭಾರಿ ಆಡಳಿತಾಧಿಕಾರಿ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ದಾವಣಗೆರೆ – ಇವರು ಹಾಜರಾಗಿದ್ದರು. ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾನೆ.
2. ದಿನಾಂಕ 13.12.2006ರ ಮಾಹಿತಿಗಾಗಿನ ಆತನ ಮನವಿಯಲ್ಲಿ, ಫಿರ್ಯಾದುದಾರ ಕೆಲವು ಹೆಚ್ಚುವರಿ ಮಾಹಿತಿಯೊಂದಿಗೆ ದಾವಣಗೆರೆಯ ಒ.ಎಸ್. 108/2003ದಾವೆಯ ಪ್ರಸಕ್ತ ಸ್ಥಿತಿಗತಿ ಸಂಬಂಧವಾಗಿ ಹಲವಾರು ದಾಖಲೆಗಳ ಪ್ರತಿಗಳನ್ನು ಮತ್ತು ಮಾಹಿತಿಯನ್ನು ಕೋರಿದ್ದಾನೆ.
3. ದಾವೆಯ ಸ್ಥಿತಿಗತಿಗೆ ಸಂಬಂಧಪಟ್ಟಂತೆ, ದೇಶದ ಅತ್ಯುನ್ನತ ನ್ಯಾಯಾಲಯವೂ
4. ಅಂದರೆ, ಭಾರತದ ಸರ್ವೋಚ್ಚ ನ್ಯಾಯಾಲಯವೂ ಕೂಡ ಪ್ರಕರಣ ಮಾಹಿತಿ ವ್ಯವಸ್ಥೆಯನ್ನು ರಾಷ್ಟ್ರೀಯ ಮಾಹಿತಿ ಆಯೋಗ (ಎನ್ಐಸಿ)ದ ಮುಖಾಂತರ ಸ್ಥಾಪಿಸಿದ್ದು, ಅದರ ಅಡಿಯಲ್ಲಿ ವಿಚಾರಣೆಯ ಮುಂದಿನ ದಿನಾಂಕ ಮತ್ತು ಹೊರಡಿಸಿದ ಕೊನೆಯ ಆದೇಶವು ಸೇರಿದಂತೆ ಪ್ರಕರಣದ ಸ್ಥಿತಿಗತಿಯ ಮಾಹಿತಿ ವೆಬ್‌ಸೈಟ್‌ನಲ್ಲಿ ದೊರೆಯುತ್ತದೆಯೆಂದು ಆಯೋಗವು ಅಭಿಪ್ರಾಯಪಟ್ಟಿದೆ. ಹಾಗಾಗಿ, ಈ ಮಾಹಿತಿಯನ್ನು ಸಾರ್ವಜನಿಕ
5. ಮಾಹಿತಿ ಅಧಿಕಾರಿಯು (ಪಿಐಒ) ಫಿರ್ಯಾದುದಾರನಿಗೆ ಕೂಡಲೇ ಒದಗಿಸುವಂತಿರುತ್ತದೆ.
6. ಕೋರಲಾದ ಹೆಚ್ಚುವರಿ ಮಾಹಿತಿಯನ್ನು ಆಯೋಗವು ವಿವರವಾಗಿ ಪರಿಶೀಲಿಸಿದ್ದು ಇದರಿಂದ ಮೊದಲ ಮನವಿಯು ವಾಸ್ತವವಾಗಿ ಮಾಹಿತಿ ಕೋರಿ ಮಾಡಲಾದ ಮನವಿಯಲ್ಲವೆಂದು ಕಂಡುಕೊಂಡಿದೆ. ಫಿರ್ಯಾದುದಾರನು ಈ ಉದ್ದೇಶಕ್ಕಾಗಿ ತೀರ್ಮಾನಿಸುವ ನ್ಯಾಯಾಧೀಶರಿಗೆ ಸೂಕ್ತ ಅರ್ಜಿಯನ್ನು ಸಲ್ಲಿಸಬೇಕಿತ್ತೆಂದು ಪ್ರತಿವಾದಿಯು ವಾದಿಸಿದ್ದಾನೆ. ಅದೇ ರೀತಿಯಲ್ಲಿ, ಮಾಹಿತಿಗಾಗಿನ ಎರಡನೇ ಹೆಚ್ಚುವರಿ ಮನವಿಗಾಗಿಯೂ ಸಹ, ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಆಯೋಗವು ಈ ವಾದಗಳನ್ನು ಒಪ್ಪಿಕೊಂಡಿದ್ದು ಹೆಚ್ಚುವರಿ ಮಾಹಿತಿಗಾಗಿ ಎಂದು ಹೇಳಲಾದ ಈ ಎರಡೂ ಮನವಿಗಳು ವಾಸ್ತವವಾಗಿ ನ್ಯಾಯಾಲಯಕ್ಕೆ ಮಾಡಿಕೊಳ್ಳುವಂಥ ಸ್ವರೂಪದ ಮನವಿಗಳಾಗಿದ್ದು ಅವುಗಳನ್ನು ಪ್ರತಿವಾದಿಯು ವಿಲೇವಾರಿ ಮಾಡುವಂತಿಲ್ಲ. ಅಂಥ ಉದ್ದೇಶಗಳಿಗಾಗಿ ಸೂಕ್ತ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕಾಗುತ್ತದೆ.
7. ಇದರಿಂದ ಆಯೋಗವು ಒಂದು ವಿಷಯವನ್ನು ಮಾತ್ರ ಅಂದರೆ, ಒಬ್ಬ ನಾಗರಿಕನು ಮಾಹಿತಿ ಹಕ್ಕು ಅಧಿನಿಯಮ, 2005ರ ಅಡಿಯಲ್ಲಿ ನ್ಯಾಯಾಲಯ ದಾಖಲೆಗಳಿಂದ ದಸ್ತಾವೇಜುಗಳ ಪ್ರತಿಗಳನ್ನು ಕೋರಬಹುದೇ ಎಂಬ ಚರ್ಚೆಯ ವಿಷಯ ಮಾತ್ರ ಉಳಿಯುತ್ತದೆ. ಇವುಗಳು ಸಾರ್ವಜನಿಕ ದಾಖಲೆಗಳಾಗಿದ್ದು ಅವುಗಳನ್ನು ಮಾಹಿತಿ ಹಕ್ಕು ಅಧಿನಿಯಮದ ಯಾವುವೇ ಉಪಬಂಧಗಳ ಅಡಿಯಲ್ಲಿ ಬಹಿರಂಗಪಡಿಸುವುದರಿಂದ ವಿನಾಯಿತಿ ನೀಡಿರುವ ಹೊರತು, ಈ ದಾಖಲೆಗಳ ಪ್ರತಿಗಳನ್ನು ಒದಗಿಸಬೇಕಾಗುತ್ತದೆಂಬುದು ಫಿರ್ಯಾದುದಾರನ ವಾದವಾಗಿದೆ.
8. ಈಗಿನ ಪ್ರಕರಣದಲ್ಲಿ, ದಾಖಲೆಗಳ ಅಧೀನವನ್ನು ಹೊಂದಿರುವ ಸಂಬಂಧಪಟ್ಟ ನ್ಯಾಯಾಲಯಕ್ಕೆ ಕರ್ನಾಟಕ ಸಿವಿಲ್ ಆಚರಣಾ ನಿಯಮಗಳ (ಕೆಸಿಆರ್‌ಪಿ) ಅಡಿಯಲ್ಲಿ ಫಿರ್ಯಾದುದಾರನು

ದಾಖಲೆಗಳಿಗಾಗಿ ಅರ್ಜಿ ಹಾಕುವುದಕ್ಕೆ ಪರ್ಯಾಯ ಮಾರ್ಗವನ್ನು ಹೊಂದಿದ್ದಾನೆಂದು ತಿಳಿಸಿರುವ ಮೂಲಕ ಮಾಹಿತಿಯನ್ನು ನಿರಾಕರಿಸಲಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಫಿರ್ಯಾದುದಾರನು ಕರ್ನಾಟಕ ಸಿವಿಲ್ ವ್ಯವಹಾರ ನಿಯಮಾವಳಿ (ಕೆಸಿಆರ್‌ಪಿ) ಅಡಿಯಲ್ಲಿ ದಾಖಲೆಗಳ ಪ್ರತಿಗಳಿಗಾಗಿ ಅರ್ಜಿ ಸಲ್ಲಿಸುವಂತೆ ಸಲಹೆ ನೀಡಬೇಕಾಗುತ್ತದೆ. ಕೆಸಿಆರ್‌ಪಿ ನಿಯಮಗಳ ಅಡಿಯಲ್ಲಿ ದಾವೆಯ ಅಥವಾ ಕಾನೂನು ವ್ಯವಹರಣೆಯ ಪಕ್ಷಕಾರನು, ಸಾಕ್ಷ್ಯವಾಗಿ ಅಂಗೀಕರಿಸಿದ ದಾಖಲೆಗಳು ಸೇರಿದಂತೆ ದಾವೆ ಅಥವಾ ಕಾನೂನು ವ್ಯವಹರಣೆಗಳ

9. ದಾಖಲೆಗಳನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ. 231ನೇ ನಿಯಮದಲ್ಲಿ ಕಾನೂನು ವ್ಯವಹರಣೆಗಳಿಗೆ ಪಕ್ಷಕಾರನಾಗಿಲ್ಲದಿರುವ ವ್ಯಕ್ತಿಯು ಅರ್ಜಿ ಸಲ್ಲಿಸುವುದಕ್ಕಾಗಿ ಉಪಬಂಧ ಕಲ್ಪಿಸಿರುತ್ತದೆ. 234ನೇ ನಿಯಮದಲ್ಲಿ ಯಾವುದೇ ಸಂಶಯದ ಸಂದರ್ಭದಲ್ಲಿ ನ್ಯಾಯಾಧೀಶರು ಆದೇಶ ನೀಡುವುದಕ್ಕಾಗಿ ಉಪಬಂಧ ಕಲ್ಪಿಸಿರುತ್ತದೆ.

10. ಫಿರ್ಯಾದುದಾರನು ತಾನು ಕಾನೂನು ವ್ಯವಹರಣೆಗಳ ಪಕ್ಷಕಾರನಾಗಿದ್ದು, ಕೆಸಿಆರ್‌ಪಿ ಯ ನಿಯಮ 230ರಡಿ ದಾಖಲೆಗಳನ್ನು ಪಡೆದುಕೊಳ್ಳಲು ಕೂಡ ಅನ್ಯಥಾ ಹಕ್ಕುಳ್ಳವನಾಗಿರುವುದರಿಂದ, ಆತನಿಗೆ ಈ ಮಾಹಿತಿಯನ್ನು ನೀಡಲು ನಿರಾಕರಿಸಬಾರದಿತ್ತೆಂದು ವಾದಿಸಿದ್ದಾನೆ.

11. ಆಯೋಗವು, ಮಾಹಿತಿ ಹಕ್ಕು ಅಧಿನಿಯಮ, 2005ರಲ್ಲಿ ಎಲ್ಲಾ ಸರ್ಕಾರೀ ದಾಖಲೆಗಳನ್ನು, ಬಹಿರಂಗಪಡಿಸುವುದರಿಂದ ಅವುಗಳು ವಿನಾಯಿತಿಗೊಂಡಿರುವ ಹೊರತು, ನಾಗರಿಕರು ಅವುಗಳನ್ನು ಪಡೆದುಕೊಳ್ಳಲು ಬೇರೆ ಬೇರೆ ಕಾರ್ಯವಿಧಾನಗಳನ್ನು ಉಪಬಂಧಿಸಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ. ಮಾಹಿತಿ ಹಕ್ಕು ಅಧಿನಿಯಮದ 22ನೇ ಪ್ರಕರಣದಡಿ ಈ ಅಧಿನಿಯಮದ ಉಪಬಂಧಗಳು ಸರ್ಕಾರಿ ರಹಸ್ಯಗಳ ಅಧಿನಿಯಮ, 1923 (1923ರ 19)ರಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾದುದು ಏನೇ ಒಳಗೊಂಡಿದ್ದರೂ ಪರಿಣಾಮವನ್ನು ಹೊಂದಿರತಕ್ಕದ್ದು" ಎಂಬುದಾಗಿಯೂ ಸಹ ಆಯೋಗವು ಅಭಿಪ್ರಾಯಪಟ್ಟಿದೆ. ಇದು ಹೀಗಿರುವಾಗ ಅಧಿನಿಯಮದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ಉಪೇಕ್ಷಿಸಲು ಮತ್ತು ಅರ್ಜಿದಾರನು ದಾಖಲೆಗಳ ಪ್ರತಿಗಳನ್ನು ಪಡೆಯಲು ಅವನಿಗೆ ಲಭ್ಯವಿರುವ ಪರ್ಯಾಯವಾದ ಪರಿಹಾರಮಾರ್ಗ ಅಥವಾ ಕಾರ್ಯವಿಧಾನವನ್ನು ಅನುಸರಿಸುವಂತೆ ಸಲಹೆ ನೀಡಲು ಯಾರೇ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರಕ್ಕೆ ಅವಕಾಶವಿಲ್ಲ.

12. ಆದ್ದರಿಂದ, ಆಯೋಗವು, ಮುಖ್ಯ ಅಡಳಿತಾಧಿಕಾರಿ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ (ಪಿಐಓ) ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ – ಇವರು ಹೊರಡಿಸಿರುವ ದಿನಾಂಕ 16.12.2006ರ ಮೆಮೋದಲ್ಲಿ ಮಾಹಿತಿಯನ್ನು ನೀಡಲು ನಿರಾಕರಿಸಿದ್ದಕ್ಕಾಗಿ ನೀಡಲಾದ ಕಾರಣಗಳು ಸಮಂಜಸವಾಗಿಲ್ಲವೆಂದು ಮತ್ತು ಅವರು ಮಾಹಿತಿ ಹಕ್ಕು ಅಧಿನಿಯಮ ಮತ್ತು ಅದರ ಮೇರೆಗೆ ರೂಪಿಸಲಾದ ನಿಯಮಗಳ ಉಪಬಂಧಗಳಡಿ ಗುಣಾವಗುಣಗಳ ಆಧಾರದ ಮೇಲೆ ಅರ್ಜಿಯನ್ನು ಆತನು ವಿತರಣೆ ಮಾಡಬೇಕೆಂದು ಅಭಿಪ್ರಾಯಪಟ್ಟಿದೆ.

13. ಪ್ರತಿವಾದಿಯು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಆತನು ಅರ್ಜಿಯನ್ನು ಮಾಹಿತಿ ಹಕ್ಕು ಅಧಿನಿಯಮದ 8(1)(ಜೆ) ಪ್ರಕರಣದಡಿ ನಿರಾಕರಿಸಲಾಗಿದೆಯೆಂದು ಹೇಳಿದ್ದಾನೆ. ಆದರೆ ಆಯೋಗವು, ವೈಯಕ್ತಿಕ ಮಾಹಿತಿಯಾಗಿರಬಹುದಾದ ಮತ್ತು 8(1) (ಜೆ) ಪ್ರಕರಣದ ಉಪಬಂಧಗಳ ಅಡಿಯಲ್ಲಿ ಬರಬಹುದಾದ ಪ್ರಕರಣದ ದಾಖಲೆಗಳಲ್ಲಿ ಕೆಲವು ಮಾಹಿತಿ ಇರಬಹುದಾಗಿದ್ದರೂ ದಾವೆಯ ಸಂಪೂರ್ಣ ದಾಖಲೆಗಳನ್ನು 8(1) (ಜೆ) ಪ್ರಕರಣದ ಉಪಬಂಧಗಳ ಅಡಿಯಲ್ಲಿ ಬಹಿರಂಗಪಡಿಸುವುದರಿಂದ ವಿನಾಯಿತಿ ನೀಡಿರುವ ವೈಯಕ್ತಿಕ ಮಾಹಿತಿ ಎಂಬುದಾಗಿ ಹೇಳುವಂತಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟಿದೆ.

14. ಪರಿಣಾಮವಾಗಿ, ಆಯೋಗವು ಫಿರ್ಯಾದುದಾರನು ಸಲ್ಲಿಸಿರುವ ಮನವಿಯನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯು ಮಾಹಿತಿ ಹಕ್ಕು ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊಸದಾಗಿ ಪರಿಶೀಲಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲು ನಿರ್ದೇಶಿಸಿದೆ.
15. ದಾಖಲೆಗಳೊಂದಿಗೆ ಸ್ವತಃ ಹಾಜರಾಗಿದ್ದ ಪ್ರತಿವಾದಿಯು, ಆಯೋಗದ ಆದೇಶಗಳ ದೃಷ್ಟಿಯಲ್ಲಿ, ಫಿರ್ಯಾದುದಾರನಿಗೆ ಲಭ್ಯವಿರುವ ದಾಖಲೆಗಳನ್ನು ಒದಗಿಸಲು ತನ್ನ ಆಕ್ಷೇಪಣೆಯೇನೂ ಇಲ್ಲವೆಂದು ಹೇಳಿದ್ದಾನೆ. ಆತನು ಅವುಗಳ ಪ್ರಮಾಣೀಕೃತ ಪ್ರತಿಗಳನ್ನು ಫಿರ್ಯಾದುದಾರನಿಗೆ ಸ್ಥಳದಲ್ಲೇ ನೀಡಿದ್ದಾನೆ. ಫಿರ್ಯಾದುದಾರನು ಈ ಮಾಹಿತಿಯಿಂದ ತನಗೆ ಸಮಾಧಾನವಾಗಿದೆಯೆಂದು ಹೇಳಿದ್ದಾನೆ.
16. ದೂರನ್ನು ಅನುಸರಣೆ ಮತ್ತು ಮೇಲಿನ ನಿರ್ದೇಶನಗಳ ದೃಷ್ಟಿಯಲ್ಲಿ ನಿವಾರಣೆ ಮಾಡಲಾಗಿರುವುದರಿಂದ ಅದನ್ನು ವಿಲೇ ಮಾಡಲಾಗಿದೆ.
17. ಬಹಿರಂಗ ನ್ಯಾಯಾಲಯದಲ್ಲಿ ಇದೇ 2007ರ ಮಾರ್ಚ್ 27ನೇ ದಿನದಂದು ಹೇಳಿ ಬರೆಸಲಾಗಿದೆ, ಕರಡನ್ನು ಸರಿಪಡಿಸಲಾಗಿದೆ. ಸಹಿ ಮಾಡಲಾಗಿದೆ ಹಾಗೂ ಉಚ್ಚರಿಸಲಾಗಿದೆ.

**(ಎ) ತನಿಖೆಯ ಅವಧಿಯಲ್ಲಿ ಅಧಿನಿಯಮದ 8 (1) (ಎಚ್) ಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ವಿನಾಯಿತಿ:**

**ಕೆಐಸಿ 232 ಎಪಿಎಲ್ 2007**

ಕರ್ನಾಟಕ ಮಾಹಿತಿ ಆಯೋಗ

(ಶ್ರೀ ಬಿ.ವಿ. ಸೀತಾರಾಂ – ವಿರುದ್ಧ – ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು)

**ಆದೇಶ**

31.10.2007

1. ಅಪೀಲುದಾರನು ಗೈರುಹಾಜರಾಗಿದ್ದನು. ಪ್ರತಿವಾದಿ ಶ್ರೀ ಎನ್. ಸತೀಶ್ ಕುಮಾರ್, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ – ಇವರು ಶ್ರೀ ಎಚ್.ಎನ್. ವೆಂಕಟೇಶ್ ಪ್ರಸನ್ನ, ಪೊಲೀಸ್ ಇನ್‌ಸ್ಪೆಕ್ಟರ್ – ಇವರೊಂದಿಗೆ ಹಾಜರಾಗಿದ್ದರು.
2. ಮಂಗಳೂರು ದಕ್ಷಿಣ ಠಾಣೆ, ಶ್ರೀ ಗಂಗಿ ರೆಡ್ಡಿ, ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್, ಬೆಳ್ತಂಗಡಿ ಠಾಣೆ ಮತ್ತು ಶ್ರೀ ಕೌಶಲೇಂದ್ರ ಕುಮಾರ್, ಸಹಾಯಕ ಪೊಲೀಸ್ ಅಧೀಕ್ಷಕರು, ಪಗಂಬೂರು ಉಪ ವಿಭಾಗ.
3. ಅಪೀಲುದಾರನು, ದಿನಾಂಕ 4.5.2007ರ ಮಾಹಿತಿಗಾಗಿನ ತನ್ನ ಮನವಿಯಲ್ಲಿ, ಇಲಾಖೆಯಿಂದ ಸಲ್ಲಿಸಲಾದ ಪ್ರಥಮ ಮಾಹಿತಿ ವರದಿ (ಎಫ್‌ಐಆರ್)ಯ ಪ್ರತಿಗಳು / ಅಪರಾಧ ಪ್ರಕರಣಗಳಿಗೆ ಸಂಬಂಧಪಟ್ಟ ಠಾಣೆಯ ದಾಖಲೆ ಪುಸ್ತಕದ ನಮೂದನೆಗಳ ಪ್ರತಿಗಳನ್ನು ಕೋರಿದ್ದಾನೆ.
4. ಅದಕ್ಕೆ ಉತ್ತರವಾಗಿ, ಪ್ರತಿವಾದಿಯು, ಮಾಹಿತಿಯನ್ನು ಒದಗಿಸುವ ವೆಚ್ಚದ ಸಂಬಂಧವಾಗಿ 4/– ರೂ.ಗಳ ಹೆಚ್ಚಿನ ಶುಲ್ಕವನ್ನು ಸಲ್ಲಿಸಿದ ನಂತರ ಮಾಹಿತಿಯನ್ನು ಪಡೆಯಲು ಆತನಿಗೆ ತಿಳಿಸಿ, ದಿನಾಂಕ 31.5.2007ರಂದು ಹಿಂಬರಹವನ್ನು ನೀಡಿರುತ್ತಾನೆ. ಆದರೆ, ಸಂದಾಯ ಮಾಡಬೇಕಾದ ಹೆಚ್ಚಿನ ಶುಲ್ಕವನ್ನು ಪ್ರತಿವಾದಿಯು ಹೇಗೆ ಲೆಕ್ಕಾಚಾರವನ್ನು ಮಾಡಿದನು ಎಂಬ ಮಾಹಿತಿಯನ್ನು ಒದಗಿಸಿರುವುದಿಲ್ಲ.ಇದೂ ಅಲ್ಲದೆ, ಕೋರಲಾದ ಮಾಹಿತಿಯು ತನಿಖೆಯ ಪ್ರಕ್ರಿಯೆಗೆ ಅಡಚಣೆಯನ್ನುಂಟುಮಾಡುವಂಥ ಅಧಿನಿಯಮದ 8 (1) (ಎಚ್) ಪ್ರಕರಣದ ಅಡಿಯಲ್ಲಿ ವಿನಾಯಿತಿ ಹೊಂದಿದೆ ಎಂಬುದಾಗಿ ಸಹ ಹೇಳಲಾಗಿತ್ತು. ಆದರೆ, ಅಪೀಲುದಾರನು, ತನಗೆ ಒದಗಿಸಿದ ಮಾಹಿತಿಯಿಂದ ಸಮಾಧಾನವಾಗದಿದ್ದು ಆತನು ಅಧಿನಿಯಮದ 19 (1)ನೇ ಪ್ರಕರಣದ ಅಡಿಯಲ್ಲಿ ಪ್ರಥಮ ಅಪೀಲು ಪ್ರಾಧಿಕಾರಿಯಾದ ಪೊಲೀಸ್ ಮಹಾ ನಿರೀಕ್ಷಕರು, ಪಶ್ಚಿಮವಲಯ, ಮಂಗಳೂರು ಇವರಿಗೆ ಅಪೀಲನ್ನು ಸಲ್ಲಿಸಿರುತ್ತಾನೆ. ಪ್ರಥಮ ಅಪೀಲು ಪ್ರಾಧಿಕಾರಿಯು ದಿನಾಂಕ 30.6.2007ರ ತನ್ನ ಆದೇಶದಲ್ಲಿ, ಪ್ರತಿವಾದಿಯು ಈಗಾಗಲೇ ಪ್ರಥಮ ಮಾಹಿತಿ ವರದಿಯ ಪ್ರತಿಗಳನ್ನು ನೀಡಿರುವುದರಿಂದ

ಬಾಬು ಸಂಖ್ಯೆ 1ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯು ಮಾಹಿತಿಯನ್ನು ಈಗಾಗಲೇ ನೀಡಿರುವುದಾಗಿ ದಾಖಲಿಸಿದ್ದಾರೆ. ಆದರೆ, ಇವರು ಈ ವಿಷಯದ ಬಗ್ಗೆ ಇನ್ನೂ ತನಿಖೆಯಾಗುತ್ತಿದ್ದು ಈ ಮಾಹಿತಿಯು ಅಧಿನಿಯಮದ 8(1) (ಎಚ್) ಪ್ರಕರಣದ ಅಡಿಯಲ್ಲಿ ವಿನಾಯಿತಿ ಹೊಂದಿರುವುದರಿಂದ ಶ್ರೀ ಪ್ರೇಮನಾಥ್ ಕೋಟಿಯೇನ್ ಮತ್ತು ದಿನೇಶ್ ಅಮಿನ್ ಇವರುಗಳಿಗೆ ಸಂಬಂಧಿಸಿದ ಬಾಬು ಸಂಖ್ಯೆ 4ರ ಸಂಬಂಧದಲ್ಲಿನ ಅಪೀಲನ್ನು ತಿರಸ್ಕರಿಸಿದ್ದಾರೆ. ತದ ನಂತರ, ಅಪೀಲುದಾರನು 9.6.2007ರಂದು ಆಯುಕ್ತರಿಗೆ ಎರಡನೇ ಅಪೀಲನ್ನು ಸಲ್ಲಿಸಿರುತ್ತಾನೆ. ಆಯೋಗವು 20.9.2007ರಂದು ಉಭಯ ಪಕ್ಷಕಾರರಿಗೆ ಸಮನ್ಸ್‌ಗಳನ್ನು ಜಾರಿ ಮಾಡಿದೆ.

5. ಪ್ರತಿವಾದಿಯು ಬಾಬು ಸಂಖ್ಯೆ 1ರಲ್ಲಿನ ಸಂಬಂಧಪಟ್ಟ ಮಾಹಿತಿಯನ್ನು ಈಗಾಗಲೇ ಒದಗಿಸಿರುವುದಾಗಿ ಹೇಳಿದ್ದಾನೆ. ಆದರೆ, ಬಾಬ್ತು ಸಂಖ್ಯೆ 4ಕ್ಕೆ ಸಂಬಂಧಿಸಿದ ಮಾಹಿತಿಯನ್ನು, ಈ ವಿಷಯವು ಇನ್ನೂ ತನಿಖೆಯಲ್ಲಿರುವುದರಿಂದ ಒದಗಿಸಲು ಸಾಧ್ಯವಾಗಿರಲಿಲ್ಲ. ಬಾಬು ಸಂಖ್ಯೆ 2 ಮತ್ತು 3ರಲ್ಲಿನ ಮಾಹಿತಿಯನ್ನು ಈಗಾಗಲೇ ಅಪೀಲುದಾರನಿಗೆ ಒದಗಿಸಿರುವುದಾಗಿಯೂ ಸಹ ಆತನು ಹೇಳಿದ್ದಾನೆ.
6. ಆಯೋಗವು ನಿವೇದನೆಯನ್ನು ದಾಖಲಿಸಿಕೊಂಡಿದೆ. ಆದರೆ, ಆಯೋಗವು ಬಾಬು ಸಂಖ್ಯೆ 1ಕ್ಕೆ ಸಂಬಂಧಪಟ್ಟ, ಠಾಣೆಯ ದಾಖಲು ಪುಸ್ತಕದ ನಮೂನೆಗಳಂಥ ಸಂಬಂಧಪಟ್ಟ ದಾಖಲೆಯನ್ನು ಒದಗಿಸಲು ಪ್ರತಿವಾದಿಗೆ ನಿರ್ದೇಶಿಸಿದೆ. ತನಿಖೆ ಪೂರ್ಣಗೊಂಡು ಮತ್ತು ಆರೋಪ ಪಟ್ಟಿಗಳನ್ನು ಸಲ್ಲಿಸಿದ ಕೂಡಲೇ ಬಾಬು ಸಂಖ್ಯೆ 4ಕ್ಕೆ ಸಂಬಂಧಿಸಿದ ಮೊದಲ ಮಾಹಿತಿ ವರದಿಯ ಮತ್ತು ಠಾಣೆಯ ದಾಖಲು ಪುಸ್ತಕದ ನಮೂನೆಗಳ ಪ್ರತಿಗಳನ್ನು ಒದಗಿಸಲು ಸಹ ನಿರ್ದೇಶಿಸಿದೆ.
7. ಅನುಸರಣೆಯ ದೃಷ್ಟಿಯಲ್ಲಿ ಮತ್ತು ನಿರ್ದೇಶನಗಳಿಗನುಸಾರವಾಗಿ, ಅಂಗೀಕರಿಸಲಾಗಿರುವಂತೆ ಅಪೀಲನ್ನು ವಿಲೇ ಮಾಡಲಾಗಿದೆ.
8. ಇದೇ 2007ರ ಅಕ್ಟೋಬರ್ 31ರಂದು ಬಹಿರಂಗ ನ್ಯಾಯಾಲಯದಲ್ಲಿ ಹೇಳಿ ಬರೆಸಲಾಗಿದೆ, ಕರಡನ್ನು ಸರಿಪಡಿಸಲಾಗಿದೆ, ಸಹಿ ಮಾಡಲಾಗಿದೆ ಹಾಗೂ ಉಚ್ಚರಿಸಲಾಗಿದೆ.

**(iii) ಮಾಹಿತಿಗೆ ಅವಕಾಶ ನೀಡುವುದು, ದಾಖಲೆಗಳ ನಿರ್ವಹಣೆ, ಉಸ್ತುವಾರಿ ಮುಂತಾದವುಗಳ ಬಗ್ಗೆ ಕೆಲವು ಮಾಹಿತಿ ಅಥವಾ ಕೆಲ ವರ್ಗದ ಮಾಹಿತಿಯನ್ನು ಪ್ರಕಟಿಸುವುದು, ಕುರಿತಂತೆ ಪ್ರಕರಣ 19 (8)ರ ಅಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳಿಗೆ ನಿರ್ದೇಶನ:**

**ಕೆಐಸಿ 1589 ಸಿಒಎಂ 2007**

## ಕರ್ನಾಟಕ ಮಾಹಿತಿ ಆಯೋಗ

(ಶ್ರೀ ರವೀಂದ್ರನಾಥ ಗುರು–ವಿರುದ್ಧ – ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ (ಕೆಜಿಎಸ್) ಬೆಂಗಳೂರು)

## ಆದೇಶ

17.8.2007

1. ಫಿರ್ಯಾದುದಾರನು ಹಾಜರಾಗಿದ್ದನು. ಶ್ರೀ ಕೆ ರಮೇಶ್, ಹಿರಿಯ ಸಹಾಯಕರು (ಪ್ರಾಥಮಿಕ–ಎ), ಶಿಕ್ಷಣ ಇಲಾಖೆ – ಇವರು ಪ್ರತಿವಾದಿಯನ್ನು ಪ್ರತಿನಿಧಿಸಿದ್ದರು.
2. ದಿನಾಂಕ 9.3.07ರ ಈತನ ಮನವಿಯಲ್ಲಿ, ಫಿರ್ಯಾದುದಾರನು 2006–07 ಮತ್ತು 2007–08ರ ಅವಧಿಯಲ್ಲಿ ಬೆಂಗಳೂರು ದಕ್ಷಿಣ ವಲಯದಲ್ಲಿನ ಶಾಲೆಗಳಲ್ಲಿ ಭಾರತೀಯ ಪ್ರೌಢ ಶಿಕ್ಷಣ ಪರಿಷತ್ತು (ಐಸಿಎಸ್‌ಇ) ಹಾಗೂ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಪಠ್ಯಕ್ರಮದ ತರಗತಿಗಳನ್ನು ಪ್ರಾರಂಭಿಸಲು ನೀಡಲಾದ ನಿರಾಕ್ಷೇಪಣಾ ಪ್ರಮಾಣಪತ್ರಗಳ ಪಟ್ಟಿಯ ಪ್ರಮಾಣೀಕೃತ ಪ್ರತಿಗಳನ್ನು ಕೋರಿದ್ದಾನೆ. ಅದಕ್ಕೆ ಉತ್ತರವಾಗಿ, ಪ್ರತಿವಾದಿಯು ದಿನಾಂಕ 13.3.07ರಂದು ಫಿರ್ಯಾದುದಾರನಿಗೆ, 80 ಪುಟಗಳ ಮಾಹಿತಿಯನ್ನು ಪೂರೈಸುವುದಕ್ಕೆ 160/– ರೂ.ಗಳ ಹೆಚ್ಚುವರಿ ಶುಲ್ಕವನ್ನು ಸರ್ಕಾರದ ಲೆಕ್ಕಕ್ಕೆ ಪಾವತಿಸಲು ಮತ್ತು ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಲು ಅದರ ರಸೀದಿಯನ್ನು

ಹಾಜರುಪಡಿಸಲು ಪತ್ರದ ಮೂಲಕ ತಿಳಿಸಿದ್ದಾನೆ. ಆದರೆ, ದಿನಾಂಕ 13.3.2007ರ ಸದರಿ ಪತ್ರವನ್ನು ಫಿರ್ಯಾದುದಾರನು ವಾಸ್ತವವಾಗಿ ದಿನಾಂಕ 10.4.07ರಂದು ಸ್ವೀಕರಿಸಿದ್ದಾನೆ. 18.04.07ರ ತನ್ನ ಪತ್ರದಲ್ಲಿ ಪ್ರತಿವಾದಿಯು ಮಾಹಿತಿಯನ್ನು ಉಚಿತವಾಗಿ ಒದಗಿಸಬೇಕೆಂದು ನೆನಪಿಸಿದ್ದರೂ ಸಹ, ಗೊತ್ತುಪಡಿಸಿದ 30 ದಿನಗಳ ಅವಧಿಯ ಮುಕ್ತಾಯದ ನಂತರ ಹೆಚ್ಚುವರಿ ಶುಲ್ಕದ ಪಾವತಿಯನ್ನು ಪ್ರತಿವಾದಿಯು ಒತ್ತಾಯಿಸಿರುವುದರ ಆಧಾರದ ಮೇಲೆ, ಫಿರ್ಯಾದುದಾರನು ಆಯೋಗಕ್ಕೆ ದಿನಾಂಕ 22.05.07ರಂದು ದೂರನ್ನು ಸಲ್ಲಿಸಿರುತ್ತಾನೆ.

3. ಸಮನ್ಸ್‌ಗಳನ್ನು ಹೊರಡಿಸಿದ ನಂತರ, ಪ್ರತಿವಾದಿಯು ಫಿರ್ಯಾದುದಾರನಿಗೆ ಕೆಲವು ಮಾಹಿತಿಯನ್ನು ಒದಗಿಸಿದ್ದಾನೆ. ಫಿರ್ಯಾದುದಾರನು ಮಾಹಿತಿ ಸ್ವೀಕರಿಸಿದ ಬಗ್ಗೆ ಒಪ್ಪಿಕೊಂಡಿದ್ದಾನೆ. ಆದರೆ, ಆತನು ತನಗೆ ಒದಗಿಸಲಾದ ಮಾಹಿತಿಯು ಅಪೂರ್ಣವಾಗಿರುವುದಲ್ಲದೆ ತಾನು ಕೋರಿರುವಂತೆ ಪ್ರಮಾಣೀಕರಿಸಿರುವುದಿಲ್ಲ ಎಂಬುದಾಗಿಯೂ ಸಹ ಹೇಳಿದ್ದಾನೆ.

4. ಪ್ರತಿವಾದಿಯು ಒದಗಿಸಿದ ಮಾಹಿತಿಯ ಪ್ರತಿಗಳನ್ನು ಆಯೋಗವು ಪರಿಶೀಲಿಸಿದೆ, ಆದರೆ ಶಿಕ್ಷಣ ಇಲಾಖೆಯಿಂದ ನೀಡಲಾದ ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ಫಿರ್ಯಾದುದಾರನು ಕೋರಿರುವಂತೆ ಪ್ರಮಾಣೀಕರಿಸಿಲ್ಲ. ಅಲ್ಲದೆ, ಪ್ರತಿವಾದಿಯು ಕ್ರೋಡೀಕರಿಸಿದ ಮಾಹಿತಿಯನ್ನು ಒದಗಿಸಿದ್ದಾನೆ ಮತ್ತು 2006–07 ಮತ್ತು 2007–08ರ ಅವಧಿಯಲ್ಲಿ ನೀಡಲಾದ ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ಪ್ರತ್ಯೇಕಿಸಿಲ್ಲ. ಇದೂ ಅಲ್ಲದೆ, ಶಿಕ್ಷಣ ಇಲಾಖೆಯಲ್ಲಿ ಸರ್ಕಾರದಿಂದ ನೀಡಲಾದ ನಿರಾಕ್ಷೇಪಣಾ ಪ್ರಮಾಣಪತ್ರಗಳಲ್ಲಿ, ಅರ್ಜಿದಾರ ಸಂಸ್ಥೆಯ ಅರ್ಜಿ ದಿನಾಂಕ ಸೇರಿದಂತೆ ನಿರಾಕ್ಷೇಪಣಾ ಪ್ರಮಾಣಪತ್ರಗಳ ನೀಡಿಕೆಗಾಗಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಶಿಫಾರಸು ಮಾಡಿರುವಲ್ಲಿ ಇಲಾಖೆಯ ವಿವರಗಳನ್ನು ತೋರಿಸುವುದಿಲ್ಲ ಎಂಬುದಾಗಿ ಫಿರ್ಯಾದುದಾರನು ಹೇಳಿದ್ದಾನೆ. ಪ್ರತಿವಾದಿಯು ಮಾಹಿತಿಗಾಗಿ ಮನವಿ ಮಾಡಿರುವುದಕ್ಕೆ ಸಂಬಂಧಪಟ್ಟ ಕಡತವನ್ನು ಕೂಡಲೇ ಪತ್ತೆಹಚ್ಚಲು ಆಗುವುದಿಲ್ಲವೆಂದು ಹೇಳಿದ್ದಾನೆ.

5. ಫಿರ್ಯಾದುದಾರನ ಮನವಿಗೆ ಸಂಬಂಧಪಟ್ಟ ದಾಖಲೆಗಳನ್ನು ಹುಡುಕಿ ಪತ್ತೆಮಾಡಲು ಮತ್ತು ಶಿಕ್ಷಣ ಇಲಾಖೆಯಲ್ಲಿ ಸರ್ಕಾರದಿಂದ ನೀಡಲಾದ ನಿರಾಕ್ಷೇಪಣಾ ಪ್ರಮಾಣಪತ್ರಗಳ ಪ್ರಮಾಣೀಕೃತ ಪ್ರತಿಗಳನ್ನು ಒದಗಿಸಲು ಮತ್ತು 2006–07 ಮತ್ತು 2007–08ರ ವರ್ಷದ ಮಾಹಿತಿಯನ್ನು ಪ್ರತ್ಯೇಕಿಸಲು ಹಾಗೂ ಎಲ್ಲಾ ಮಾಹಿತಿಯನ್ನು ಮರುಪರಿಶೀಲಿಸಿ ಸರಿಯಾದ ಮಾಹಿತಿಯನ್ನು ಉಚಿತವಾಗಿ 15 ದಿನಗಳೊಳಗೆ ಸ್ವೀಕೃತಿ ಬಾಕಿಯೊಂದಿಗೆ ನೋಂದಾಯಿತ ಅಂಚೆ ಮೂಲಕ ಫಿರ್ಯಾದುದಾರನಿಗೆ ಒದಗಿಸಬೇಕೆಂದು ಸಹ ಆಯೋಗವು ಪ್ರತಿವಾದಿಗೆ ನಿರ್ದೇಶಿಸಿದೆ.

6. ಅಲ್ಲದೆ, ಆಯೋಗವು ಫಿರ್ಯಾದುದಾರನು ನಮೂದಿಸಿರುವಂತೆ ಶಿಕ್ಷಣ ಇಲಾಖೆಯಲ್ಲಿ ಸರ್ಕಾರದಿಂದ ನೀಡಲಾದ ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ಸಹ ಪರಿಶೀಲಿಸಿದೆ. ಈ ಪ್ರಮಾಣಪತ್ರಗಳಲ್ಲಿ, ಅರ್ಜಿದಾರ ಸಂಸ್ಥೆಯ ವಿವರಗಳೊಂದಿಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಶಿಫಾರಸು ಮಾಡಿರುವ ಇಲಾಖೆಯ ವಿವರಗಳನ್ನು ತೋರಿಸುವುದಿಲ್ಲ. ಆದ್ದರಿಂದ, ಆಯೋಗವು ಪ್ರಕರಣ 19 (8) (ಎ) (iv)ರ ಅಡಿಯಲ್ಲಿ ನಿಹಿತವಾದ ತನ್ನ ಅಧಿಕಾರವ್ಯಾಪ್ತಿಯಲ್ಲಿ, ಅರ್ಜಿ ದಿನಾಂಕದೊಂದಿಗೆ ಅರ್ಜಿದಾರ ಸಂಸ್ಥೆಯ ವಿವರಗಳನ್ನು ಮತ್ತು ನಿರಾಕ್ಷೇಪಣಾ ಪ್ರಮಾಣಪತ್ರಗಳ ನೀಡಿಕೆಗಾಗಿ ಸರ್ಕಾರದ ಪ್ರಸ್ತಾವನೆಯನ್ನು ಪರಿಶೀಲಿಸಿ ಶಿಫಾರಸು ಮಾಡಿರುವ ಇಲಾಖೆಯ ವಿವರಗಳನ್ನು ಸೂಕ್ತವಾಗಿ ಸೇರ್ಪಡೆಮಾಡಿರುವ ಮಾರ್ಪಡಿಸಿದ ಪ್ರಮಾಣಪತ್ರಗಳನ್ನು ಸರಿಪಡಿಸುವಂತೆ, ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) – ಇವರಿಗೆ ನಿರ್ದೇಶಿಸಿದೆ.

7. ಮುಂದುವರಿದು, ಶಿಕ್ಷಣ ಇಲಾಖೆಯು, ಇಲಾಖೆಯ ವಿವಿಧ ಅಧೀನ ಕಾರ್ಯದರ್ಶಿಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ಸಾರ್ವಜನಿಕ ಮಾಹಿತಿ ಅಧಿಕಾರಿ(ಪಿಐಒ)ಗಳನ್ನಾಗಿ ನೇಮಿಸಿದಾಗ್ಯೂ, ಮಾಹಿತಿ ಬಯಸುವವರು ತಮ್ಮ ಕೋರಿಕೆಗಳನ್ನು ಸಲ್ಲಿಸಲು ಸಾಧ್ಯವಾಗುವಂತೆ ಅಧಿಕಾರಿಗಳ ಹೆಸರುಗಳು ಮತ್ತು ಪದನಾಮಗಳನ್ನು ಹಾಗೂ ಅವರು ವ್ಯವಹರಿಸುವ ವಿಷಯಗಳನ್ನು ಪ್ರದರ್ಶಿಸುವ ಸೂಚನಾ ಫಲಕವು ಇಲ್ಲವೆಂದು ದೂರಿನಲ್ಲಿ ಹೇಳಲಾಗಿದೆ. ಆದುದರಿಂದ, ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು

ಮತ್ತು ಪದನಾಮಗಳು, ಅವರು ವ್ಯವಹರಿಸುವ ವಿಷಯಗಳನ್ನು ಒಳಗೊಂಡ ವಿವರಗಳ ಪ್ರಕಟಣೆಯನ್ನು ಮತ್ತೂ ಅಲ್ಲದೆ ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಅರ್ಜಿದಾರನು ಮಾಹಿತಿಗಾಗಿ ಕೋರಿಕೆಯನ್ನು ಸಲ್ಲಿಸಬೇಕಾಗಿರುವ ನಿರ್ದಿಷ್ಟ ಸ್ಥಳವನ್ನು ಪ್ರದರ್ಶಿಸಲು, ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಮಾಧ್ಯಮಿಕ) ಇವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಯೋಗವು ನಿರ್ದೇಶಿಸುತ್ತದೆ. ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಇವರು, ಮೇಲಿನ ಅಂಶಗಳ ಕುರಿತು ಕೈಗೊಂಡ ಕ್ರಮಗಳ ಸಂಬಂಧವಾಗಿ ಅನುಪಾಲನೆಯನ್ನು ಸಲ್ಲಿಸಬೇಕೆಂದು ನಿರ್ದೇಶಿಸಿದ್ದಾರೆ. ಫಿರ್ಯಾದುದಾರರು ಕೋರಿದಂತೆ, ಮಾನವ ಸಂಪನ್ಮೂಲಗಳ ಮಂತ್ರಾಲಯ, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರವು ಹೊರಡಿಸಿದ ಸುತ್ತೋಲೆಗಳ ಜೊತೆಗೆ ಸರಿಯಾದ ಮತ್ತು ಸಂಪೂರ್ಣ ಮಾಹಿತಿಯ ಪ್ರಮಾಣಿತ ಪ್ರತಿಗಳನ್ನು ಉಚಿತವಾಗಿ, ತಲುಪೊಪ್ಪಿಗೆ ನೋಂದಾಯಿತ ಅಂಚೆ ಮೂಲಕ, ಆಯೋಗದ ಸೂಚನೆ ಮೇರೆಗೆ ಒದಗಿಸಲು ಪ್ರತಿವಾದಿಗೆ ನಿರ್ದೇಶಿಸಲಾಗಿದೆ.

8. ಸಂಬಂಧಪಟ್ಟ ಮಾಹಿತಿಯನ್ನು ಉಚಿತವಾಗಿ ಒದಗಿಸಲು ಫಿರ್ಯಾದುದಾರರು ಕೋರಿದಾಗ್ಯೂ, ಪ್ರತಿವಾದಿಗಳು ನಿಗದಿತ 30 ದಿನಗಳ ಅವಧಿಯು ಮುಕ್ತಾಯವಾದ ತರುವಾಯ ಹೆಚ್ಚುವರಿ ಶುಲ್ಕದ ಸಂದಾಯವನ್ನು ಕೇಳಿದ ತಪ್ಪು ಸೂಚನೆಯನ್ನು ನೀಡಿರುವರೆಂದು ಆಯೋಗದ ಗಮನಕ್ಕೆ ಬಂದಿದೆ. ಮುಂದುವರಿದು, ಸಂಬಂಧಿಸಿದ ಮಾಹಿತಿಯನ್ನು ಒದಗಿಸುವಲ್ಲಿ ಅನಗತ್ಯ ವಿಳಂಬವಾಗಿದೆ. ಆದುದರಿಂದ, ಆಯೋಗವು ಈ ಆದೇಶದ ಮೂಲಕ, ಹೆಚ್ಚುವರಿ ಶುಲ್ಕ ಸಂದಾಯ ಮಾಡಲು ಹೇಳಿ ತಪ್ಪು ಸೂಚನೆಯನ್ನು ನೀಡಿದ್ದಕ್ಕಾಗಿ ಮತ್ತು ಅಲ್ಲದೆ ಅಗತ್ಯ ಮಾಹಿತಿಯನ್ನು ಒದಗಿಸಲು ತಡ ಮಾಡಿದ್ದಕ್ಕಾಗಿ ಅಧಿನಿಯಮದ 20(1)ನೇ ಪ್ರಕರಣದ ಅಡಿಯಲ್ಲಿ, ದಂಡ ವಿಧಿಸಲು ಪ್ರತಿವಾದಿ ಎಂದರೆ ಶ್ರೀ ಬಿ.ಎಸ್. ಪಡಸಲಗಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಅಧೀನ ಕಾರ್ಯದರ್ಶಿ ಇವರ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದೆಂಬುದಕ್ಕೆ 30 ದಿನಗಳ ಒಳಗಾಗಿ ಕಾರಣ ತೋರಿಸಲು ಅವರಿಗೆ ನಿರ್ದೇಶಿಸಲಾಗಿದೆ. ಮುಂದಿನ ವಿಚಾರಣೆಯ ಅವಧಿಯಲ್ಲಿ ಖುದ್ದಾಗಿ ಹಾಜರಿರಲು ಮತ್ತು ಮುಂದಿನ ವಿಚಾರಣೆಯ ಕಾಲದಲ್ಲಿ ಉದ್ದೇಶಿಸಿದ ದಂಡದ ಕ್ರಮದ ವಿರುದ್ಧ ಮೌಖಿಕ ಅಥವಾ ಲಿಖಿತ ನಿವೇದನೆ ಮಾಡಿಕೊಳ್ಳಲು ಸಹ ಅವರಿಗೆ ನಿರ್ದೇಶಿಸಲಾಗಿದೆ.
9. ದೂರನ್ನು ಮುಂದಿನ ವಿಚಾರಣೆಗಾಗಿ ದಿನಾಂಕ 16.11.07ರಂದು ಮಧ್ಯಾಹ್ನ 3.30ಕ್ಕೆ ಮುಂದೂಡಲಾಗಿದೆ.
10. ಈ ದಿನ ದಿನಾಂಕ 17ನೇ ಆಗಸ್ಟ್ 2007ರಂದು ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿ,ಕರಡನ್ನು ಸರಿಪಡಿಸಿ, ಸಹಿ ಮಾಡಿ ಉಚ್ಚರಿಸಲಾಯಿತು.

**ಕೆಐಸಿ 1625 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಎಸ್. ಮಂಜುನಾಥ : ವಿರುದ್ಧ : ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು)

**ಆದೇಶ**

**10/8/2007**

1. ಫಿರ್ಯಾದುದಾರರು ತನಗೆ ಸಹಾಯ ಮಾಡಲು ಶ್ರೀ ಜಿ. ವಿನ್ಸೆಂಟ್ ಇವರೊಂದಿಗೆ ಹಾಜರಿದ್ದರು. ಪ್ರತಿವಾದಿ ಶ್ರೀ ಜಗದೀಶ್, ಉಪ ಕಾರ್ಯದರ್ಶಿ–3 (ಹಂಚಿಕೆ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಶ್ರೀ ಎನ್.ಎಸ್. ಶಾಮಣ್ಣ, ಸಹಾಯಕ ನಿರ್ದೇಶಕರು, 'ನಗರ ಯೋಜನೆ', ಶ್ರೀ ಸುರೇಶ್ ಪ್ರತಾಪ್ ಸಿಂಗ್, ಮುಖ್ಯ ನಕ್ಷೆಗಾರ ಹಾಗೂ ಶ್ರೀ ಪೀತಾಂಬರ ಸ್ವಾಮಿ, ಕಿರಿಯ ಇಂಜಿನಿಯರ್ ಹಾಜರಿದ್ದರು.

2. ಫಿರ್ಯಾದುದಾರರು, ಮಾಹಿತಿಗಾಗಿನ ತಮ್ಮ 30.4.2007ರ ಕೋರಿಕೆಯಲ್ಲಿ ಮೂರು ಅಂಶಗಳನ್ನು ಕುರಿತು ಮಾಹಿತಿ ಕೋರಿರುತ್ತಾರೆ. ಅವು ಕೆಂಗೇರಿ ಉಪನಗರದ ಉದ್ಯಾನಗಳು ಮತ್ತು ಆಟದ ಮೈದಾನಗಳ ವಿವರಗಳನ್ನು ಅವುಗಳ ವಿಸ್ತೀರ್ಣ ಮತ್ತು ರೂಪಿಸಲಾದ ಕಾರ್ಯಯೋಜನೆಗಳ ಸಮೇತ 1780ರಿಂದ 1790ರವರೆಗಿನ ನಿವೇಶನ ಸಂಖ್ಯೆಗಳ ಹಂಚಿಕೆಯ ವಿವರಗಳು ಮತ್ತು ತ್ರಿಕೋನ ನಿವೇಶನದ ಹಂಚಿಕೆ ವಿವರಗಳನ್ನು ಸಹ, ಹಾಗೂ 26.6.94, 4.10.95, 17.12.99 ಮತ್ತು 24.7.03ರಂದು ನಡೆದ ಸಭೆಯ ವಿವರಗಳನ್ನು ಒದಗಿಸುವುದರ ಕುರಿತದ್ದಾಗಿದೆ. ಉತ್ತರವಾಗಿ, ಶ್ರೀ ಪೀತಾಂಬರ ಸ್ವಾಮಿಯವರು ಕೆಂಗೇರಿ ಉಪನಗರದಲ್ಲಿ ನಿರ್ಮಿಸಿದ ಉದ್ಯಾನಗಳು ಮತ್ತು ಆಟದ ಮೈದಾನಗಳ ಸಂಖ್ಯೆಯ ಕುರಿತ ವಿವರಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ಬಾಬು ಸಂಖ್ಯೆ 1ರ ಮಾಹಿತಿಯನ್ನು 4.6.2007ರಂದು ವಿಸ್ತೀರ್ಣಗಳು ಮತ್ತು ಕಾರ್ಯಯೋಜನೆಗಳ ಸಮೇತ ಫಿರ್ಯಾದುದಾರರಿಗೆ ಒದಗಿಸಲಾಗಿದೆ ಎಂದು ಹೇಳಿದರು. ಆದರೂ, ಫಿರ್ಯಾದುದಾರರು ಸದರಿ ಮಾಹಿತಿಯನ್ನು ತಾನು ಸ್ವೀಕರಿಸಿಲ್ಲವೆಂದು ತಿಳಿಸಿದರು. ಪ್ರತಿವಾದಿ ಶ್ರೀ ಪೀತಾಂಬರ ಸ್ವಾಮಿಯವರು ಅದರ ಪ್ರತಿಯನ್ನು ಉಚಿತವಾಗಿ ಒಂದು ವಾರದ ಒಳಗಾಗಿ ನೋಂದಾಯಿತ ಅಂಚೆಯ ಮೂಲಕ ಫಿರ್ಯಾದುದಾರರಿಗೆ ಒದಗಿಸುವುದಾಗಿ ವಾಗ್ದಾನ ಮಾಡಿದರು. ಬಾಬು ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ, ಶ್ರೀ ಜಗದೀಶ್, ಉಪ ಕಾರ್ಯದರ್ಶಿಯವರು 1780ರಿಂದ 1790ರವರೆಗಿನ ನಿವೇಶನ ಸಂಖ್ಯೆಗಳ ಕುರಿತ ಮಾಹಿತಿಯನ್ನು ಒದಗಿಸಲಾಗಿದೆ ಮತ್ತು ಫಿರ್ಯಾದುದಾರರು ನಿವೇಶನ ಸಂಖ್ಯೆಗಳನ್ನು ಒದಗಿಸದಿರುವುದರಿಂದ ತ್ರಿಕೋನ ನಿವೇಶನಗಳ ವಿವರಗಳನ್ನು ಒದಗಿಸಲಾಗಿಲ್ಲವೆಂದು ತಿಳಿಸಿದರು. ಈಗಾಗಲೇ ಒದಗಿಸಿದ ಮಾಹಿತಿಯ ಒಂದು ಪ್ರತಿಯನ್ನು ಫಿರ್ಯಾದುದಾರರಿಗೆ ಕೊಡಲಾಯಿತು.

3. ಬಡಾವಣೆಯ ನಕ್ಷೆಯನ್ನು ಪರಿಶೀಲಿಸಿದ ಬಳಿಕ ಪ್ರತಿವಾದಿಗಳು, ಫಿರ್ಯಾದುದಾರರು ಉಲ್ಲೇಖಿಸಿದ ನಿರ್ದಿಷ್ಟ ತ್ರಿಕೋನ ನಿವೇಶನಗಳನ್ನು ದೇವಸ್ಥಾನಗಳಿಗಾಗಿ ಮೀಸಲಿರಿಸಲಾಗಿದ್ದು ಅವುಗಳನ್ನು ಬಡಾವಣೆ ನಕ್ಷೆಯಲ್ಲಿ ಸೇರಿಸಲಾಗಿದೆ ಮತ್ತು ಈ ತ್ರಿಕೋನ ನಿವೇಶನಗಳನ್ನು 1780ರಿಂದ 1791ರವರೆಗಿನ ನಿವೇಶನ ಸಂಖ್ಯೆಗಳ ನಡುವೆ ಗುರುತಿಸಲಾಗಿದೆ ಹಾಗೂ ಅವುಗಳಿಗೆ ಸಂಖ್ಯೆಯನ್ನು ನೀಡಲಾಗಿಲ್ಲವೆಂದು ತಿಳಿಸಿದರು. ಬಡಾವಣೆ ನಕ್ಷೆಯ ಪರಿಶೀಲನೆಯ ಬಳಿಕ ಫಿರ್ಯಾದುದಾರರು ಈ ಅಂಶದ ಮೇಲೆ ಒದಗಿಸಿದ ಮಾಹಿತಿಯಿಂದ ತನಗೆ ತೃಪ್ತಿಯಾಗಿದೆಯೆಂದು ತಿಳಿಸಿದರು.

4. ಮುಂದುವರಿದು, ಪ್ರತಿವಾದಿಗಳು ಬಾಬು ಸಂಖ್ಯೆ 3ನ್ನು ಕುರಿತು ಫಿರ್ಯಾದುದಾರರು ಕೇವಲ ದಿನಾಂಕಗಳನ್ನು ಒದಗಿಸಿದ್ದು ಈ ನಡಾವಳಿಗಳು ಯಾವ ಸಮಿತಿಗೆ ಸಂಬಂಧಿಸಿರುವುದು ಎಂಬ ವಿವರಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿಲ್ಲವೆಂದು ಆದುದರಿಂದ ಸಂಬಂಧಪಟ್ಟ ಮಾಹಿತಿಯನ್ನು ತಾನು ಒದಗಿಸಲು ಅಸಮರ್ಥನಾಗಿರುವುದಾಗಿ ತಿಳಿಸಿದರು. ಫಿರ್ಯಾದುದಾರರು, ಈ ದಿನಾಂಕಗಳು ಬಡಾವಣೆ ನಕ್ಷೆಯನ್ನು ಅಂತಿಮ ರೂಪಕ್ಕೆ ತರುವ ಸಂಬಂಧವಾಗಿ ಆಯುಕ್ತರು ಹೊರಡಿಸಿದ ಆದೇಶಗಳಿಗೆ ಸಂಬಂಧಿಸಿದ್ದು, ಅವು ಹೆಚ್ಚುವರಿ ನಿವೇಶನಗಳನ್ನು ಒಳಗೊಳ್ಳಬಹುದೆಂದು ತಿಳಿಸಿದರು. ಆಯೋಗವು, ಶ್ರೀ ಪೀತಾಂಬರ ಸ್ವಾಮಿ, ಕಿರಿಯ ಇಂಜಿನಿಯರ್, ಮತ್ತು ಶ್ರೀ ಶಾಮಣ್ಣ, ಸಹಾಯಕ ನಿರ್ದೇಶಕರು ಇವರಿಗೆ, ಕೆಂಗೇರಿ ಉಪನಗರ ಬಡಾವಣೆ ಯೋಜನೆಯನ್ನು ಅಂತಿಮಗೊಳಿಸುವಾಗ ಆಯುಕ್ತರು ಹೊರಡಿಸಿದ ಸಂಬಂಧಪಟ್ಟ ಆದೇಶಗಳನ್ನು ಪರಿಶೀಲಿಸಲು ಮತ್ತು 15 ದಿನಗಳ ಒಳಗಾಗಿ ಉಚಿತವಾಗಿ ತಲುಪೊಪ್ಪಿಗೆ ನೋಂದಾಯಿತ ಅಂಚೆ ಮೂಲಕ ಫಿರ್ಯಾದುದಾರರಿಗೆ ಸರಿಯಾದ ಮಾಹಿತಿಯನ್ನು ಒದಗಿಸಲು ನಿರ್ದೇಶಿಸಿತು.

5. ಆದಾಗ್ಯೂ, ಮಾಹಿತಿಯನ್ನು ಒದಗಿಸುವಲ್ಲಿ ಅತಿಯಾದ ವಿಳಂಬವಾಗಿದೆ. ಆದುದರಿಂದ ಆಯೋಗವು, ಪ್ರತಿವಾದಿಗಳು ಮುಂಜಾಗ್ರತೆ ವಹಿಸಬೇಕೆಂದು ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕರಿಸಿದ ಮಾಹಿತಿಗಾಗಿನ ಕೋರಿಕೆಗಳೊಂದಿಗೆ ವ್ಯವಹರಿಸುವಾಗ ತ್ವರಿತವಾಗಿ ಉತ್ತರಿಸಬೇಕೆಂದು ನಿರ್ದೇಶಿಸಿತು.

6. ನಿರ್ದೇಶನಗಳನ್ನು ಅನುಪಾಲಿಸಿದ್ದರಿಂದ ಮತ್ತು ಪರಿಹಾರ ದೊರಕಿದ್ದರಿಂದ, ದೂರನ್ನು ವಿಲೆ ಮಾಡಲಾಯಿತು.
7. ಈ ದಿನ ದಿನಾಂಕ 10ನೇ ಆಗಸ್ಟ್ 2007ರಂದು ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿ, ಕರಡನ್ನು ಸರಿಪಡಿಸಿ, ಸಹಿ ಮಾಡಿ ಉಚ್ಚರಿಸಲಾಯಿತು.

**ಕೆಐಸಿ 358 ಸಿಓಎಂ 2006**

**ಕರ್ನಾಟಕ ಮಾಹಿತಿ ಆಯೋಗ**

(ಸಿ.ಎನ್. ಕುಮಾರ್ : ವಿರುದ್ಧ : ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿ)

**ಆದೇಶ**

**17/7/2006**

1. ಫಿರ್ಯಾದುದಾರ ಹಾಜರಿದ್ದರು. ಪ್ರತಿವಾದಿ ಎಂದರೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಮಹಾನಗರ ಪಾಲಿಕೆ ಇವರು ಗೈರುಹಾಜರಾಗಿದ್ದರು.
2. ಜಂಟಿ ನಿರ್ದೇಶಕರು, ನಗರ ಯೋಜನೆ, ಬೆಂಗಳೂರು ಮಹಾನಗರ ಪಾಲಿಕೆ ಇವರು, ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಾಗಿತ್ತೋ ಅದನ್ನು ಉಲ್ಲಂಘಿಸಿ, ಜಕ್ಕಸಂದ್ರ ಗ್ರಾಮ, ಕೋರಮಂಗಲ, ಬೆಂಗಳೂರು ದಕ್ಷಿಣದ ಸರ್ವೇ ನಂ.53/1ರ ಸಂಬಂಧದಲ್ಲಿ ವಾಣಿಜ್ಯ ಕಟ್ಟಡದ ನಿರ್ಮಾಣಕ್ಕೆ ಲೈಸೆನ್ಸನ್ನು ಮಂಜೂರು ಮಾಡಿದ್ದಾರೆ. ಈ ಸರ್ವೇ ನಂಬರಿಗೆ ಅನುಮತಿಸಿದ ಭೂ ಬಳಕೆ ಲಘು ಕೈಗಾರಿಕೆಗಾಗಿ ಇದ್ದು, ಆದರೆ ಮಂಜೂರಾದ ಲೈಸೆನ್ಸು, ವಾಣಿಜ್ಯ ಕಟ್ಟಡದ ನಿರ್ಮಾಣಕ್ಕಾಗಿ ನೀಡಲಾಗಿದೆ. ಇದು ಕೇವಲ ವಲಯ ರಚನೆ ವಿನಿಯಮಗಳು ಮತ್ತು ಬೈಲಾಗಳ ವಿರುದ್ಧ ಮಾತ್ರವಾಗಿರದೆ, ಬೇರೆ ಉದ್ದೇಶಕ್ಕಾಗಿ ಭೂ ಬಳಕೆಯ ಬದಲಾವಣೆಯಿಂದಾಗಿ ಸರ್ಕಾರಕ್ಕೆ ಕಂದಾಯದ ನಷ್ಟಕ್ಕೂ ಕಾರಣವಾಗಿದೆ.
3. ಬೆಂಗಳೂರು ಮಹಾನಗರ ಪಾಲಿಕೆಯು ವಾಣಿಜ್ಯ ಕಟ್ಟಡಕ್ಕಾಗಿ ಲೈಸೆನ್ಸನ್ನು ಮಂಜೂರು ಮಾಡಿರುವುದೆಂದು ಕಂಡುಬಂದಿದೆ. ಇನ್ನೊಂದೆಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಅದರ (ಬಿಡಿಎ) ವಲಯ ರಚನೆ ವಿನಿಯಮಗಳ ಪ್ರಕಾರ ಈ ಸರ್ವೇ ನಂಬರಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದಿಲ್ಲವೆಂದು ಫಿರ್ಯಾದುದಾರರಿಗೆ ತಿಳಿಸಿದೆ. ಮೇಲಿನ ವಿಷಯದ ಹಿನ್ನಲೆಯಲ್ಲಿ, ಫಿರ್ಯಾದುದಾರರು ಬೆಂಗಳೂರು ಮಹಾನಗರ ಪಾಲಿಕೆಯು ತಪ್ಪಾದ ಮತ್ತು ತನಗೆ ದಾರಿ ತಪ್ಪಿಸುವ ಮಾಹಿತಿಯನ್ನು ಒದಗಿಸಿದೆ ಎಂಬುದು ಕಂಡುಬರುತ್ತಿದೆ, ಮತ್ತು ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.
4. ಮುಂದುವರಿದು ಫಿರ್ಯಾದುದಾರರು, ವಾಸ್ತವವಾಗಿ ತನಗೆ ಸಂದಾಯ ಮಾಡುವಂತೆ ಕೇಳಲಾಗಿದ್ದರ ಜೊತೆಗೆ ಮಾಹಿತಿಯ ಪೂರೈಕೆಯ ವೆಚ್ಚವೆಂದು ಹೆಚ್ಚುವರಿ ಶುಲ್ಕವಾಗಿ 14/– ರೂ.ಗಳನ್ನು ಸಂದಾಯ ಮಾಡಿರುವುದಾಗಿ ಹೇಳಿದರು. ಆದರೆ ಅವರು ಸಂಪೂರ್ಣ ವರದಿಯನ್ನು ಕೇಳಿದಾಗ್ಯೂ, ಅವರಿಗೆ ತಪಾಸಣಾ ವರದಿಯ ಸಾರಾಂಶವನ್ನು ಒಳಗೊಂಡ ಒಂದು ಪುಟದ ಮಾಹಿತಿಯನ್ನು ಮಾತ್ರ ನೀಡಲಾಗಿದೆ. ಅಂತೆಯೇ ಹೆಚ್ಚಿನ ಚಾರ್ಜು ವಿಧಿಸಿಯೂ ಕೋರಿದ ಸಂಪೂರ್ಣ ಮಾಹಿತಿಯನ್ನು ಪೂರೈಸಿರುವುದಿಲ್ಲ.
5. ಫಿರ್ಯಾದುದಾರರು ಎತ್ತಿದ, ಮೇಲೆ ಉಲ್ಲೇಖಿಸಿದ ಎಲ್ಲ ವಿವಾದಗಳಿಗೆ ಸಮಜಾಯಿಸಿ ನೀಡಿ, ಈ ಕೋರಿಕೆಯ ಸಂಬಂಧವಾಗಿ ಬೆಂಗಳೂರು ಮಹಾನಗರ ಪಾಲಿಕೆಯು ಫಿರ್ಯಾದುದಾರರಿಗೆ ಒದಗಿಸಿದ ಎಲ್ಲ ಮಾಹಿತಿಯನ್ನು ಶ್ರೀ ಹರ್ಷ ಗುಪ್ತ, ಪ್ರಭಾರಿ ಸಿ.ಇ. ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂಗಳೂರು ಮಹಾನಗರ ಪಾಲಿಕೆ (ಹೆಸರಿನಿಂದ) ಇವರು ಖುದ್ದಾಗಿ ಪರಿಶೀಲಿಸಬೇಕೆಂದು ಮತ್ತು 25 ದಿನಗಳ ಅವಧಿಯ ಒಳಗೆ ಸೂಕ್ತ ಉತ್ತರವನ್ನು ಅವರಿಗೆ ಕಳುಹಿಸಿದ ಪ್ರತಿಯೊಂದಿಗೆ ಆಯೋಗಕ್ಕೆ

ಕಳುಹಿಸಬೇಕೆಂದು ಈ ಆದೇಶದ ಪ್ರತಿಯ ಮೂಲಕ ನಿರ್ದೇಶಿಸಲಾಗಿದೆ. ಅವರಿಗೆ ಪೂರೈಸಿದ ಮಾಹಿತಿಯು ತಪ್ಪಾಗಿದೆ ಮತ್ತು/ಅಥವಾ ಭಾಗಶಃ ಇದೆಯೆಂದು ಕಂಡುಬಂದಲ್ಲಿ, ಅವರು ಅದೇ ಅವಧಿಯ ಒಳಗೆ, ಆಯೋಗಕ್ಕೆ ಕಳುಹಿಸಿದ ಪ್ರತಿಯೊಂದಿಗೆ ಫಿರ್ಯಾದುದಾರರಿಗೆ ಮಾರ್ಪಾಡಾದ ಪೂರ್ಣ ಮತ್ತು ಸರಿಯಾದ ಮಾಹಿತಿಯನ್ನು ತಲುಪೊಪ್ಪಿಗೆ ನೋಂದಾಯಿತ ಅಂಚೆ ಮೂಲಕ ಮತ್ತು ಉಚಿತವಾಗಿ ಒದಗಿಸತಕ್ಕದ್ದು.

6. ದಂಡವನ್ನು ವಿಧಿಸುವುದಕ್ಕಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿರುದ್ಧ ಆರಂಭಿಸಬೇಕಾದ ಪ್ರಕರಣ 20(1)ರಡಿಯಲ್ಲಿನ ಕ್ರಮಕ್ಕಾಗಿನ ಪ್ರತಿವಾದಿಯ ಕೋರಿಕೆಗೆ ಸಂಬಂಧಿಸಿದ ಹಾಗೆ, ಆಗಿನ ಸಾರ್ವಜನಿಕ ಮಾಹಿತಿ ಅಧಿಕಾರಿ ಶ್ರೀ ರಾಮೇಗೌಡ ಇವರು ನಿವೃತ್ತರಾಗಿರುವುದಾಗಿ ಗಮನಕ್ಕೆ ಬಂದಿದೆ. ಆದಾಗ್ಯೂ, ಫಿರ್ಯಾದುದಾರರಿಗೆ ಒದಗಿಸಿದಂಥ ಮಾಹಿತಿಯು ವಾಸ್ತವವಾಗಿ ತಪ್ಪಾಗಿದೆ/ದಾರಿ ತಪ್ಪಿಸುವುದಾಗಿದೆಯೆಂದು ಖಚಿತವಾಗಿರುವುದರಿಂದಾಗಿ ಈ ಕೋರಿಕೆಯನ್ನು ಮುಂದಿನ ವಿಚರಣೆಯಲ್ಲಿ ಪರಿಶೀಲಿಸಲಾಗುವುದು.
7. ಮುಂದಿನ ವಿವಾರಣೆಗಾಗಿ ದಿನಾಂಕ 23ರ ಆಗಸ್ಟ್ 2006ರ ಬೆಳಿಗ್ಗೆ 11–30ಗಂಟೆಗೆ ಮುಂದೂಡಲಾಗಿದೆ.

**ಕೆಐಸಿ 358 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಸಿ.ಎನ್. ಕುಮಾರ್ : ವಿರುದ್ಧ : ಜೆಡಿಟಿಪಿ, ಬಿಬಿಎಂಪಿ, ಬೆಂಗಳೂರು)

**ಆದೇಶ**

**2/4/2007**

1. ಫಿರ್ಯಾದುದಾರರು ಹಾಜರಿರುವರು. ಪ್ರತಿವಾದಿ ಶ್ರೀ ಎಸ್.ಎಸ್. ಟೊಪಿಗೆ, ಜಂಟಿ ನಿರ್ದೇಶಕರು, ನಗರ ಯೋಜನೆ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ ಇವರು ಶ್ರೀ ಹಫೀಜ್, ಉಪ ನಿರ್ದೇಶಕರು, ನಗರ ಯೋಜನೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರೊಂದಿಗೆ ಹಾಜರಿರುವರು.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಪೂರ್ತಿ ವಿವಾದವನ್ನು ಪರಿಶೀಲಿಸಿರುವರು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡಿದ ಮಾಹಿತಿಯು, ನಿಜವಾದುದು, ಸರಿಯಾದುದು ಮತ್ತು ಲಭ್ಯ ದಾಖಲೆಗಳ ಮೇಲೆ ಆಧಾರಿತವಾದುದು ಎಂದು ಹೇಳಿರುವುದಾಗಿ ಪ್ರತಿವಾದಿಯು ತಿಳಿಸಿದರು. ಸದರಿ ಸುತ್ತೋಲೆಯನ್ನು ಮಾರ್ಪಾಟು ಮಾಡುವ ಅಗತ್ಯವಿಲ್ಲವೆಂದು ಕೂಡ ಅವರಿಗೆ ಹೇಳಿದರು.
3. ಮುಂದುವರಿದು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಶಿಫಾರಸುಗಳನ್ನು ನಿರ್ದೇಶಕರು, ನಗರ ಯೋಜನೆ ಇವರೊಂದಿಗೆ ಸಮಾಲೋಚಿಸಿ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಪರಿಶೀಲಿಸಿರುವರೆಂದು ಮತ್ತು ಅವರು ಲಘು ಕೈಗಾರಿಕೆಯ ಪ್ರದೇಶದಲ್ಲಿ ಅಂಗಡಿಗಳು ಮತ್ತು ಕಚೇರಿಗಳ ನಿರ್ಮಾಣಕ್ಕಾಗಿ, ನಿರ್ಮಾಣ ನಕ್ಷೆಯ ಮಂಜೂರಾತಿಯು, ಸರ್ಕಾರವು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತ್ಯಾಯೋಜಿಸಿದ ಅಧಿಕಾರವನ್ನು ಅನುಸರಿಸಿದೆ ಎಂಬ ತೀರ್ಮಾನಕ್ಕೆ ಬಂದಿರುವರೆಂಬುದಾಗಿ ಪ್ರತಿವಾದಿಯು ಹೇಳಿದರು.
4. ಸನ್ನಿವೇಶಗಳಿಗನುಗುಣವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈಗಾಗಲೇ ಒದಗಿಸಿದ ಮಾಹಿತಿಯನ್ನು ಸರಿಯಾದುದು ಎಂದು ಪರಿಗಣಿಸಬಹುದಾಗಿದೆ ಮತ್ತು ಆಯೋಗದ ನಿರ್ದೇಶನಗಳ ಮೇರೆಗೆ ಯಾವುದೇ ಪರಿಷ್ಕೃತ ಮಾಹಿತಿಯನ್ನು ಒದಗಿಸುವ ಅಗತ್ಯವಿಲ್ಲ ಎನ್ನುತ್ತಾರೆ.
5. ವಿಳಂಬಕ್ಕೆ ಸಂಬಂಧಿಸಿದ ಹಾಗೆ, ಪ್ರತಿವಾದಿಯು, ಮಾಹಿತಿಯ ಸರಿತನವನ್ನು ಆಯುಕ್ತರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರುಗಳ ಹಂತದಲ್ಲಿ ಪರಿಶೀಲಿಸಲಾಗಿದೆ ಮತ್ತು ಅವರ ನಿರ್ಧಾರವಿಲ್ಲದೆ ಈಗಾಗಲೇ ಒದಗಿಸಿದ ಮಾಹಿತಿಯನ್ನು ತಾನು ಪರಿಷ್ಕರಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.

6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಆಯೋಗದ ಕಾರ್ಯದರ್ಶಿಗೆ ಕಳುಹಿಸಲಾದ ದಿನಾಂಕ 29.3.07ರ ತಮ್ಮ ಪತ್ರದ ಮೂಲಕ ಮೇಲಿನ ವಿಷಯಗಳನ್ನು ಆಯೋಗದ ಗಮನಕ್ಕೆ ತಂದಿರುತ್ತಾರೆ. ಉತ್ತರವನ್ನು ದಾಖಲಿಸಲಾಗಿದೆ. ಫಿರ್ಯಾದುದಾರರು ಈ ಪತ್ರ ವ್ಯವಹಾರದ ಪ್ರತಿಯನ್ನು ಕೋರಿದ್ದು, ಅದನ್ನು ಒದಗಿಸಲಾಗಿದೆ.

7. ಫಿರ್ಯಾದುದಾರರು, ನಗರಾಭಿವೃದ್ಧಿ ಇಲಾಖೆಯು ತಳೆದ ಅಭಿಪ್ರಾಯವನ್ನು ಒಪ್ಪಲಿಲ್ಲ. ಅವರ ಪ್ರಕಾರ ಲಘು ಕೈಗಾರಿಕಾ ಪ್ರದೇಶದಲ್ಲಿನ ಯಾವುವೇ ಕಟ್ಟಡಗಳು, ಅಂಗಡಿಗಳು, ಮುಂತಾದವುಗಳನ್ನು ನಿರ್ದಿಷ್ಟ ಕೈಗಾರಿಕೆಯ ಕೆಲಸಗಾರರು/ಉದ್ಯೋಗಿಗಳು ಬಳಸಬೇಕು. ಲಘು ಕೈಗಾರಿಕಾ ವಲಯದಲ್ಲಿ ರಿಯಲ್ ಎಸ್ಟೇಟ್ ಉದ್ದೇಶಗಳಿಗಾಗಿ, ವಾಣಿಜ್ಯ ಕಟ್ಟಡಗಳ ಮತ್ತು ಅಂಗಡಿಗಳಿಗೆ ಅನುಮತಿಸುವುದು ಎಫ್ಎಆರ್ ನಲ್ಲಿನ ಬದಲಾವಣೆಯನ್ನು ಒಳಗೊಂಡು ಹಲವಾರು ಪರಿಣಾಮಗಳನ್ನು ಹೊಂದಿರುವುದರಿಂದ ಅದನ್ನು ಭೂ ಬಳಕೆಯಲ್ಲಿನ ಬದಲಾವಣೆಯೆಂದು ಪರಿಗಣಿಸಬೇಕಾಗುತ್ತದೆ. ವಿವಿಧ ವ್ಯಾಖ್ಯಾನಗಳು ಕೈಗಾರಿಕಾ ಉದ್ದೇಶದ ಬಳಕೆ ಮತ್ತು ವಾಣಿಜ್ಯ ಉದ್ದೇಶದ ಬಳಕೆಯ ನಡುವಿನ ವಿಭಜನ ರೇಖೆಯನ್ನು ಅಳಿಸಿಹಾಕುತ್ತವೆ.

8. ಒಂದು ಸಲ ಭೂ ಬಳಕೆಯಲ್ಲಿ ಬದಲಾವಣೆ ಮಾಡಿಕೊಳ್ಳಲಾಗಿದೆ ಎಂದು ತೀರ್ಮಾನಿಸಿದಲ್ಲಿ, ಬದಲಾವಣೆಗೆ ಅನುಮತಿಸುವ ಅಧಿಕಾರವು ಯೋಜನಾ ಪ್ರಾಧಿಕಾರದಲ್ಲಿ ನಿಹಿತವಾಗುತ್ತದೆ ಮತ್ತು ಈ ಅಧಿಕಾರವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತ್ಯಾಯೋಜಿಸಲಾಗಿರುವುದಿಲ್ಲ. ಆದುದರಿಂದ, ಅವರು ಪ್ರತಿವಾದಿಗಳ ಹಾಗೂ ಸರ್ಕಾರಿ ಪ್ರಾಧಿಕಾರಿಗಳಾಗಿ ತಪ್ಪು ಮಾಹಿತಿ ನೀಡಿರುವರೆಂದು ಅವರುಗಳನ್ನೆಲ್ಲಾ ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿಗಳೆಂಬುದಾಗಿ ಪರಿಗಣಿಸಬೇಕೆಂದು ಮತ್ತು ಮಾಹಿತಿ ಹಕ್ಕು ಅಧಿನಿಯಮ, 2005ರ 20(1)ನೇ ಪ್ರಕರಣದ ಅಡಿಯಲ್ಲಿ ಅವರಿಗೆಲ್ಲಾ ದಂಡವನ್ನು ವಿಧಿಸಬೇಕೆಂದು ಹೇಳಿರುತ್ತಾರೆ.

9. ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಸರ್ಕಾರಿ ಪ್ರಾಧಿಕಾರಿಗಳು ಒದಗಿಸಿದ ಮಾಹಿತಿಯು ತಪ್ಪಾಗಿದೆಯೇ ಮತ್ತು ಮಾಹಿತಿ ಹಕ್ಕು ಅಧಿನಿಯಮ, 2005ರ 20(1)ನೇ ಪ್ರಕರಣದ ಅಡಿಯಲ್ಲಿ ಅವರ ವಿರುದ್ಧ ಕ್ರಮವನ್ನು ಆರಂಭಿಸಬೇಕೇ ಎಂಬುದು ಆಯೋಗದ ಮುಂದಿರುವ ವಿವಾದಾಂಶವಾಗಿದೆ.

10. ತಪ್ಪು ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಸಂಬಂಧಪಟ್ಟವರನ್ನು ದಂಡನೆಗೆ ಗುರಿಪಡಿಸುವ ಅಧಿಕಾರಗಳನ್ನು ಆಯೋಗವು ಹೊಂದಿದ್ದಾಗ್ಯೂ, ಅದು ಸರ್ಕಾರದ ಪರವಾಗಿ ಕಾನೂನನ್ನು ಅರ್ಥೈಸುವ ಜವಾಬ್ದಾರಿಯನ್ನು ತಾನಾಗಿಯೇ ವಹಿಸಿಕೊಳ್ಳಲು ಇಚ್ಛಿಸುವುದಿಲ್ಲ. ಆದರೆ, ಫಿರ್ಯಾದುದಾರರ ಅರಿಕೆಗಳನ್ನು ಪರಿಗಣಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ನಗರಾಭಿವೃದ್ಧಿ ಇಲಾಖೆಗಳು ಮಾಡಿದ ವ್ಯಾಖ್ಯಾನವು ಈ ಮೊಕದ್ದಮೆಯಲ್ಲಿ ಸರಿಯಾಗಿರುವುದೆಂಬುದಾಗಿ ಕಂಡುಬರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ನಗರಾಭಿವೃದ್ಧಿ ಇಲಾಖೆಗಳೆರಡೂ ನಗರ ಯೋಜನಾ ನಿರ್ದೇಶಕರ ಅಭಿಪ್ರಾಯವನ್ನು ಪಡೆಯಲಾಗಿದೆ ಎಂದು ಹೇಳಿದರು. 1995ರ ವಲಯ ರಚನಾ ವಿನಿಯಮಗಳ 2(ಬಿ) ಖಂಡದ ಪ್ರಕಾರ, ಈ ವಲಯ ರಚನಾ ವಿನಿಯಮಗಳ ಉಪಬಂಧಗಳ ವ್ಯಾಖ್ಯಾನದಲ್ಲಿ ಉದ್ಭವಿಸಬಹುದಾದಂಥ ಯಾವುದೇ ಸಂದಿಗ್ಧತೆ ಅಥವಾ ಸಂಶಯದ ಸಂಬಂಧದಲ್ಲಿ ನಗರ ಯೋಜನಾ ನಿರ್ದೇಶಕರ ಅಭಿಪ್ರಾಯವು, ಅಂತಿಮವಾದುದೆಂದು ಸಹ ಗುರುತಿಸಲಾಗಿದೆ.

11. ವ್ಯಾಖ್ಯಾನವು, ವಲಯ ರಚನೆ ವಿನಿಯಮಗಳನ್ನು ಅಷ್ಟೇ ಅಲ್ಲದೆ ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನಾ ಅಧಿನಿಯಮ, 1961ನ್ನು ಸಹ ಒಳಗೊಂಡಿದೆಯೆಂದು ಆಯೋಗವು ಗಮನಿಸಿದೆ. ಮುಂದುವರಿದು, ವಲಯ ರಚನಾ ವಿನಿಯಮಗಳನ್ನು ಸರ್ಕಾರವು ಅನುಮೋದಿಸಿದೆ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಹಾಗೆ, ಪಟ್ಟಣ ಯೋಜನಾ ನಿರ್ದೇಶಕರ ಅಭಿಪ್ರಾಯದ ಮೇಲೆ ಬಂಧನಕಾರಿಯಾಗಿರದೆ ಕಾನೂನು ಇಲಾಖೆಯ ಅಭಿಪ್ರಾಯ ಬಂಧನಕಾರಿಯಾಗಿದೆ.

12. ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಮುಂದುವರಿದು, ಅವರ ಪತ್ರ ದಿನಾಂಕ 29.3.2007ರಲ್ಲಿ ಯಾವುದೇ ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ ಅವರು ಪ್ರಸ್ತಾಪಿಸಬೇಕಾಗಿತ್ತೆಂದು ಹೇಳಿದ್ದು ಆಯೋಗವು ಗಮನಿಸಿದೆ. ವಿವಾದವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ನಗರಾಭಿವೃದ್ಧಿ ಇಲಾಖೆ ಸಮ್ಮತಿಸಿದ ವ್ಯಾಖ್ಯಾನವು ಸರಿಯಾದುದೇ ಆಗಿರುವುದರಿಂದ, ಆಯೋಗವು, ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರಿಗೆ, ಅವರು ತಮ್ಮ ಪತ್ರದಲ್ಲಿ ಒದಗಿಸಿದ ಪ್ರಸ್ತುತ ವ್ಯಾಖ್ಯಾನವು ಕಾನೂನು ಇಲಾಖೆಯ ಸಹಮತಿಯನ್ನು ಪಡೆಯತಕ್ಕದ್ದೆಂದು ಮತ್ತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಫಿರ್ಯಾದುದಾರರಿಗೆ ಅಷ್ಟೇ ಅಲ್ಲದೆ ಆಯೋಗಕ್ಕೆ ತಿಳಿಸುವಂತೆ ಈ ಆದೇಶದ ಪ್ರತಿಯ ಮೂಲಕ ನಿರ್ದೇಶಿಸುತ್ತದೆ.

13. ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸರ್ಕಾರಿ ಪ್ರಾಧಿಕಾರಿಗಳ ವಿರುದ್ಧದ ಕ್ರಮಕ್ಕೆ ಸಂಬಂಧಿಸಿದಂತೆ, ಅವರು ಒದಗಿಸಿದ ಮಾಹಿತಿಯು ದಾಖಲೆಗಳ ಮೇಲೆ ಆಧಾರಿತವಾಗಿರುವುದರಿಂದ ಮತ್ತು ಅವರು ಗ್ರಹಿಸಿದ ಕಾನೂನುಸಮ್ಮತ ವ್ಯಾಖ್ಯಾನವಾಗಿರುವುದರಿಂದ ಮಾಹಿತಿ ಹಕ್ಕು ಅಧಿನಿಯಮ, 2005ರ 20(1)ನೇ ಪ್ರಕರಣದ ಅಡಿಯಲ್ಲಿ ಅವರ ವಿರುದ್ಧ ವ್ಯವಹರಣೆ ನಡೆಸಲು ಇದು ಯುಕ್ತ ಮೊಕದ್ದಮೆಯಲ್ಲವೆಂದು ಆಯೋಗವು ನಿರ್ಧರಿಸಿದೆ.

14. ಫಿರ್ಯಾದುದಾರರು ಕೋರಿದ ಮಾಹಿತಿಯನ್ನು ಒದಗಿಸಿರುವುದರಿಂದ, ಈ ಆದೇಶದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ, ಆದ್ಯತೆ ನೀಡಿದಂತೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಆಯೋಗಕ್ಕೆ ಅಷ್ಟೇ ಅಲ್ಲದೆ ಫಿರ್ಯಾದುದಾರರಿಗೆ ತಿಳಿಸಬೇಕೆಂಬ ನಿರ್ದೇಶನದೊಂದಿಗೆ ದೂರನ್ನು ವಿಲೇ ಮಾಡಲಾಗಿದೆ.

15. ಈ ದಿನ, 2ನೇ ಏಪ್ರಿಲ್, 2007ರಂದು ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿ, ಕರಡನ್ನು ಸರಿಪಡಿಸಿ, ಸಹಿ ಮಾಡಿ ಉಚ್ಚರಿಸಲಾಯಿತು.

**(iv) ಅಧಿನಿಯಮದ 20(1)ನೇ ಪ್ರಕರಣದ ಅಡಿಯಲ್ಲಿ ದಂಡ ವಿಧಿಸುವಿಕೆಯ ಮೇಲಿನ ತೀರ್ಮಾನಗಳು ಮತ್ತು 20(2)ನೇ ಪ್ರಕರಣದ ಅಡಿಯಲ್ಲಿ ಕೈಗೊಳ್ಳಬೇಕಾದ ಶಿಸ್ತು ವ್ಯವಹರಣೆಗಳಿಗಾಗಿ ಶಿಫಾರಸುಗಳು:**

**ಕೆಐಸಿ 1027 ಸಿಒಎಂ 2006**
**ಕರ್ನಾಟಕ ಮಾಹಿತಿ ಆಯೋಗ**
(ಶ್ರೀ ಸಯದ್ ರಫೀಕ್ ಅಹಮದ್ : ವಿರುದ್ಧ : ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)
**ಆದೇಶ**

**16/7/2007**

1. ಫಿರ್ಯಾದುದಾರರು ಹಾಜರಿದ್ದರು. ಪ್ರತಿವಾದಿ ಶ್ರೀ ಎಸ್.ಆರ್. ವೆಂಕಟೇಶ್, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಕೇಂದ್ರ ಕಾರ್ಯಸ್ಥಾನ ಸಹಾಯಕ ಇವರು ಶ್ರೀ ಸುಂದರ್‌ಕಟ್ಟಿ, ಚುನಾವಣಾ ತಹಶೀಲ್ದಾರ್ ಹಾಗೂ ಶ್ರೀ ಹೆಚ್.ಟಿ. ಮಂಜಪ್ಪ, ಕಂದಾಯ ಶಿರಸ್ತೇದಾರ ಇವರೊಂದಿಗೆ ಹಾಜರಿದ್ದರು.

2. ಖಾತಾ ಬದಲಾವಣೆಯಲ್ಲಿನ ಅಕ್ರಮಗಳು ಮತ್ತೂ ಅಲ್ಲದೆ ಖಾತಾ ಬದಲಾವಣೆಗೆ ಸಂಬಂಧಪಟ್ಟಂತೆ ದಾಖಲೆಗಳ ನಾಶದ ಬಗ್ಗೆ ಆಯೋಗದ ನಿರ್ದೇಶನಗಳಿಗನುಸಾರವಾಗಿ ವಿಚಾರಣೆಯನ್ನು ನಡೆಸಲಾಗಿದೆ ಎಂದು ಪ್ರತಿವಾದಿಯು ಹೇಳಿದರು. ಅಷ್ಟೇ ಅಲ್ಲದೆ, ಆತನು, ವಿಚಾರಣೆಯ ಅವಧಿಯಲ್ಲಿ ಸಂಬಂಧಪಟ್ಟ ಗ್ರಾಮ ಲೆಕ್ಕಿಗ ಎಂದರೆ, ಶ್ರೀ ಶ್ರೀರಾಮ್ ಉಪ ವಿಭಾಗಾಧಿಕಾರಿಯವರ ಆದೇಶವನ್ನು ಉಲ್ಲೇಖಿಸಿ ಖಾತೆಯನ್ನು ಬದಲಾವಣೆ ಮಾಡಿದ್ದಾನೆಂದು, ಆದರೆ, ದಿನಾಂಕವನ್ನು 14.7.2005ರ ಬದಲಾಗಿ 14.5.2005 ಎಂದು ತಪ್ಪಾಗಿ ನಮೂದಿಸಿದ್ದಾನೆಂದು ಹೇಳಿದ್ದಾನೆ.

3. ಪ್ರತಿವಾದಿಯು ಮುಂದುವರಿದು ಹೇಳುತ್ತಾ ಖಾತೆ ಬದಲಾವಣೆಗೆ ಸಂಬಂಧಿಸಿದ ಕಡತ ಸಹ ಕಳೆದುಹೋಗಿದೆ ಮತ್ತು ಆಂತರಿಕ ವಿಚಾರಣೆಯ ಮೇರೆಗೆ, ಗ್ರಾಮ ಲೆಕ್ಕಿಗ ಶ್ರೀ ಶ್ರೀರಾಮ್, ಕೆಂಗೇರಿ ಸರ್ಕಲ್ ಈತನು ದಾಖಲೆಯು ಕಳೆದು ಹೋಗಿರುವುದಕ್ಕೆ ಜವಾಬ್ದಾರಿ ಎಂದು ಕಂಡುಬಂದಿದೆಯೆಂದು ಹೇಳಿದ್ದಾನೆ. ಆತನು, ದಾಖಲೆ ಕಳೆದುಹೋದ ಕುರಿತಾಗಿ ಪೊಲೀಸರಿಗೆ ದೂರನ್ನು ದಾಖಲು ಮಾಡಲಾಗಿದೆಯೆಂದು ಸಹ ಹೇಳಿದ್ದಾನೆ. ಆದಾಗ್ಯೂ, ಸಂಬಂಧಪಟ್ಟ ಆಪಾದಿತ ಸರ್ಕಾರಿ, ಅಧಿಕಾರಿ (ಎಜಿಎಂ)ಯನ್ನು ಆ ದೂರಿನಲ್ಲಿ ಪಕ್ಷಕಾರನಾಗಿ ಹೇಳಿರುವುದಿಲ್ಲ.

4. ಈ ಆದೇಶದ ಪ್ರತಿಯ ಮೂಲಕ, ಆಯೋಗವು, ದಾಖಲೆಯನ್ನು ಕಳೆದುಕೊಂಡ ಬಗ್ಗೆ ಮಾಹಿತಿಯನ್ನು ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವುದಕ್ಕಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಗಮನಕ್ಕೆ ತಂದಿದೆ. ಆಂತರಿಕ ವಿಚಾರಣೆಯ ಮೇರೆಗೆ ಗ್ರಾಮ ಲೆಕ್ಕಿಗ ಶ್ರೀ ಶ್ರೀರಾಮ್, ಕೆಂಗೇರಿ ಸರ್ಕಲ್ ಇವರು ದಾಖಲೆಯು ಕಳೆದು ಹೋಗಿರುವುದಕ್ಕೆ ಜವಾಬ್ದಾರ ನಾಗಿದ್ದಾನೆಂದು ಕಂಡು ಬಂದಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಆಪಾದಿತ ಸರ್ಕಾರಿ ನೌಕರನ ಹೆಸರನ್ನು ಪೊಲೀಸ್ ದೂರಿನಲ್ಲಿ ನಮೂದಿಸತಕ್ಕದ್ದು ಮತ್ತು ದಾಖಲೆಯನ್ನು ಕಳೆದುಕೊಂಡ ವಿಷಯದಲ್ಲಿ ಆತನ ವಿರುದ್ಧ ಇಲಾಖಾ ವಿಚಾರಣೆಯನ್ನು ಸಹ ಪ್ರಾರಂಭಿಸತಕ್ಕದ್ದು ಎಂದು ಆಯೋಗವು ಅಭಿಪ್ರಾಯಪಟ್ಟಿದೆ.

5. ಆಯೋಗದ ಸೂಚನೆ ಮೇರೆಗೆ ತಲುಪೊಪ್ಪಿಗೆ ನೋಂದಾಯಿತ ಅಂಚೆ ಮುಖಾಂತರವಾಗಿ ಉಚಿತವಾಗಿ 10 ದಿನಗಳೊಳಗೆ ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಪೊಲೀಸ್ ದೂರನ್ನು ದಾಖಲು ಮಾಡುವುದಕ್ಕೆ ಮತ್ತು ಇಲಾಖಾ ವಿಚಾರಣೆಯನ್ನು ಪ್ರಾರಂಭಿಸುವುದಕ್ಕೆ ತೆಗೆದುಕೊಳ್ಳಲಾದ ಕ್ರಮವೂ ಸೇರಿದಂತೆ ಮೇಲಿನ ಸಂಗತಿಗಳ ಬಗ್ಗೆ ಫಿರ್ಯಾದಿಗೆ ಹೆಚ್ಚಿನ ವಿವರಗಳನ್ನು ನೀಡಲು ಮಾಹಿತಿಯನ್ನು ಒದಗಿಸಬೇಕೆಂದು ಸಹ ಪ್ರತಿವಾದಿಗೆ ನಿರ್ದೇಶನ ನೀಡಲಾಗಿದೆ.

6. ನಿಯಮಿಸಲಾದ ಕಾರ್ಯವಿಧಾನವನ್ನನುಸರಿಸಿ ಸಂಬಂಧಿಸಿದ ಹಕ್ಕು ದಾಖಲೆ ರಿಜಿಸ್ಟರ್‌ನಲ್ಲಿ ಉಪ ವಿಭಾಗಾಧಿಕಾರಿಯವರ ಆದೇಶಗಳ ಸರಿಯಾದ ದಿನಾಂಕವನ್ನು ಸೇರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಪ್ರತಿವಾದಿಯು ವಚನಬದ್ಧರಾಗಿದ್ದಾರೆ.

7. ಪ್ರತಿವಾದಿಯು ಸಕಾಲದಲ್ಲಿ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಿಲ್ಲವೆಂದು ಫಿರ್ಯಾದಿಯು ಹೇಳಿಕೆ ನೀಡಿದ್ದಾನೆ. ಆದ್ದರಿಂದ, ಆತನು, ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆಗಾಗಿ ಮಾಡಿದ ಪ್ರಸ್ತಾವದ ವಿರುದ್ಧ ತನ್ನ ಆಕ್ಷೇಪಣೆಗಳನ್ನು ದಾಖಲು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಪ್ರತಿವಾದಿಯು ತನಗಾದ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದೆಂದು ಮತ್ತು ಪ್ರತಿವಾದಿಯ ಮೇಲೆ ದಂಡನೆಯನ್ನು ವಿಧಿಸತಕ್ಕದ್ದೆಂದು ಫಿರ್ಯಾದಿಯು ಕೋರಿಕೊಂಡಿದ್ದಾನೆ.

8. ದಾಖಲೆಗಳನ್ನು ಪರಿಶೀಲಿಸಿದ ತರುವಾಯ, ಫಿರ್ಯಾದಿಯು, "ಕಡತ ಸಂಖ್ಯೆ: ಪಿ 2–244876ಕ್ಕೆ ಸಂಬಂಧಿಸಿದಂತೆ ನಡೆಸಲಾದ ಎಲ್ಲಾ ಪತ್ರ ವ್ಯವಹಾರಗಳ" ಸಂಬಂಧದಲ್ಲಿ ಪ್ರಮಾಣಿತ ಪ್ರತಿಗಳನ್ನು ಕೋರಿ ಉಪ ಕಾರ್ಯದರ್ಶಿ ಮತ್ತು ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ (ಸಿಪಿಐಓ), ರಾಷ್ಟ್ರಪತಿಗಳ ಸಚಿವಾಲಯ ಇವರಿಗೆ ಮಾಹಿತಿ ಹಕ್ಕು ಅಧಿನಿಯಮ, 2005ರ ಅಡಿಯಲ್ಲಿ ಮಾಹಿತಿಯನ್ನು ಕೋರಿ ತನ್ನ ಮೊದಲ ಕೋರಿಕೆ ಪತ್ರವನ್ನು ಸಲ್ಲಿಸಿದ್ದಾನೆಂದು ಆಯೋಗಕ್ಕೆ ತಿಳಿದುಬಂದಿದೆ. ಪ್ರತ್ಯುತ್ತರವಾಗಿ, ರಾಷ್ಟ್ರಪತಿಗಳ ಕಚೇರಿಯು, ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಕೋರಿಕೆದಾರನ ಕೋರಿಕೆ ಪತ್ರವನ್ನು ಕಳುಹಿಸಲಾಗಿದೆ ಎಂದು ತಿಳಿಸಿದೆ.

9. ಕರ್ನಾಟಕ ಸರ್ಕಾರವು, ತರುವಾಯ ಕೈಗೊಂಡ ಕ್ರಮವು ರಾಷ್ಟ್ರಪತಿ ಕಚೇರಿಯು ಕಳುಹಿಸಿದ ಆತನ ಕೋರಿಕೆ ಪತ್ರಕ್ಕನುಸಾರವಾಗಿದೆ ಮತ್ತು ಮಾಹಿತಿ ಹಕ್ಕು ಅಧಿನಿಯಮ, 2005ರ ಅಡಿಯಲ್ಲಿ ಈತ ಸಲ್ಲಿಸಿದ ಅರ್ಜಿಗೆ ಅನುಸಾರವಾಗಿ ಅಲ್ಲ. ಈ ಕಾರಣದಿಂದಾಗಿ, ಅಧಿನಿಯಮದ ಅಡಿಯಲ್ಲಿ ದಂಡನೆ ವಿಧಿಸುವುದಕ್ಕೆ ಮತ್ತು ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳಲು ಅನುಮತಿಸುವುದು ಸಾಧ್ಯವಿಲ್ಲ.

10. ಆತನ ಅಹವಾಲನ್ನು ಪರಿಹರಿಸುವಲ್ಲಿ ವಿಳಂಬವಾಗಿರುವುದೇನೋ ನಿಜ. ಪ್ರತಿವಾದಿಯು ಸಾಮಾನ್ಯವಾಗಿ ಸಾರ್ವಜನಿಕ ಕುಂದು–ಕೊರತೆಗಳ ಅಹವಾಲುಗಳ ಬಗ್ಗೆ ವಿಶೇಷವಾಗಿ ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಸಲ್ಲಿಸಿದ ಮಾಹಿತಿಗೆ ಕೋರುವ ಅರ್ಜಿಗಳ ಬಗ್ಗೆ ವ್ಯವಹರಿಸುವಲ್ಲಿ ಜಾಗರೂಕನಾಗಿರಬೇಕೆಂದು ಮತ್ತು ಸಕಾಲದಲ್ಲಿ ಉತ್ತರ ನೀಡಬೇಕೆಂದು ನಿರ್ದೇಶಿಸಿದೆ. ಆದಾಗ್ಯೂ, ಈ ಹಿಂದೆ ಹೇಳಿದ ಕಾರಣಗಳಿಗಾಗಿ, ಈ ಪ್ರಕರಣದಲ್ಲಿ ದಂಡನೆ ವಿಧಿಸುವುದಕ್ಕೆ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗಿಲ್ಲ.

11. ಮೇಲಿನ ನಿರ್ದೇಶನಗಳನ್ನು ಪಾಲಿಸಿರುವ ಹಿನ್ನಲೆಯಲ್ಲಿ ಮತ್ತು ಮೇಲ್ಕಂಡ ನಿರ್ದೇಶನಗಳ ಚೌಕಟ್ಟಿನಲ್ಲಿ ದೂರು ಇತ್ಯರ್ಥವಾಗಿದೆ ಎಂದು ವಿಲೆ ಮಾಡಲಾಗಿದೆ.

12. ಇದೇ ಜುಲೈ, 2007ರ 16ನೇ ದಿನದಂದು, ಉಕ್ತಲೇಖನ ನೀಡಿ, ಕರಡನ್ನು ತಿದ್ದಿ, ಸಹಿ ಮಾಡಿ ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಗಿದೆ.

**(ಎ) ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದರ ವಿರುದ್ಧ ಇಲಾಖಾ ವಿಚಾರಣೆ :**

**ಕೆಐಸಿ 1169 ಸಿಓಎಂ 2007**

**ಕರ್ನಾಟಕ ಮಾಹಿತಿ ಆಯೋಗ**

(ಶ್ರೀ ಕೃಷ್ಣಪ್ಪ ಹೊಸಮನಿ ವಿರುದ್ಧ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ತಹಶೀಲ್ದಾರರು, ಬೆಂಗಳೂರು ದಕ್ಷಿಣ, ಹಾಗೂ ಇತರರು)

**ಆದೇಶ**

**22/5/2007**

1. ಶ್ರೀಮತಿ ಜಯಶ್ರೀ ಮತ್ತು ಶ್ರೀ ಮೃತ್ಯುಂಜಯ ಇವರು ಫಿರ್ಯಾದಿಗಳು. ಶ್ರೀ ಡಿ. ರಂಗಯ್ಯ, ಪ್ರಥಮ ದರ್ಜೆ ಸಹಾಯಕ, ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ; ಶ್ರೀ ಜಗನ್, ದ್ವಿತೀಯ ದರ್ಜೆ ಸಹಾಯಕ, ವಿಭಾಗಾಧಿಕಾರಿಗಳ ಕಚೇರಿ, ಬೆಂಗಳೂರು ದಕ್ಷಿಣ; ಮತ್ತು ಶ್ರೀ ನಾರಾಯಣಪ್ಪ, ದ್ವಿತೀಯ ದರ್ಜೆ ಸಹಾಯಕ, ತಹಶೀಲ್ದಾರರ ಕಚೇರಿ, ಬೆಂಗಳೂರು ದಕ್ಷಿಣ ಇವರು ಪ್ರತಿವಾದಿಗಳು.

2. ಫಿರ್ಯಾದಿಯು, 30.10.2006 ಮತ್ತು 4.10.2006ರ ದಿನಾಂಕಗಳಂದು ಮಾಹಿತಿಯನ್ನು ಕೋರಿ ಒಂದೇ ರೀತಿಯ ಕೋರಿಕೆ ಪತ್ರಗಳನ್ನು ಸಲ್ಲಿಸಿದ್ದಾರೆ. ಅದನ್ನು 1954–55 ಮೊದಲಾದ ವರ್ಷಾವಧಿಯಲ್ಲಿ ದೊಡ್ಡ ಕಲ್ಲಸಂದ್ರ, ಬೆಂಗಳೂರು ದಕ್ಷಿಣ ತಾಲ್ಲೂಕಿನ 15 ಮತ್ತು 17ನೇ ಸರ್ವೇ ನಂಬರುಗಳಲ್ಲಿ ಶ್ರೀಮತಿ ಲಕ್ಷ್ಮಮ್ಮ, ಶ್ರೀಮತಿ ಶಿವಲಿಂಗಮ್ಮ ಮತ್ತು ಶ್ರೀ ಕೃಷ್ಣಮೂರ್ತಿ ಇವರುಗಳ ಪರವಾಗಿ ಮಂಜೂರಾತಿ ಆದೇಶದ ಪ್ರತಿಗಳೂ ಸೇರಿದಂತೆ 27 ಬಾಬುಗಳ ಮೇಲೆ ಒಂದೇ ರೀತಿಯ ಮಾಹಿತಿಯನ್ನು ಕೋರಿ ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು, ಉಪ ವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ ಮತ್ತು ತಹಶೀಲ್ದಾರರು, ಬೆಂಗಳೂರು ದಕ್ಷಿಣ ತಾಲ್ಲೂಕು ಇವರಿಗೆ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ, ವಿಶೇಷ ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ–ವಿಭಾಗ ಮತ್ತು ತಹಶೀಲ್ದಾರರು, ಬೆಂಗಳೂರು ದಕ್ಷಿಣ ತಾಲ್ಲೂಕು ಇವರುಗಳೊಂದಿಗೆ ವ್ಯವಹರಿಸಿ ಮಾಹಿತಿಯನ್ನು ಪಡೆಯುವುದಕ್ಕೆ ಫಿರ್ಯಾದಿಗೆ ಸೂಚನೆ ನೀಡಿ ದಿನಾಂಕ 13.11.2006ರಂದು ಒಂದು ಹಿಂಬರಹವನ್ನು ಕೊಟ್ಟಿರುತ್ತಾರೆ. ಪುನಃ ತಹಶೀಲ್ದಾರರು, ಬೆಂಗಳೂರು ದಕ್ಷಿಣ ಇವರಿಗೆ ಉಪ–ವಿಭಾಗಾಧಿಕಾರಿಗಳು ಕಳುಹಿಸಿದ ತಮ್ಮ ಪತ್ರದಲ್ಲಿ ಫಿರ್ಯಾದಿಗೆ ಮಾಹಿತಿಯನ್ನು ಒದಗಿಸಬೇಕೆಂದು ತಹಶೀಲ್ದಾರರನ್ನು ಕೇಳಿದ್ದಾರೆ. ತಹಶೀಲ್ದಾರರು, ಫಿರ್ಯಾದಿಗೆ ಕಳುಹಿಸಿದ ದಿನಾಂಕ 6.11.2006ರ ತಮ್ಮ ಮಾಹಿತಿ ಪತ್ರದಲ್ಲಿ ಫಿರ್ಯಾದಿಯು ಅಪೇಕ್ಷಿಸಿದಂತೆ ಆಕಾರ್‌ಬಂದ್‌ನ ಪ್ರತಿಯನ್ನು ಒದಗಿಸಿದ್ದಾರೆ. ಮತ್ತೆ, ವಿಶೇಷ ಜಿಲ್ಲಾಧಿಕಾರಿಗಳು, ದಿನಾಂಕ 18.5.2007ರಂದು 11, 26 ಮತ್ತು 27ನೇ ನಂಬರುಗಳ ಬಾಬಿನ ಬಗ್ಗೆ ಕೆಲವು ಮಾಹಿತಿಯನ್ನು ಸಹ ಒದಗಿಸಿದ್ದಾರೆ.

3. ಆದಾಗ್ಯೂ, ತಹಶೀಲ್ದಾರರು, ದಿನಾಂಕ 21.5.2007ರ ತಮ್ಮ ವರದಿಯಲ್ಲಿ, ದೊಡ್ಡ ಕಲ್ಲಸಂದ್ರ ಗ್ರಾಮದ 15 ಮತ್ತು 17ನೇ ಸರ್ವೇ ನಂಬರುಗಳ ಭೂಮಿಯ ಮಂಜೂರಾತಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ

ಭೂ ಮಂಜೂರಾತಿ ದಾಖಲೆಯು ಲಭ್ಯವಿಲ್ಲವೆಂದೂ, ಈ ಕಾರಣದಿಂದಾಗಿ, 1, 2, 3 ಮತ್ತು 4ನೇ ನಂಬರುಗಳ ಬಾಬಿನ ಬಗ್ಗೆ ಅಪೇಕ್ಷಿತ ಮಾಹಿತಿಯನ್ನು ಒದಗಿಸಲು ಸಾಧ್ಯವಾಗಲಿಲ್ಲವೆಂದು ತಿಳಿಸಿದ್ದಾರೆ. ಪುನಃ, ತಹಶೀಲ್ದಾರರು, ಸಾಗುವಳಿ ರಿಜಿಸ್ಟರಿನಲ್ಲಿ ಲಭ್ಯವಾದ ಒಂದು ಪ್ರತಿಯನ್ನು ಮತ್ತು 1, 2 ಮತ್ತು 3ನೇ ನಂಬರುಗಳ ಬಾಬಿನ ಸಂಬಂಧದಲ್ಲಿ ಸಾಗುವಳಿ ಚೀಟಿ ರಿಜಿಸ್ಟರಿನ ಉದ್ಧೃತ ಭಾಗಗಳನ್ನು ಹಾಗೂ 4ನೇ ನಂಬರಿನ ಬಾಬಿಗೆ ಸಂಬಂಧಪಟ್ಟ ಮಾಹಿತಿಯನ್ನು ಸಹ ಒದಗಿಸಲಾಗಿದೆಯೆಂದು ತಿಳಿಸಿದ್ದಾರೆ. ಮುಂದುವರೆದು, ಪ್ರತಿವಾದಿ ಶ್ರೀ ನಾರಾಯಣಪ್ಪ ಇವರು 1969ರ ಮುಂದಿನ ವರ್ಷಕ್ಕೆ ಸಂಬಂಧಪಟ್ಟ ಗ್ರಾಮದ 15, 17, ಹೊಸ ಸಂಖ್ಯೆ 17/ಪಿ2 ಸರ್ವೇ ನಂಬರುಗಳಲ್ಲಿ ಭೂಮಿಯ ಸಂಬಂಧವಾಗಿರುವ ಪಹಣಿ (ಆರ್‌ಟಿಸಿ) ಪ್ರತಿಗಳನ್ನು ತಂದಿದ್ದಾರೆ ಮತ್ತು ಅದನ್ನು, ದಿನಾಂಕ 4.6.2005ರ ತಹಶೀಲ್ದಾರರ ವರದಿಯ ಪ್ರತಿಯ ಜೊತೆ, 10ನೇ ನಂಬರಿನ ಬಾಬಿನಲ್ಲಿ ಕೋರಲಾದ ಪ್ರತಿಯನ್ನು ಸೇರಿಸಿ ಸ್ಥಳದಲ್ಲಿದ್ದ ಫಿರ್ಯಾದಿಗೆ ಹಸ್ತಾಂತರಿಸಿದ್ದಾರೆ. ಫಿರ್ಯಾದಿಗೆ 7 ದಿನಗಳೊಳಗೆ ಉಚಿತವಾಗಿ 6, 7, 8 ಮತ್ತು 9ನೇ ನಂಬರುಗಳ ಬಾಬಿನ ಮೇಲೆ ಮಾಹಿತಿಯನ್ನು ಒದಗಿಸುವುದಾಗಿ ಶ್ರೀ ನಾರಾಯಣಪ್ಪ ವಚನಬದ್ಧರಾಗಿದ್ದಾರೆ.

4. 11ರಿಂದ 27ನೇ ನಂಬರುಗಳ ಬಾಬಿನಲ್ಲಿ ಕೇಳಿದ ಮಾಹಿತಿಯ ಸಂಬಂಧದಲ್ಲಿ ಭೂ ಮಂಜೂರಾತಿಯ ರದ್ಧತಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸುವುದಕ್ಕೆ ಇದು ಸಂಬಂಧಪಟ್ಟಿದೆ. ಇಲಾಖೆಯು ವಿಚಾರಣೆಯನ್ನು ಕೈಗೊಂಡ ತರುವಾಯ, ನಿಜವಾಗಿ ಭೂ ಮಂಜೂರಾತಿ ಆಗಿಲ್ಲ ಎಂದು ಇಲಾಖೆಗೆ ಗೊತ್ತಾಗಿದೆ. ಪ್ರತಿವಾದಿಯಾದ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಇವರು ಈಗಾಗಲೇ 11, 26 ಮತ್ತು 27ನೇ ನಂಬರುಗಳ ಬಾಬಿನ ಬಗ್ಗೆ ಮಾಹಿತಿಯನ್ನು ಒದಗಿಸಿದ್ದಾರೆ.

5. ಆದಾಗ್ಯೂ ಆಯೋಗವು, 11ರಿಂದ 27ನೇ ನಂಬರುಗಳ ಬಾಬುಗಳು ಕಂದಾಯ ದಾಖಲೆಗಳಲ್ಲಿನ ಸುಳ್ಳು ನಮೂದುಗಳ ವಿರುದ್ಧ ಕಂದಾಯ ಇಲಾಖೆಯು ಪ್ರಾರಂಭಿಸಿದ ವಿಚಾರಣೆಗೆ ಮತ್ತು ತರುವಾಯದ ಪರಿಣಾಮವನ್ನು ಕುರಿತು ಮಾಹಿತಿ ಎಂಬುದನ್ನು ಗಮನಿಸಿದೆ. ಆದ್ದರಿಂದ, ಆಯೋಗವು, ಫಿರ್ಯಾದುದರನಿಗೆ 30 ದಿನಗಳೊಳಗೆ ಉಚಿತವಾಗಿ ವಿಶೇಷ ಜಿಲ್ಲಾಧಿಕಾರಿಗಳಿಗೆ ಮೇಲ್ಕಂಡ ಎಲ್ಲ ಅಂಶಗಳನ್ನು ಪರಿಶೀಲಿಸಿ ನೋಡಿ ಕಂದಾಯ ದಾಖಲೆಗಳಲ್ಲಿ ಮಾಡಲಾದ ಸುಳ್ಳು ನಮೂದುಗಳ ವಿರುದ್ಧ ಕ್ರಮ ತೆಗೆದುಕೊಂಡ ಬಗ್ಗೆ ಮತ್ತು ತರುವಾಯದ ಪರಿಣಾಮದ ಬಗ್ಗೆ ತಿಳಿಸಿ ಸೂಕ್ತ ಮಾಹಿತಿಯನ್ನು ನೀಡಬೇಕೆಂದು ನಿರ್ದೇಶಿಸಿದೆ. ಆಯೋಗದ ಮೇಲಿನ ನಿರ್ದೇಶನಗಳನ್ನು ಪಾಲಿಸಲು ಪ್ರತಿವಾದಿಯು ವಚನಬದ್ಧರಾಗಿದ್ದಾರೆ.

6. 1, 2 ಮತ್ತು 3ನೇ ನಂಬರುಗಳ ಬಾಬಿನ ಸಂಬಂಧದಲ್ಲಿ, ಪ್ರತಿವಾದಿಯು, ಪ್ರಶ್ನಿತ ಭೂ ಮಂಜೂರಾತಿಯೇ ವಿವಾದಗ್ರಸ್ತವಾಗಿರುವಾಗ, ತಾಲ್ಲೂಕು ಕಚೇರಿಯಲ್ಲಾಗಲೀ ಅಥವಾ ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಾಗಲೀ ಅಥವಾ ಜಿಲ್ಲಾಧಿಕಾರಿಗಳ ಕಚೇರಿಯಲ್ಲಾಗಲೀ ಯಾವುದೇ ದಾಖಲೆಗಳು ಇಲ್ಲದಿರಬಹುದೆಂದು ಹೇಳಿದ್ದಾನೆ. ಆದ್ದರಿಂದ, ಪ್ರತಿವಾದಿಯು, ಈ ಸಂಬಂಧದಲ್ಲಿ ಯುಕ್ತ ಪರಿಶೀಲನೆಯ ತರುವಾಯ ಸೂಕ್ತ ಹಿಂಬರಹವನ್ನು ಫಿರ್ಯಾದಿಗೆ ಕೊಡಲಾಗುವುದೆಂದು ತಿಳಿಸಿದ್ದಾರೆ. ಪ್ರತಿವಾದಿಯು, ತಾನು ಕೂಲಂಕುಷ ಶೋಧನೆ ಮಾಡುವುದಾಗಿ ಮತ್ತು ದಾಖಲೆಗಳು ಪತ್ತೆಯಾದರೆ ಸಂಬಂಧಪಟ್ಟ ಮಾಹಿತಿಯನ್ನು, ಫಿರ್ಯಾದುದಾರನಿಗೆ ಉಚಿತವಾಗಿ ತಲುಪೊಪ್ಪಿಗೆ ನೋಂದಾಯಿತ ಅಂಚೆ ಮುಖಾಂತರವಾಗಿ ಒದಗಿಸಲಾಗುವುದೆಂದೂ, ದಾಖಲೆಗಳು ಪತ್ತೆ ಆಗದಿದ್ದರೆ ಒಂದು ಸೂಕ್ತ ಹಿಂಬರಹವನ್ನು ಈ ಸಂಬಂಧದಲ್ಲಿ ಫಿರ್ಯಾದುದಾನಿಗೆ ಕೊಡಲಾಗುವುದೆಂದೂ ವಚನ ನೀಡಿದ್ದಾರೆ.

7. ಮೇಲೆ ಹೇಳಿದಂತೆ ಕಾರ್ಯಪಾಲಿಸಿರುವುದರಿಂದ ನೀಡಲಾದ ವಚನಬದ್ಧತೆ ಮತ್ತು ನಿರ್ದೇಶನಗಳ ಹಿನ್ನಲೆಯಲ್ಲಿ ದೂರನ್ನು ಇತ್ಯರ್ಥಪಡಿಸಲಾಗಿದೆ ಎಂದು ವಿಲೆ ಮಾಡಲಾಗಿದೆ.

8. ಇದೇ ಮೇ 2007ರ 22ನೇ ದಿನದಂದು, ಉ0ಕ್ತಲೇಖನ ನೀಡಿ, ಕರಡನ್ನು ತಿದ್ದಿ, ಸಹಿ ಮಾಡಿ, ಮತ್ತು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

0–0–0–0–0–0